WPP-47

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಜುಲೈ ೧೯, ೨೦೧೨ (ಆಷಾಢ ೨೮, ಶಕ ವರ್ಷ ೧೯೩೪)	ಸಂಚಿಕೆ ೨೯

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

WATER RESOURCES SECRETARIAT

Sub: Constitution of State Level Committee for re-estimation of Ground Water Resources – Estimation of Annual Replenishable Ground water Resources-reg.-

Read: Letter No. 3/10/2011-GW, dated 15-02-2012 of the joint secretary Government of India, ministry of Water resources, Shram Shakti Bhawan, Rafi Marg, New Delhi.

Preamble:

The Joint secretary, Government of India, ministry of Water Resources, Shram Shakti Bhawan, Rafi Marg, New Delhi in letter read above has informed that the last assessment of State-wise Annual Replenishable Ground Water Resources for the entire country was made in the year 2009 based on the Methodology adopted by the Ground Water Resources Estimation Committee-1997. Since then, changes in ground water scenario in many parts of the country is observed. The National Water Policy, 2002 has also recommended that the ground water resources of the country should be re-assessed periodically. With a view to re-estimate the Ground Water Resources as on 31st March 2011 to estimate annual replenishable Ground Water Resources of Karnataka State it is requested to constitute the State Level Committee in accordance with the Ground Water Resources Estimation Methodology.

Hence the following Order

Government Order No. MID 5 AaJaAa 2012, Bangalore, dated 25-05-2012

In view of the above, Government is pleased to re-constitute the State Level Committee for re-estimation of Ground Water Resources with the composition of following members with immediate effect and until further Orders:

1)	Secretary to Government, Water Resources Department (Minor Irrigation)	…	Chairman
2)	Chief Engineer, Minor Irrigation South Zone, Bangalore	…	Member
3)	Chief Engineer, Minor Irrigation North Zone, Bijapur	…	Member
4)	Director, Mines & Geology Department (Ground Water)	…	Member
5)	Chief Engineer, Karnataka Urban Water Supply and Drainage Board	…	Member
6)	Director, Department of Agriculture	…	Member
7)	Chief Engineer, Water Resources Development Organization	…	Member
8)	Chief Engineer, Rural Development Engineering Department	…	Member
9)	Commissioner/Director for Department of Industries	…	Member
10)	General Manager, NABARD	…	Member
11)	Regional Director, Central Ground Water Board, Government of India, Bangalore	…	Member Secretary

The committee may co-opt any other member(s)/special invitee(s) if necessary.

2. Terms of Reference: The broad terms of reference of the Committee would be as follows:

i) To estimate annual replenishable Ground Water Resources of Karnataka State in accordance with the Ground Water Resources Estimation Methodology;

ii) To estimate the status of utilization of annual replenishable ground water resource.

3. Time Frame: The Committee shall submit its report at the earliest from the date of its constitution.

4. Expenditure: Expenditure on account of TA/DA to official Members of the Committee will be met from the source from which they draw their salaries.

By Order and in the name of the Governor of Karnataka

K. C Siddappa

Under Secretary to Government

P.R. 1570 Water Resources Department (Minor Irrigation)

INFRASTRUCTURE DEVELOPMENT SECRETARIAT

Sub: Release of Funds to M/s Deloitte Touche Tohmatsu India Pvt., Ltd., to Carryout the Consultancy Services for "Institutional Strengthening & Sector Specific Inventory for PPP Mainstreaming" for Public Works Department.

Read:
1. Letter No. IDD 104 ITS 2011, dated 19-01-2012
2. Letter No. Nil dated 23-03-2012 from Senior Director, M/s Deloitte Touche tohmatsu India Pvt. Ltd., Bangalore.
3. U.O. Note No. PWD/6/EAP/2012, dated 16-04-2012 from Additional Secretary to Government Public Works, Ports & Inland Water Transport Department.

Preamble:

In the letter read at (1) above, IDD has awarded the task of Consultancy Services for "Institutional Strengthening and Sector Specific Inventory of PPP Mainstreaming" for Public Works Department to M/s Deloitte Touche Tohmatsu India Pvt. Ltd., for which IDD would pay an amount of Rs. 45,00,000/- (inclusive of taxes) as per the payment schedule in the RFP.

In the letter read at (2) above, Senior Director, Deloittee Touche Tohmatsu India Pvt., Ltd., has submitted a Invoice vide No. 2360001970 dated 23-03-2012 of Rs. 2,24,999.87/- towards the submission of Inception Report and requested to make early payment.

In the letter read at (3) above, Additional Secretary to Government Public Works, Ports & Inland Water Transport Department has informed that the sectors identified in the inception report is acceptable to the Department.

Hence the following Order

Government Order No. ID 40 ITS 2012, Bangalore, dated 01-06-2012

Under the circumstances explained in the preamble, Government is pleased to accord sanction to release Rs. 2,25,000/- (Rupees two lakhs twenty five thousand only) (for submission of inception report) to M/s. Deloitte Touche Tohmatsu India Pvt., Ltd., payable at new Delhi towards providing consultancy services for "Institutional Strengthening and Sector Specific Inventory for PPP Mainstreaming" for Public Works Department.

The expenditure shall be met out under the Budget Head 3451-00-090-1-06-059 Infrastructure Preliminary Studies other expenditure (Plan) 2012-13.

The Senior Director, M/s. Deloitte Touche Tohmatsu India Pvt. Ltd., is authorized to draw the amount on a Payees Receipt duly countersigned by the Under Secretary to Government, Infrastructure Development Department from the State Huzoor Treasury, Bangalore.

This Order is issued in accordance with the delegation of financial powers to Principal Secretary/Secretary to Govt., vide G.O. No. FD 1 TFP 2008, dated 16-05-2008.

By Order and in the name of the Governor of Karnataka

R. Shivalingaiah

Under Secretary to Government (PPP Cell),

P.R. 1571 Infrastructure Development Department

ಕಂದಾಯ ಸಚಿವಾಲಯ

ವಿಷಯ: ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕು, ಅಂಚಟಗೇರಿಯಲ್ಲಿ ಲಾಜಿಸ್ಟಿಕ್ ಪಾರ್ಕ್/ಟ್ರಕ್ ಟರ್ಮಿನಲ್ ನಿರ್ಮಿಸಲು ಜಮೀನು ನೀಡುವ ಬಗ್ಗೆ.–

ಓದಲಾಗಿದೆ: 1) ಜಿಲ್ಲಾಧಿಕಾರಿ, ಧಾರವಾಡ ಇವರ ಪತ್ರ ಸಂಖ್ಯೆ: ಎಲ್ ಜಿ ಎಲ್ ಸಿಆರ್/5/2011–12, ದಿನಾಂಕ 25–2–2012.

2) ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿ., ಬೆಂಗಳೂರು ಪತ್ರ ಸಂಖ್ಯೆ: ಡಿಡಿಯುಟಿಟಿಎಲ್/ಹುಬ್ಬಳ್ಳಿ/74/2011–12/515, ದಿನಾಂಕ 27–3–2012.

ಪ್ರಸ್ತಾವನೆ:

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕು, ಅಂಚಟಗೇರಿ ಗ್ರಾಮದಲ್ಲಿ ಲಾಜಿಸ್ಟಿಕ್ ಪಾರ್ಕ್ ಟ್ರಕ್ ಟರ್ಮಿನಲ್ ನಿರ್ಮಿಸುವ ಸಲುವಾಗಿ 56–13 ಎಕರೆ ವಿಸ್ತೀರ್ಣ ಭೂಮಿಯನ್ನು ಮಂಜೂರು ಮಾಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್, ಬೆಂಗಳೂರು, ಇವರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿ, ಧಾರವಾಡ ಇವರು ಪ್ರಸ್ತಾವನೆ ಸಲ್ಲಿಸುತ್ತಾ, ಹುಬ್ಬಳ್ಳಿಯ ಹೊರವಲಯದ ಅಂಚಟಗೇರಿಯಲ್ಲಿ 56–13 ಎಕರೆ ವಿಸ್ತೀರ್ಣದ ಭೂಮಿಯನ್ನು ಗುರುತಿಸಿದ್ದು, ವಿವರ ಕೆಳಗಿನಂತಿವೆ:–

ಗ್ರಾಮ	ಸರ್ವೆ ನಂ.	ವಿಸ್ತೀರ್ಣ
ಅಂಚಟಗೇರಿ	128	20–17
	87ಪಿ2	14–11
	86	21–25
	ಒಟ್ಟು	56–13

ಸದರಿ ಜಮೀನು **"ಬಿ"** ಖರಾಬು ಜಮೀನಾಗಿರುವುದರಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮ (1964)ರ ಕಲಂ 68(1)ರಡಿ ಜಿಲ್ಲಾಧಿಕಾರಿ, ಧಾರವಾಡ ಇವರು ದಿನಾಂಕ 18–08–2011ರಂದು ಅಧಿಸೂಚನೆ ಹೊರಡಿಸಿದ್ದರು. ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ:30:ಎಲ್‌ಜಿಡಿ:2011, ದಿನಾಂಕ 23–2–2012ರಲ್ಲಿ ಉಲ್ಲೇಖಿತ ಅಧಿನಿಯಮದ ಕಲಂ 68 (5)ರಡಿ ಅಧಿಸೂಚನೆ ಹೊರಡಿಸಲಾಗಿತ್ತು.

ಈ ಕುರಿತಂತೆ ಸಾರ್ವಜನಿಕರಿಂದ ಯಾವುದೇ ಅಕ್ಷೇಪಣೆಗಳನ್ನು ಸ್ವೀಕರಿಸಲಾಗಿಲ್ಲ. ಅದಲ್ಲದೆ, ಸದರಿ ಭೂಮಿಯ ಅಂತಹ ಲಾಜಿಸ್ಟಿಕ್ ಪಾರ್ಕ್/ಟ್ರಕ್ ಟರ್ಮಿನಲ್ ನಿರ್ಮಿಸಲು ಸೂಕ್ತವಾಗಿರುವುದಾಗಿ ಜಿಲ್ಲಾಧಿಕಾರಿ ತಿಳಿಸಿರುತ್ತಾರೆ.

ಹುಬ್ಬಳ್ಳಿಯ ಹೊರ ವಲಯದಲ್ಲಿರುವ ಅಂಚಟಗೇರಿ ಗ್ರಾಮದಲ್ಲಿ ಎಕರೆ ಒಂದಕ್ಕೆ ಮಾರುಕಟ್ಟೆ ಬೆಲೆ ರೂ. 2,63,000–00 ಇದ್ದು, ಒಟ್ಟು 56–13 ಎಕರೆ ವಿಸ್ತೀರ್ಣದ ಭೂಮಿಗೆ ಶೇ. 50 ರಷ್ಟು ಮಾರುಕಟ್ಟೆ ಬೆಲೆ ರೂ. 74,06,738–00 ಆಗುವುದಾಗಿ ತಿಳಿಸುತ್ತಾ, ಈ ಭೂ ಮೌಲ್ಯವನ್ನು ಸರ್ಕಾರಕ್ಕೆ ಭರಣ ಮಾಡಿಸಿಕೊಂಡು ಕರ್ನಾಟಕ ಭೂ ಮಂಜೂರಾತಿ ನಿಯಮಗಳು (1969)ರ ನಿಯಮ 20(1)(ಸಿ) ಪ್ರಕಾರ ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್, ಬೆಂಗಳೂರು ಇವರಿಗೆ ಮಂಜೂರು ಮಾಡಬಹುದೆಂದು ಜಿಲ್ಲಾಧಿಕಾರಿ, ಧಾರವಾಡ, ಇವರು ತಿಳಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 30 ಎಲ್‌ಜಿಡಿ 2011, ಬೆಂಗಳೂರು, ದಿನಾಂಕ 01–06–2012

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕು, ಅಂಚಟಗೇರಿ ಗ್ರಾಮದ ಸ.ನಂ. 128 ಕ್ಷೇತ್ರ 20–17, ಎಕರೆ ಜಮೀನು ಸ.ನಂ. 87ಪಿ2ರಲ್ಲಿ 14–11 ಎಕರೆ ಹಾಗೂ ಸ.ನಂ. 86 ರಲ್ಲಿ 21–25 ಎಕರೆ ಒಟ್ಟು 56 ಎಕರೆ 13 ಗುಂಟೆ ಜಮೀನನ್ನು ಸಾರ್ವಜನಿಕ ಉದ್ದೇಶ ಅಂದರೆ ಲಾಜಿಸ್ಟಿಕ್ ಪಾರ್ಕ್‌ಟ್ರಕ್ ಟರ್ಮಿನಲ್ ಮಾಡುವ ಉದ್ದೇಶಕ್ಕಾಗಿ ಕರ್ನಾಟಕ ಭೂ ಮಂಜೂರಾತಿ ನಿಯಮ (1969) ನಿಯಮ 20(1)(ಸಿ) ರ ಪ್ರಕಾರ ಜಮೀನಿನ ಮಾರುಕಟ್ಟೆ ಬೆಲೆಯ ಶೇ. 50 ರಷ್ಟು ಹಾಗೂ ನಿಯಮಗಳನ್ವಯ ಇತರೆ ಶುಲ್ಕಗಳನ್ನು ವಿಧಿಸಿ ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿ., ಬೆಂಗಳೂರು ಇವರಿಗೆ ಮಂಜೂರು ಮಾಡಲಾಗಿದೆ.

ಇದಕ್ಕೆ ಆರ್ಥಿಕ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಆಇ/403/ವೆಚ್ಚ–7/2011, ದಿನಾಂಕ 20–4–2012ರಲ್ಲಿ ಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್. ಜೆ. ಲಕ್ಷ್ಮೀನಾರಾಯಣ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ ಮಂಜೂರಾತಿ–3)

ಪಿ.ಆರ್. 1572

ಕಂದಾಯ ಸಚಿವಾಲಯ

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು ವಿಶೇಷ ತಹಶೀಲ್ದಾರರಾದ ಶ್ರೀ ಬಾಳಪ್ಪ ಹಂದಿಗುಂದ ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿ ಅವರನ್ನು ನೇಮಿಸುವ ಕುರಿತು ಆದೇಶ.–

ಓದಲಾಗಿದೆ: 1) ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ ಅವರ ಪತ್ರ ಸಂಖ್ಯೆ: ಎಡಿಎಂ (1): ಸಿಆರ್:26/2011-12, ದಿನಾಂಕ 29-11-2011.

2) ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ: ಆರ್‌ಡಿ 53 ಎಡಿಇ 2011, ದಿನಾಂಕ 13-12-2011.

3) ಶ್ರೀ ಬಾಳಪ್ಪ ಹಂದಿಗುಂದ, ವಿಶೇಷ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ಅವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ 23-12-2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ ಅವರು ಶ್ರೀ ಬಾಳಪ್ಪ ಹಂದಿಗುಂದ, ವಿಶೇಷ ತಹಶೀಲ್ದಾರ್ ಅವರು ತಮ್ಮ ಕರ್ತವ್ಯದಲ್ಲಿ ತೋರಿಸುತ್ತಿರುವ ಅಶ್ರದ್ಧೆ ಮತ್ತು ಕರ್ತವ್ಯಲೋಪದ ಬಗ್ಗೆ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ದೋಷಾರೋಪಣಾ ಪಟ್ಟಿ ಹಾಗೂ ಅದಕ್ಕೆ ಸಂಬಂಧಪಟ್ಟ ಪೂರಕ ದಾಖಲೆಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಂತೆ ಸರ್ಕಾರದಿಂದ ದಿನಾಂಕ 13-11-2011 ರಂದು ಆಪಾದಿತ ಅಧಿಕಾರಿ ಶ್ರೀ ಬಾಳಪ್ಪ ಹಂದಿಗುಂದಿ, ವಿಶೇಷ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ಅವರಿಗೆ ಕಾರಣ ಕೇಳುವ ನೋಟೀಸನ್ನು ದೋಷಾರೋಪಣಾ ಪಟ್ಟಿಯೊಂದಿಗೆ ಅನುಬಂಧ-1 ರಿಂದ 4 ರವರೆಗಿನ ದಸ್ತಾವೇಜು ಹಾಗೂ ಸಾಕ್ಷಿಗಳ ಪಟ್ಟಿಯನ್ನು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಶ್ರೀ ಬಾಳಪ್ಪ ಹಂದಿಗುಂದ, ವಿಶೇಷ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ಅವರು ಲಿಖಿತ ಹೇಳಿಕೆ ಸಲ್ಲಿಸಿದ್ದು ಸದರಿ ಹೇಳಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಆಪಾದಿತ ತಹಶೀಲ್ದಾರ್ ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗಳೆದಿರುತ್ತಾರೆ.

ತಹಶೀಲ್ದಾರರಾದ ಶ್ರೀ ಬಾಳಪ್ಪ ಹಂದಿಗುಂದಿ ಅವರು ಸಲ್ಲಿಸಿರುವ ಲಿಖಿತ ಹೇಳಿಕೆ ಹಾಗೂ ಜಿಲ್ಲಾಧಿಕಾರಿಯವರ ವರದಿಯನ್ನು ಪರಿಶೀಲಿಸಿ ಸರ್ಕಾರವು ಆರೋಪಿತ ಅಧಿಕಾರಿಯ ವಿರುದ್ಧ ಕರ್ತವ್ಯಲೋಪಗಳು ಮೇಲ್ನೋಟಕ್ಕೆ ದೃಢಪಟ್ಟಿರುವುದರಿಂದ ಸತ್ಯಾ ಸತ್ಯತೆಯನ್ನು ತಿಳಿಯುವ ಬಗ್ಗೆ ಆರೋಪಿತ ಅಧಿಕಾರಿ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ಸಮಂಜಸವೆಂದು ಪರಿಗಣಿಸಿ ನಿವೃತ್ತ ನ್ಯಾಯಾಧೀಶರಾದ ಶ್ರೀ ಎನ್. ಸುಬ್ಬರಾವ್ ಅವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಬೆಂಗಳೂರು ನಗರ ಜಿಲ್ಲೆಯ ಕಚೇರಿ ಸಹಾಯಕರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 53 ಎಡಿಇ 2011, ಬೆಂಗಳೂರು, ದಿನಾಂಕ 28-05-2012

ಮೇಲೆ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11 (5) ರಡಿಯಲ್ಲಿ ನಿವೃತ್ತ ನ್ಯಾಯಾಧೀಶರಾದ ಶ್ರೀ ಎನ್. ಸುಬ್ಬರಾವ್ ಅವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11(5)(ಸಿ)ರಡಿಯಲ್ಲಿ ಬೆಂಗಳೂರು ನಗರ ಜಿಲ್ಲೆಯ ಕಚೇರಿ ಸಹಾಯಕರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿದೆ.

ವಿಚಾರಣಾಧಿಕಾರಿಯವರು, ಬೆಂಗಳೂರು ನಗರ ಜಿಲ್ಲಾಧಿಕಾರಿಯವರ ಕಚೇರಿ ಆವರಣದಲ್ಲಿ ವಿಚಾರಣೆ ನಡೆಸತಕ್ಕದ್ದು. ಈ ಉದ್ದೇಶಕ್ಕಾಗಿ ಲಭ್ಯವಿರುವ ಕಚೇರಿಯಲ್ಲಿ ವಿಚಾರಣಾಧಿಕಾರಿ ಅವರಿಗೆ ಸ್ಥಳಾವಕಾಶ ಕಲ್ಪಿಸುವುದು ಹಾಗೂ ಸಂಬಂಧಿಸಿದ ಕಚೇರಿಯಲ್ಲಿ ಲಭ್ಯ ಇರುವ ಶೀಘ್ರಲಿಪಿಗಾರ/ಬೆರಳಚ್ಚುಗಾರ ಸಹಾಯ, ಲೇಖನ ಸಾಮಗ್ರಿಗಳನ್ನು ಒದಗಿಸತಕ್ಕದ್ದು.

ಪ್ರಕರಣದ ವಿಚಾರಣೆಗಾಗಿ ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 22 ಸೇಇವಿ 05 ದಿನಾಂಕ 11-4-2008ರನ್ವಯ ವಿಚಾರಣಾಧಿಕಾರಿಗೆ ರೂ. 8,000-00 (ಎಂಟು ಸಾವಿರ) ಮಾತ್ರ ಸಂಚಿತ ಸಂಭಾವನೆ ಹಾಗೂ ರೂ. 1,500.00 (ಒಂದು ಸಾವಿರದ ಐದು ನೂರು) ಮಾತ್ರ ವಾಹನ ಭತ್ಯೆಯನ್ನು ವಿಚಾರಣಾಧಿಕಾರಿ ಅವರ ವಿಚಾರಣಾ ವರದಿ ಸರ್ಕಾರಕ್ಕೆ ಸಲ್ಲಿಸಿದ ತರುವಾಯ ಬೆಂಗಳೂರು ನಗರ ಜಿಲ್ಲಾಧಿಕಾರಿ ಪಾವತಿಸಿತಕ್ಕದ್ದು.

ವಿಚಾರಣಾಧಿಕಾರಿಗಳು, ಇಲಾಖಾ ವಿಚಾರಣೆಯನ್ನು ಮೇಲ್ಕಂಡ ನಿಯಮಾವಳಿಗಳಲ್ಲಿನ ವಿಧಿ ವಿಧಾನಗಳನುಸಾರ ಜರುಗಿಸಿ ವಿಚಾರಣಾ ವರದಿಯನ್ನು 2 ತಿಂಗಳೊಳಗಾಗಿ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ವಿ. ರಾಮಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್. 1573

ಕಂದಾಯ ಸಚಿವಾಲಯ

ವಿಷಯ : 2012-13ನೇ ಸಾಲಿನಲ್ಲಿ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ, ತುರ್ತು ಪರಿಹಾರ ಕ್ರಮ ಕೈಗೊಳ್ಳಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿಗಳಿಂದ ಬಂದಿರುವ ಬೇಡಿಕೆ ಪತ್ರಗಳು.

ಪ್ರಸ್ತಾವನೆ :

2012-13ನೇ ಸಾಲಿನಲ್ಲಿ ಮುಂಗಾರು ಮಳೆ ವಿಫಲವಾಗಿ, ರಾಜ್ಯದ 24 ಜಿಲ್ಲೆಗಳ 123 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಉಂಟಾಗಿರುತ್ತದೆ. ಬರ ಪರಿಸ್ಥಿತಿಯನ್ನು ಎದುರಿಸಲು ಕುಡಿಯುವ ನೀರು ಸರಬರಾಜು, ಜಾನುವಾರುಗಳಿಗೆ ಮೇವು ಒದಗಿಸುವ ಮತ್ತು ಜಾನುವಾರು ಸಂರಕ್ಷಣೆ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯನ್ನು ನಿಭಾಯಿಸಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವಂತೆ ಕೋಲಾರ, ಬಾಗಲಕೋಟೆ, ಬಿಜಾಪುರ, ಮಂಡ್ಯ ಮತ್ತು ರಾಯಚೂರು ಜಿಲ್ಲಾಧಿಕಾರಿಗಳು ಪತ್ರಗಳ ಮುಖೇನ ಬೇಡಿಕೆ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಪ್ರಸ್ತಾವನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ರಾಜ್ಯದಲ್ಲಿ ಉಂಟಾಗಿರುವ ಬರಪರಿಸ್ಥಿತಿಯನ್ನು ನಿಭಾಯಿಸಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 149 ಟಿಎನ್‌ಆರ್ 2012(1), ಬೆಂಗಳೂರು, ದಿನಾಂಕ: 06-06-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮುಂಗಾರು ಮಳೆಯ ಕೊರತೆಯಿಂದ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಈ ಕೆಳಕಂಡಂತೆ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ.

ಕ್ರಮ ಸಂಖ್ಯೆ	ಜಿಲ್ಲೆ	ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)
1.	ಕೋಲಾರ	500-00
2.	ಬಾಗಲಕೋಟೆ	200-00
3.	ಬಿಜಾಪುರ	200-00
4.	ಮಂಡ್ಯ	200-00
5.	ರಾಯಚೂರು	400-00
	ಒಟ್ಟು	1500-00

(ರೂಪಾಯಿ ಒಂದು ಸಾವಿರದ ಐದುನೂರು ಲಕ್ಷಗಳು ಮಾತ್ರ)

1. ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಅನುದಾನವನ್ನು ವೆಚ್ಚ ಮಾಡುವುದು.
2. ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನವನ್ನು ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸಮಾಲೋಚಿಸಿ.
   ಅ) ಕುಡಿಯುವ ನೀರಿನ ವ್ಯವಸ್ಥೆ, ಹಾಗೂ
   ಆ) ಜಾನುವಾರುಗಳ ಸಂರಕ್ಷಣೆಗಾಗಿ ಮಾತ್ರ ಅನುದಾನವನ್ನು ಬಳಸುವುದು.
3. ಜಿಲ್ಲಾ ಉಸ್ತುವಾರಿ ಸಚಿವರುಗಳು ಜಿಲ್ಲಾ ಮಟ್ಟದ ಸಭೆಗಳನ್ನು ತಿಂಗಳಿಗೊಮ್ಮೆ ನಡೆಸಿ ಬರಪರಿಸ್ಥಿತಿಯ ಬಗ್ಗೆ ಅವಲೋಕನ ಮಾಡುವುದು ಮತ್ತು ಸರ್ಕಾರದಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರು, ಜಾನುವಾರು ಸಂರಕ್ಷಣೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರಿನ ಯೋಜನೆಗಳು, ಕೊಳವೆ ಬಾವಿ ತೆರೆಯುವುದು ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಸಾಧಿಸುವ ಪ್ರಗತಿಯನ್ನು ವಿಶೇಷವಾಗಿ ಪರಿಶೀಲಿಸುವುದು. ಈ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿರವರುಗಳು ಆಯಾ ಜಿಲ್ಲಾ ಸಚಿವರೊಡನೆ ನಿಕಟ ಸಂಪರ್ಕವಿರಿಸಿಕೊಂಡು ಸಭೆಗಳನ್ನು ಆಯೋಜಿಸಲು ಕ್ರಮ ವಹಿಸುವುದು.
4. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲಾ ಮಟ್ಟದ ಸಭೆಗಳನ್ನು ತಿಂಗಳಿಗೊಮ್ಮೆ ನಡೆಸಿ ಬರಪರಿಸ್ಥಿತಿಯ ಬಗ್ಗೆ ಅವಲೋಕನ ಮಾಡುವುದು ಮತ್ತು ಸರ್ಕಾರದಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರು ಜಾನುವಾರು ಸಂರಕ್ಷಣೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರಿನ ಯೋಜನೆಗಳು, ಕೊಳವೆ ಬಾವಿ ತೆರೆಯುವುದು ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಸಾಧಿಸುವ ಪ್ರಗತಿಯನ್ನು ವಿಶೇಷವಾಗಿ ಪರಿಶೀಲಿಸುವುದು. ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಸಭೆಗಳ ನಡವಳಿಗಳನ್ನು ಸರ್ಕಾರಕ್ಕೇ ಸಲ್ಲಿಸುವುದು.

5. ಪ್ರತಿ ತಾಲ್ಲೂಕಿನಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಬರಪರಿಹಾರ ಕಾಮಗಾರಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನೂ ಸೇರಿಸಿದಂತೆ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ ಜಿಲ್ಲಾ ಉಸ್ತುವಾರಿ ಅಧ್ಯಕ್ಷತೆಯಲ್ಲಿ ಸಭೆ ಕರೆದು ಸಿದ್ಧಪಡಿಸಿದ ಹಾಗೂ ಅನುಮೋದಿಸಿದ ಕಾರ್ಯ ಯೋಜನೆಗಳನ್ನು ಯುದ್ಧೋಪಾದಿಯಲ್ಲಿ ಜಾರಿಗೊಳಿಸುವುದು.
6. ಬರಪೀಡಿತ ಪ್ರದೇಶಗಳಿಗೆ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ವ್ಯಾಪಕವಾಗಿ ಪ್ರವಾಸ ಮಾಡುವುದು ಹಾಗೂ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಸಂಬಂಧಪಟ್ಟ ಸಮಸ್ಯೆಗಳು ಉದ್ಭವವಾಗದಂತೆ ನೋಡಿಕೊಳ್ಳುವುದು. ಬರಪೀಡಿತ ಪ್ರದೇಶದಲ್ಲಿ ಜನರು ಗುಳೇ ಹೋಗುವುದನ್ನು ತಡೆಗಟ್ಟಲು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೇಡಿಕೆಗನುಗುಣವಾಗಿ ಅನುಷ್ಠಾನಗೊಳಿಸುವುದು.
7. ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಲು ತಾಲ್ಲೂಕಿಗೊಂದು ಸಹಾಯವಾಣಿಯನ್ನು ಸ್ಥಾಪಿಸಿ, ತಾಂತ್ರಿಕ ಸಿಬ್ಬಂದಿಯನ್ನು ನಿಯೋಜಿಸಿ 24 ಗಂಟೆಯೊಳಗಾಗಿ ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸುವುದು.
8. ಪ್ರತಿ 15 ದಿನಗಳಿಗೊಮ್ಮೆ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಂಟಿಯಾಗಿ ಬರ ಪರಿಹಾರ ಕಾಮಗಾರಿಗಳ ಬಗ್ಗೆ ಪತ್ರಿಕಾ ಗೋಷ್ಠಿ ನಡೆಸಿ ಮಾಧ್ಯಮಗಳಿಗೆ ಜಿಲ್ಲೆಯಲ್ಲಿ ಕೈಗೊಂಡಿರುವ ಕುಡಿಯುವ ನೀರು, ಜಾನುವಾರು ಸಂರಕ್ಷಣೆ, ಉದ್ಯೋಗ ಖಾತರಿ ಯೋಜನೆ ಮತ್ತು ಬರಪರಿಹಾರಕ್ಕೆ ಸಂಬಂಧಿಸಿದಂತೆ ಸಾಧಿಸಿರುವ ಪ್ರಗತಿಯ ಚಿತ್ರಣವನ್ನು ಬಿಂಬಿಸುವುದು. ಪತ್ರಿಕಾಗೋಷ್ಠಿಯಲ್ಲಿ ಸಿದ್ಧಪಡಿಸಿದ ಟಿಪ್ಪಣಿಯನ್ನು ಇ–ಮೇಲ್ ಮುಖಾಂತರ ಸರ್ಕಾರಕ್ಕೆ ರವಾನಿಸುವುದು. ಇ–ಮೇಲ್ ವಿಳಾಸ secyrelief-rev@karnataka.gov.in.
9. ಪ್ರತಿ ಹೋಬಳಿಗೆ ಒಬ್ಬ ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಯನ್ನು ನೇಮಿಸಿ ಅವರ ಮೂಲಕ ಬರಪರಿಹಾರ ಕಾಮಗಾರಿಗಳು ಜಾನುವಾರು ಸಂರಕ್ಷಣೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರ್ವಹಿಸಲಾಗುತ್ತಿರುವ ಕಾಮಗಾರಿಗಳನ್ನು ವ್ಯಾಪಕವಾಗಿ ಪರಿಶೀಲನೆ ಮಾಡುವುದು.
10. ಮುಂದಿನ 2 ತಿಂಗಳುಗಳ ಕಾಲ ಕುಡಿಯುವ ನೀರು/ಮೇವಿನ ಕೊರತೆ ಹಾಗೂ ಉದ್ಯೋಗಕ್ಕೆ ಕೊರತೆಯುಂಟಾಗದಂತೆ ಹಾಗೂ ಯಾವುದೇ ದೂರುಗಳು ಬರದಂತೆ ಕಾರ್ಯ ನಿರ್ವಹಿಸುವುದು.
11. ಪ್ರತಿಯೊಂದು ಕಾಮಗಾರಿಯ ಆರಂಭ, ಚಾಲ್ತಿಯಲ್ಲಿರುವ ಹಾಗೂ ಮುಕ್ತಾಯದ ಹಂತಗಳ ಛಾಯಾ ಚಿತ್ರಗಳನ್ನು ದಾಖಲಿಸಿ, ಮೂರನೇ ಹಂತದ ಪರಿವೀಕ್ಷಣೆಗೆ ಒಳಪಡಿಸಿ, ಅಂತಿಮ ಬಿಲ್ ಪಾವತಿ ಮಾಡುವುದು.
12. ಪೂರ್ಣಗೊಂಡ ಪ್ರತಿಯೊಂದು ಕಾಮಗಾರಿಯ ಛಾಯಾ ಚಿತ್ರಗಳು ಹಾಗೂ ವೆಚ್ಚದ ವಿವರಗಳನ್ನು ಇ–ಮೇಲ್ ಮುಖಾಂತರ (secyrelief-rev@karnataka.gov.in) ಕಳುಹಿಸುವುದು.
13. ಪ್ರತಿಯೊಂದು ಕಾಮಗಾರಿಯ ವಿವರಗಳನ್ನು ಫಲಕಗಳಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಈ ಕೆಳಕಂಡ ಮಾದರಿಯಲ್ಲಿ ನಮೂದಿಸುವುದು.

ಕರ್ನಾಟಕ ಸರ್ಕಾರ

ಪ್ರಕೃತಿ ವಿಕೋಪ ಕಾಮಗಾರಿ

ಕಾಮಗಾರಿಯ ಹೆಸರು:	
ಅಂದಾಜು ಮೊತ್ತ:	
ಕಾಮಗಾರಿ ಪ್ರಾರಂಭಿಸಿದ ದಿನಾಂಕ:	
ಕಾಮಗಾರಿ ಮುಕ್ತಾಯವಾದ ದಿನಾಂಕ:	
ಅನುಷ್ಠಾನಗೊಳಿಸಿದ ಸಂಸ್ಥೆ:	

14. ಪ್ರತಿ ತಿಂಗಳು ಅಂತ್ಯಕ್ಕೆ ಅನುದಾನ ಬಳಕೆಯಾದ ವಿವರಗಳನ್ನು ಮೇಲ್ಕಂಡ ಇ–ಮೇಲ್ ಮುಖಾಂತರ ಸಲ್ಲಿಸುವುದು. ಬಳಕೆ ಪ್ರಮಾಣ ಪತ್ರಗಳನ್ನು ಸಹ ತಪ್ಪದೇ ಸರ್ಕಾರಕ್ಕೆ ರವಾನಿಸುವುದು.
15. ಪ್ರತಿ ತಿಂಗಳು ಸಾಧಿಸಿದ ಪ್ರಗತಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹಾಗೂ ಪ್ರಾದೇಶಿಕ ಆಯುಕ್ತರ ಗಮನಕ್ಕೆ ತರುವುದು ಮತ್ತು ಅವರಿಂದ ಸಲಹೆ–ಸೂಚನೆಗಳನ್ನು ಪಡೆಯುವುದು.
16. ಅನುದಾನ ಲಭ್ಯತೆ ಇಲ್ಲದೇ ಯಾವುದೇ ದುರಸ್ತಿ ಕಾಮಗಾರಿಗಳನ್ನು ಎಸ್.ಡಿ.ಆರ್.ಎಫ್/ಎನ್.ಡಿ.ಆರ್.ಎಫ್ ಅಡಿಯಲ್ಲಿ ಕೈಗೊಳ್ಳುವಂತಿಲ್ಲ. ಹಾಗೂ ಕಾಮಗಾರಿಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳಿಸುವುದು.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2245–01–800–0–01–100 (ಯೋಜನೇತರ) ಅಡಿಯಲ್ಲಿ ಭರಿಸುವುದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆ.ಇ. 392 ವೆಚ್ಚ–7/2012, ದಿನಾಂಕ: 26–04–2012ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಎಂ. ಆನಂದಪ್ಪ

ಸರ್ಕಾರದ ಉಪ ಕಾರ್ಯದರ್ಶಿ

ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)

ಪಿ.ಆರ್. 1636

ಕಂದಾಯ ಸಚಿವಾಲಯ

ವಿಷಯ : 2012-13ನೇ ಸಾಲಿನಲ್ಲಿ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ, ತುರ್ತು ಪರಿಹಾರ ಕ್ರಮ ಕೈಗೊಳ್ಳಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ಕೊಪ್ಪಳ ಜಿಲ್ಲಾಧಿಕಾರಿಗಳಿಂದ ಬಂದಿರುವ ಬೇಡಿಕೆ ಪತ್ರ.

ಪ್ರಸ್ತಾವನೆ :

2012-13ನೇ ಸಾಲಿನಲ್ಲಿ ಮುಂಗಾರು ಮಳೆ ವಿಫಲವಾಗಿ, ರಾಜ್ಯದ 24 ಜಿಲ್ಲೆಗಳ 123 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಉಂಟಾಗಿರುತ್ತದೆ. ಬರ ಪರಿಸ್ಥಿತಿಯನ್ನು ಎದುರಿಸಲು ಕುಡಿಯುವ ನೀರು ಸರಬರಾಜು, ಜಾನುವಾರುಗಳಿಗೆ ಮೇವು ಒದಗಿಸುವ ಮತ್ತು ಜಾನುವಾರು ಸಂರಕ್ಷಣೆ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯನ್ನು ನಿಭಾಯಿಸಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವಂತೆ ಕೊಪ್ಪಳ ಜಿಲ್ಲಾಧಿಕಾರಿಗಳು ಪತ್ರದ ಮುಖೇನ ಬೇಡಿಕೆ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ರಾಜ್ಯದಲ್ಲಿ ಉಂಟಾಗಿರುವ ಬರಪರಿಸ್ಥಿತಿಯನ್ನು ನಿಭಾಯಿಸಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 149 ಟಿಎನ್‌ಆರ್ 2012(2), ಬೆಂಗಳೂರು, ದಿನಾಂಕ : 06-06-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮುಂಗಾರು ಮಳೆಯ ಕೊರತೆಯಿಂದ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಕೊಪ್ಪಲ ಜಿಲ್ಲಾಧಿಕಾರಿಗಳಿಗೆ ರೂ. 200.00 ಲಕ್ಷ (ರೂಪಾಯಿ ಎರಡುನೂರು ಲಕ್ಷ ಮಾತ್ರ) ಅನುದಾನ ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ.

1. ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಅನುದಾನವನ್ನು ವೆಚ್ಚ ಮಾಡುವುದು.
2. ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನವನ್ನು ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸಮಾಲೋಚಿಸಿ
   ಅ) ಕುಡಿಯುವ ನೀರಿನ ವ್ಯವಸ್ಥೆ, ಹಾಗೂ
   ಆ) ಜಾನುವಾರುಗಳ ಸಂರಕ್ಷಣೆಗಾಗಿ ಮಾತ್ರ ಅನುದಾನವನ್ನು ಬಳಸುವುದು.
3. ಜಿಲ್ಲಾ ಉಸ್ತುವಾರಿ ಸಚಿವರುಗಳು ಜಿಲ್ಲಾ ಮಟ್ಟದ ಸಭೆಗಳನ್ನು ತಿಂಗಳಿಗೊಮ್ಮೆ ನಡೆಸಿ ಬರಪರಸ್ಥಿತಿಯ ಬಗ್ಗೆ ಅವಲೋಕನ ಮಾಡುವುದು ಮತ್ತು ಸರ್ಕಾರದಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರು, ಜಾನುವಾರು ಸಂರಕ್ಷಣೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರಿನ ಯೋಜನೆಗಳು, ಕೊಳವೆ ಬಾವಿ ತೆರೆಯುವುದು ಹಾಗೂ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಸಾಧಿಸುವ ಪ್ರಗತಿಯನ್ನು ವಿಶೇಷವಾಗಿ ಪರಿಶೀಲಿಸುವುದು. ಈ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿರವರುಗಳು ಆಯಾ ಜಿಲ್ಲಾ ಸಚಿವರೊಡನೆ ನಿಕಟ ಸಂಪರ್ಕವಿರಿಸಿಕೊಂಡು ಸಭೆಗಳನ್ನು ಆಯೋಜಿಸಲು ಕ್ರಮ ವಹಿಸುವುದು.
4. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲಾ ಮಟ್ಟದ ಸಭೆಗಳನ್ನು ತಿಂಗಳಿಗೊಮ್ಮೆ ನಡೆಸಿ ಬರಪರಿಸ್ಥಿತಿಯ ಬಗ್ಗೆ ಅವಲೋಕನ ಮಾಡುವುದು ಮತ್ತು ಸರ್ಕಾರದಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರು, ಜಾನುವಾರು ಸಂರಕ್ಷಣೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರಿನ ಯೋಜನೆಗಳು, ಕೊಳವೆ ಬಾವಿ ತೆರೆಯುವುದು ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಸಾಧಿಸುವ ಪ್ರಗತಿಯನ್ನು ವಿಶೇಷವಾಗಿ ಪರಿಶೀಲಿಸುವುದು. ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಸಭೆಗಳ ನಡವಳಿಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.
5. ಪ್ರತಿ ತಾಲ್ಲೂಕಿನಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಬರಪರಿಹಾರ ಕಾಮಗಾರಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು ಸೇರಿಸಿದಂತೆ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಕರೆದು ಸಿದ್ಧಪಡಿಸಿದ ಹಾಗೂ ಅನುಮೋದಿಸಿದ ಕಾರ್ಯ ಯೋಜನೆಗಳನ್ನು ಯುದ್ಧೋಪಾದಿಯಲ್ಲಿ ಜಾರಿಗೊಳಿಸುವುದು.
6. ಬರಪೀಡಿತ ಪ್ರದೇಶಗಳಿಗೆ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ವ್ಯಾಪಕವಾಗಿ ಪ್ರವಾಸ ಮಾಡುವುದು ಹಾಗೂ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಸಂಬಂಧಪಟ್ಟ ಸಮಸ್ಯಗಳು ಉದ್ಭವವಾಗದಂತೆ ನೋಡಿಕೊಳ್ಳುವುದು. ಬರಪೀಡಿತ ಪ್ರದೇಶದಲ್ಲಿ ಜನರು ಗುಳೇ ಹೋಗುವುದು ತಡೆಗಟ್ಟಲು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೇಡಿಕೆಗನುಗುಣವಾಗಿ ಅನುಷ್ಠಾನಗೊಳಿಸುವುದು.
7. ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಲು ತಾಲ್ಲೂಕಿಗೊಂದು ಸಹಾಯವಾಣಿಯನ್ನು ಸ್ಥಾಪಿಸಿ, ತಾಂತ್ರಿಕ ಸಿಬ್ಬಂದಿಯನ್ನು ನಿಯೋಜಿಸಿ 24 ಗಂಟೆಯೊಳಗಾಗಿ ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸುವುದು.

8. ಪ್ರತಿ 15 ದಿನಗಳಿಗೊಮ್ಮೆ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ಜಂಟಿಯಾಗಿ ಬರ ಪರಿಹಾರ ಕಾಮಗಾರಿಗಳ ಬಗ್ಗೆ ಪತ್ರಿಕಾ ಗೋಷ್ಠಿ ನಡೆಸಿ ಮಾಧ್ಯಮಗಳಿಗೆ ಜಿಲ್ಲೆಯಲ್ಲಿ ಕೈಗೊಂಡಿರುವ ಕುರಿಯುವ ನೀರು, ಜಾನುವಾರು ಸಂರಕ್ಷಣೆ, ಉದ್ಯೋಗ ಖಾತರಿ ಯೋಜನೆ ಮತ್ತು ಬರಪರಿಹಾರಕ್ಕೆ ಸಂಬಂಧಿಸಿದಂತೆ ಸಾಧಿಸಿರುವ ಪ್ರಗತಿಯ ಚಿತ್ರಣವನ್ನು ಬಿಂಬಿಸುವುದು. ಪತ್ರಿಕಾಗೋಷ್ಠಿಯಲ್ಲಿ ಸಿದ್ಧಪಡಿಸಿದ ಟಿಪ್ಪಣಿಯನ್ನು ಇ–ಮೇಲ್ ಮುಖಾಂತರ ಸರ್ಕಾರಕ್ಕೆ ರವಾನಿಸುವುದು. ಇ–ಮೇಲ್ ವಿಳಾಸ (secyrelief-rev@karnataka.gov.in)
9. ಪ್ರತಿ ಹೋಬಳಿಗೆ ಒಬ್ಬ ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಯನ್ನು ನೇಮಿಸಿ ಅವರ ಮೂಲಕ ಬರಪರಿಹಾರ ಕಾಮಗಾರಿಗಳು, ಜಾನುವಾರು ಸಂರಕ್ಷಣೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ನಿರ್ವಹಿಸಲಾಗುತ್ತಿರುವ ಕಾಮಗಾರಿಗಳನ್ನು ವ್ಯಾಪಕವಾಗಿ ಪರಿಶೀಲನೆ ಮಾಡುವುದು.
10. ಮುಂದಿನ 2 ತಿಂಗಳುಗಳ ಕಾಲ ಕುಡಿಯುವ ನೀರು/ಮೇವಿನ ಕೊರತೆ ಹಾಗೂ ಉದ್ಯೋಗಕ್ಕೆ ಕೊರತೆಯುಂಟಾಗದಂತೆ ಹಾಗೂ ಯಾವುದೇ ದೂರುಗಳು ಬರದಂತೆ ಕಾರ್ಯ ನಿರ್ವಹಿಸುವುದು.
11. ಪ್ರತಿಯೊಂದು ಕಾಮಗಾರಿಯ ಆರಂಭ, ಚಾಲ್ತಿಯಲ್ಲಿರುವ ಹಾಗೂ ಮುಕ್ತಾಯದ ಹಂತಗಳ ಛಾಯಾ ಚಿತ್ರಗಳನ್ನು ದಾಖಲಿಸಿ, ಮೂರನೇ ಹಂತದ ಪರಿವೀಕ್ಷಣೆಗೆ ಒಳಪಡಿಸಿ, ಅಂತಿಮ ಬಿಲ್ ಪಾವತಿ ಮಾಡುವುದು.
12. ಪೂರ್ಣಗೊಂಡ ಪ್ರತಿಯೊಂದು ಕಾಮಗಾರಿಯ ಛಾಯಾ ಚಿತ್ರಗಳು ಹಾಗೂ ವೆಚ್ಚದ ವಿವರಗಳನ್ನು ಇ–ಮೇಲ್ ಮುಖಾಂತರ (secyrelief-rev@karnataka.gov.in) ಕಳುಹಿಸುವುದು.
13. ಪ್ರತಿಯೊಂದು ಕಾಮಗಾರಿಯ ವಿವರಗಳನ್ನು ಫಲಕದಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಈ ಕೆಳಕಂಡ ಮಾದರಿಯಲ್ಲಿ ನಮೂದಿಸುವುದು.

ಕರ್ನಾಟಕ ಸರ್ಕಾರ

ಪ್ರಕೃತಿ ವಿಕೋಪ ಕಾಮಗಾರಿ

ಕಾಮಗಾರಿಯ ಹೆಸರು:	
ಅಂದಾಜು ಮೊತ್ತ:	
ಕಾಮಗಾರಿ ಪ್ರಾರಂಭಿಸಿದ ದಿನಾಂಕ:	
ಕಾಮಗಾರಿ ಮುಕ್ತಾಯವಾದ ದಿನಾಂಕ:	
ಅನುಷ್ಠಾನಗೊಳಿಸಿದ ಸಂಸ್ಥೆ:	

14. ಪ್ರತಿ ತಿಂಗಳು ಅಂತ್ಯಕ್ಕೆ ಅನುದಾನ ಬಳಕೆಯಾದ ವಿವರಗಳನ್ನು ಮೇಲ್ಕಂಡ ಇ–ಮೇಲ್ ಮುಖಾಂತರ ಸಲ್ಲಿಸುವುದು. ಬಳಕೆ ಪ್ರಮಾಣ ಪತ್ರಗಳನ್ನು ಸಹ ತಪ್ಪದೇ ಸರ್ಕಾರಕ್ಕೆ ರವಾನಿಸುವುದು.
15. ಪ್ರತಿ ತಿಂಗಳು ಸಾಧಿಸಿದ ಪ್ರಗತಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹಾಗೂ ಪ್ರಾದೇಶಿಕ ಆಯುಕ್ತರ ಗಮನಕ್ಕೆ ತರುವುದು ಮತ್ತು ಅವರಿಂದ ಸಲಹೆ–ಸೂಚನೆಗಳನ್ನು ಪಡೆಯುವುದು.
16. ಅನುದಾನ ಲಭ್ಯತೆ ಇಲ್ಲದೇ ಯಾವುದೇ ದುರಸ್ತಿ ಕಾಮಗಾರಿಗಳನ್ನು ಎಸ್.ಡಿ.ಆರ್.ಎಫ್/ಎನ್.ಡಿ.ಆರ್.ಎಫ್ ಅಡಿಯಲ್ಲಿ ಕೈಗೊಳ್ಳುವಂತಿಲ್ಲ. ಹಾಗೂ ಕಾಮಗಾರಿಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳಿಸುವುದು.

ಈ ವೆಚ್ಚವನ್ನು ವಿಧಾನ ಸೌಧದಲ್ಲಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯ ಎನ್.ಡಿ.ಆರ್.ಇ. ಉಳಿಕೆ ಮೊತ್ತದಿಂದ ಭರಿಸುವುದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಮಾನ್ಯ ಮುಖ್ಯ ಮಂತ್ರಿಗಳ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಎಂ. ಆನಂದಪ್ಪ

ಸರ್ಕಾರದ ಉಪ ಕಾರ್ಯದರ್ಶಿ

ಪಿ.ಆರ್. 1637 ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಂ. ಚಲುವಯ್ಯ, ನಿವೃತ್ತ, ತಹಶೀಲ್ದಾರ್, ಸೋಮವಾರಪೇಟೆ ತಾಲ್ಲೂಕು, ಮಡಿಕೇರಿ ಜಿಲ್ಲೆ ಅವರ ವಿರುದ್ಧದ ಸಿಬಿಐ ವಿಚಾರಣೆ ಆರೋಪಿತರನ್ನು ಆರೋಪ ಮುಕ್ತರನ್ನಾಗಿಸುವ ಕುರಿತು.

ಓದಲಾಗಿದೆ :
1. ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಸಿಬಿಐಐಪಿಆರ್ ಹೈದ್ರಾಬಾದ್ ಅವರ ಪತ್ರ ಸಂಖ್ಯೆ: ಡಿಪಿಡಿಹೆಚ್‌ವೈ 2004 ಆರ್‌ಸಿಬಿಜಿಎ 2003 ಎ 0003/1941 ದಿನಾಂಕ: 07–04–2004.
2. ಘನತೆವೆತ್ತ ರಾಜ್ಯಪಾಲರ ಅಧೀನ ಕಾರ್ಯದರ್ಶಿಯವರ ಪತ್ರ ಸಂಖ್ಯೆ: ಜಿಎಸ್ 26 ಇಎಸ್‌ಟಿ 2004 ದಿನಾಂಕ: 27–04–2004.
3. ಸರ್ಕಾರದ ಆದೇಶ ಸಂಖ್ಯೆ: ಕಂಇ 28 ಎಡಿಇ 04, ದಿನಾಂಕ: 31–07–2004.
4. ಹೆಡ್ ಆಫ್ ಬ್ರಾಂಚ್ ಸಿಬಿಐ:ಎಸಿಬಿ ಬೆಂಗಳೂರು ಅವರ ಪತ್ರ ಸಂಖ್ಯೆ: ಸಿ5/ಪ್ರೆಸೆಂಟ್ ಪೊಸಿಷನ್/ಸಿಬಿಐ/ಎಸಿಬಿ/ಬಿಎಲಾರ್/2002/2627 ದಿನಾಂಕ: 27–03–2002.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ: (1)ರ ಪತ್ರದಲ್ಲಿ ಶ್ರೀ ಎಂ. ಚಲುವಯ್ಯ, ನಿವೃತ್ತ ತಹಶೀಲ್ದಾರ್, ಸೋಮವಾರಪೇಟೆ ತಾಲ್ಲೂಕು, ಮಡಿಕೇರಿ ಜಿಲ್ಲೆ ಅವರ ಹಾಗೂ ಇತರರ ವಿರುದ್ಧ ಶ್ರೀ ಸದಾಶಿವಭಟ್, ಅಧ್ಯಕ್ಷರು, ಚಿಕ್ಕಮಗಳೂರು ಕೊಡಗು ಗ್ರಾಮೀಣ ಬ್ಯಾಂಕ್, ಚಿಕ್ಕಮಗಳೂರು ಅವರು ಸಲ್ಲಿಸಿದ ದೂರಿನಲ್ಲಿ ಶ್ರೀ ಎಂ. ಚಲುವಯ್ಯ, ಹಿಂದಿನ ತಹಶೀಲ್ದಾರ್, ಸೋಮವಾರಪೇಟೆ ತಾಲ್ಲೂಕು, ಮಡಿಕೇರಿ ಜಿಲ್ಲೆ ಅವರು ಇತರರೊಂದಿಗೆ ಅಪರಾಧ ಮಾಡುವ ಸಂಚಿನಿಂದ ಸಾರ್ವಜನಿಕ ನೌಕರರಾಗಿ ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿ ಚಿಕ್ಕಮಗಳೂರು ಕೊಡಗು ಗ್ರಾಮೀಣ ಬ್ಯಾಂಕ್, ಕಂಬೂರು ಶಾಖೆ, ಸೋಮವಾರಪೇಟೆ ತಾಲ್ಲೂಕು ಈ ಸಂಸ್ಥೆಗೆ ಅಪ್ರಮಾಣಿಕತೆಯಿಂದ ಹಾಗೂ ಮೋಸ ಮಾಡುವ ಉದ್ದೇಶ ಹೊಂದಿದ್ದ ಆರೋಪ ಹಾಗೂ ಕಾಫಿ ನೋಂದಣಿ ಪ್ರಮಾಣ ಪತ್ರಗಳನ್ನು ಮೂಲ ಕಾಫಿ ನೋಂದಣಿ ಪ್ರಮಾಣ ಪತ್ರದ ವಹಿಯನ್ನು ಪರಿಶೀಲಿಸದೆ ಅಸ್ತಿತ್ವದಲ್ಲಿದ ಸರ್ವೆ ಜಮೀನು/ಕಾಫಿ ಬೆಳೆ ಬೆಳೆಯದ ಜಮೀನುಗಳಿಗೆ ಕಾಫಿ ನೋಂದಣಿ ವಹಿಯಲ್ಲಿ ದಾಖಲಿಸದೆ ಆರ್ಥಿಕ ಪ್ರತಿಫಲ ಅಪೇಕ್ಷೆಯೊಂದಿಗೆ ಹಲವರಿಗೆ ವಿತರಿಸಿದ ಅವರ ಸಹಿಯೊಂದಿಗೆ ಹೊರಡಿಸಿದ ಆರೋಪಗಳ ವಿರುದ್ಧ ಸಿ.ಆರ್.ಪಿ.ಸಿ 1973ರ ಸೆಕ್ಷನ್ 197ರ ಪ್ರಕಾರ ಅಭಿಯೋಗಗೊಳಿಸಲು ಅನುಮತಿ ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ಘನತೆವೆತ್ತ ರಾಜ್ಯಪಾಲರ ಅಧೀನ ಕಾರ್ಯದರ್ಶಿಯವರು ಈ ಬಗ್ಗೆ ಕಾನೂನಿನ್ವಯ ಅಭಿಯೋಗಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ: (3)ರ ಆದೇಶದಲ್ಲಿ ಶ್ರೀ ಎಂ. ಚಲುವಯ್ಯ, ನಿವೃತ್ತ ತಹಶೀಲ್ದಾರ್, ಸೋಮವಾರಪೇಟೆ ತಾಲ್ಲೂಕು, ಮಡಿಕೇರಿ ಜಿಲ್ಲೆ ಅವರ ಹಾಗೂ ಇತರರ ವಿರುದ್ಧ ಆರೋಪಗಳ ವಿರುದ್ಧ ಸಿ.ಆರ್.ಪಿ.ಸಿ 1973ರ ಸೆಕ್ಷನ್ 197ರ ಪ್ರಕಾರ ಅಭಿಯೋಗಗೊಳಿಸಲು ಸಿಬಿಐಗೆ ಅನುಮತಿ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ: (4)ರ ಪತ್ರದಲ್ಲಿ ಶ್ರೀ ಎಂ. ಚಲುವಯ್ಯ, ನಿವೃತ್ತ ತಹಶೀಲ್ದಾರ್ ಅವರ ವಿರುದ್ಧದ ಪ್ರಕರಣವು ಸಿಬಿಐ ಪ್ರಕರಣಗಳ ನ್ಯಾಯಾಲಯದಲ್ಲಿ ಖುಲಾಸೆಯಾಗಿರುವುದಾಗಿ, ಈ ಪ್ರಕರಣದ ಬಗ್ಗೆ ಸಿಬಿಐ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲವೆಂದು ಸಹ ತಿಳಿಸಿರುತ್ತಾರೆ.

ಶ್ರೀ ಎಂ. ಚಲುವಯ್ಯ, ನಿವೃತ್ತ ತಹಶೀಲ್ದಾರ್ ಅವರ ವಿರುದ್ಧದ ಆರೋಪಗಳಿಂದ ಖುಲಾಸೆಯಾಗಿರವುದಾಗಿ ಹೆಡ್ ಆಫ್ ಬ್ರಾಂಚ್ ಸಿಬಿಐ : ಎಸಿಬಿ ಬೆಂಗಳೂರು ಅವರು ತಿಳಿಸಿರುವುದನ್ನು ಪರಿಶೀಲಿಸಿ, ಸರ್ಕಾರವು ಸಿಬಿಐನ ವರದಿ ಮತ್ತು ಶಿಫಾರಸ್ಸನ್ನು ಒಪ್ಪಿಕೊಂಡು ಶ್ರೀ ಎಂ. ಚಲುವಯ್ಯ, ನಿವೃತ್ತ ತಹಶೀಲ್ದಾರ್ ಅವರ ವಿರುದ್ಧ ಆರೋಪಗಳ ಸಾಬೀತಾಗಿರುವುದರಿಂದ ಅವರನ್ನು ಆರೋಪ ಮುಕ್ತರನ್ನಾಗಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ : ಆರ್‌ಡಿ 28 ಎಡಿಇ 2004, ಬೆಂಗಳೂರು, ದಿನಾಂಕ : 06–06–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎಂ. ಚಲುವಯ್ಯ ನಿವೃತ್ತ ತಹಶೀಲ್ದಾರ್ ಅವರ ವಿರುದ್ಧ ಮಾಡಲಾದ ಆರೋಪಗಳಿಂದ ಅವರನ್ನು ದೋಷಮುಕ್ತರನ್ನಾಗಿಸಿ ಆದೇಶಿಸಿದೆ.

ಶ್ರೀ ಎಂ. ಚಲುವಯ್ಯ, ನಿವೃತ್ತ ತಹಶೀಲ್ದಾರ್, ಅವರು ಈ ಪ್ರಕರಣದ ಮಟ್ಟಿಗೆ ವಿಚಾರಣೆ ನಡೆಯದಿದ್ದಲ್ಲಿ ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ.ವಿ. ರಾಮಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು–3)

ಪಿ.ಆರ್. 1638

ಕಂದಾಯ ಸಚಿವಾಲಯ

ವಿಷಯ : ಶ್ರೀ ಕೆ. ನಾಗರಾಜಬಟ್, ವಿಶೇಷ ತಹಶೀಲ್ದಾರ್ ಹಾಗೂ ಪ್ರಭಾರ ವಿಶೇಷ ಭೂಸ್ವಾಧೀನಾಧಿಕಾರಿಗಳು, ಜಮಖಂಡಿ ಇವರ ಮೇಲಿನ ಇಲಾಖಾ ವಿಚಾರಣೆ ಬಗ್ಗೆ – ಆರೋಪಿತರನ್ನು ಆರೋಪ ಮುಕ್ತರನ್ನಾಗಿಸುವ ಕುರಿತು.

ಓದಲಾಗಿದೆ :

1. ಮಹಾ ವ್ಯವಸ್ಥಾಪಕರು, ಭೂಸ್ವಾಧೀನ ಕೃಮೇಯೋ ನವನಗರ, ಬಾಗಲಕೋಟೆ ಅವರ ಪತ್ರ ಸಂಖ್ಯೆ: ಮವ್ಯ/ಭೂಸ್ವಾ/ಸಿಬ್ಬಂದಿ ವಹಿ 101 2006–07/ದಿನಾಂಕ: 01–02–2007.
2. ಸರ್ಕಾರದ ಕಾರಣ ಕೇಳುವ ನೋಟೀಸು ಸಂಖ್ಯೆ: ಕಂಇ 04 ಎಡಿಇ 07 ದಿನಾಂಕ: 06–05–2008.
3. ಸರ್ಕಾರದ ಪತ್ರ ಸಂಖ್ಯೆ: ಕಂಇ 08 ಎಡಿಇ 07 ದಿನಾಂಕ: 06–10–2008 ಮತ್ತು 06–05–2008.
4. ಶ್ರೀ ಕೆ. ನಾಗರಾಜ ಭಟ್, ತಹಶೀಲ್ದಾರ್ ಅವರ ಲಿಖಿತ ಹೇಳಿಕೆ ದಿನಾಂಕ: 17–07–2009.
5. ಸರ್ಕಾರದ ಆದೇಶ ಸಂಖ್ಯೆ: ಕಂಇ 8 ಎಡಿಇ 07, ದಿನಾಂಕ: 08–06–2000.
6. ವಿಚಾರಣಾಧಿಕಾರಿ ಅವರ ವಿಚಾರಣಾ ವರದಿ ದಿನಾಂಕ: 08–06–2000.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಶ್ರೀ ಕೆ. ನಾಗರಾಜಭಟ್ ಅಂದಿನ ವಿಶೇಷ ಭೂಸ್ವಾಧಿನಾಧಿಕಾರಿಗಳು, ಕೃ ಮೇಯೋ, ಜಮಖಂಡಿ ಪ್ರಸ್ತುತ ತಹಶೀಲ್ದಾರ್, ಜಗಳೂರು, ದಾವಣಗೆರೆ ಜಿಲ್ಲೆ ಬಿದರಿ ಗ್ರಾಮದ ಕೆಲವೊಂದು ಜಮೀನುಗಳನ್ನು ಮುಳವಾಡ ಏತ ನೀರಾವರಿ ಕಾಮಗಾರಿಗಾಗಿ ಭೂಸ್ವಾಧೀನಪಡಿಸಿಕೊಂಡು ಕಲಂ 6(1)ರ ಅಧಿಸೂಚನೆಯನ್ನು ಅನುಮೋದನೆಗಾಗಿ ಸಲ್ಲಿಸಿದ್ದು, ನಂತರ ದಿನಾಂಕ: 07–05–2004 ರಂದು ಅನುಮೋದನೆಗೊಂಡಿದ್ದು, ತದನಂತರ ಸುಮಾರು ಒಂದು ವರ್ಷ ಗತಿಸಿದರೂ ಐತೀರ್ಪು ಸಲ್ಲಿಸದ ಕಾರಣ ದಿನಾಂಕ: 31–05–2005 ರಂದು ಕಾರಣ ಕೇಳುವ ನೋಟೀಸನ್ನು ಹೊರಡಿಸಲಾಗಿತ್ತು. ವಿ.ಕೆ. ನಾಗರಾಜಭಟ್ ಅಂದಿನ ವಿಶೇಷ ಭೂ ಸ್ವಾಧೀನಾಧಿಕಾರಿಗಳು ರವರು ದಿನಾಂಕ: 18–08–2006 ರಂದು ಸುಮಾರು ಎರಡು ವರ್ಷಗಳ ನಂತರ ಈಗಾಗಲೇ ಅನುಮೋದಿಸಲಾದ ಕಲಂ 6(1) ರಲ್ಲಿಯ ರಿ.ಸ.ನಂ. 252:2:2 ಕ್ಷೇತ್ರ 0 ಎಕರೆ 24 ಗುಂಟೆ ಭೂಸ್ವಾಧೀನಗೊಳ್ಳುವುದಿಲ್ಲ. ಭೂ ಮಾಲೀಕರ ಅರ್ಜಿ ದಿನಾಂಕ: 16–08–2004 ಹಾಗೂ 29–09–2004 ಗಳಂತೆ ರಿ.ಸ.ನಂ. 252:2ಬಿ ಭೂಸ್ವಾಧೀನ ಆಗುತ್ತದೆ. ಎಂದು ಕಲಂ 3(1) ರ ಕರ್ನಾಟಕ ರಾಜ್ಯಪತ್ರಕ್ಕೆ ತಿದ್ದುಪಡಿ ಹೊರಸಡಿಸಲು ವಿನಂತಿಸಿದ್ದಾರೆ. ಶ್ರೀ ಕೆ. ನಾಗರಾಜಭಟ್ ಅಂದಿನ ವಿಶೇಷ ಭೂಸ್ವಾಧೀನಾಧಿಕಾರಿಗಳು, ರಿ.ಸ.ನಂ. 252:2ಬಿ, ಭೂ ಸ್ವಾಧೀನಗೊಳ್ಳುತ್ತದೆ ಎಂದು ಸದರಿ ಜಮೀನಿನ ಭೂ ಮಾಲೀಕರು ದಿನಾಂಕ: 16–08–2004 ರಂದೇ ಅರ್ಜಿ ಸಲ್ಲಿಸಿದರೂ ಸುಮಾರು ಎರಡು ವರ್ಷಗಳ ನಂತರ ತಿದ್ದುಪಡಿಗಾಗಿ ಪ್ರಸ್ತಾವನೆ ಸಲ್ಲಿಸಿರುವರು. ರಿ.ಸ.ನಂ. 252:2ಬಿ ಕ್ಕೆ ಹೊಸದಾಗಿ ಕಲಂ 4(1), 6(1) ಹಾಗೂ ಪತ್ರಿಕಾ ಪ್ರಕಟಣೆ ಇತ್ಯಾದಿ ಉದ್ದೇಶಗಳಿಗೆ ಮುದ್ರಣ ವೆಚ್ಚದ ರೂಪದಲ್ಲಿ ಸರ್ಕಾರಕ್ಕೆ ಆರ್ಥಿಕ ಹಾನಿ ಉಂಟಾಗಲು ಕಾರಣರಾಗಿದ್ದು, ಮೇಲ್ಕಂಡಂತೆ ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾಗಿರುವುದು ಸ್ಪಷ್ಟವಾಗಿದ್ದು, ಈ ಬಗ್ಗೆ ಸದರಿಯವರು ಕಾರಣ ಕೇಳುವ ನೋಟೀಸಿಗೆ ನೀಡಿರುವ ವಿವರಣೆಯು ಸಹ ಸಮಂಜಸವಾಗಿಲ್ಲದ ಕಾರಣ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕರಡು ದೋಷಾರೋಪಣೆ ಪಟ್ಟಿ, ಅನುಬಂಧ–1 ರಿಂದ 4 ಹಾಗೂ ಪೂರಕ ದಾಖಲೆಗಳನ್ನು ಲಗತ್ತಿಸುತ್ತಾ, ಪ್ರಸ್ತಾವನೆಯನ್ನು ಮಹಾ ವ್ಯವಸ್ಥಾಪಕರು, ಭೂಸ್ವಾಧೀನ, ಕೃಮೇಯೋ, ನವನಗರ ಬಾಗಲಕೋಟೆ ರವರು ಸರ್ಕಾರಕ್ಕೆ ಕಳುಹಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರಲ್ಲಿ ಸರ್ಕಾರವು ಶ್ರೀ ಕೆ. ನಾಗರಾಜಭಟ್ ಅಂದಿನ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃಮೇಯೋ, ಜಮಖಂಡಿ ಪ್ರಸ್ತುತ ತಹಶೀಲ್ದಾರ್, ಜಗಳೂರು, ದಾವಣಗೆರೆ ಜಿಲ್ಲೆ ಇವರಿಗೆ ಕಾರಣ ಕೇಳುವ ನೋಟೀಸಿನೊಂದಿಗೆ ಮಹಾ ವ್ಯವಸ್ಥಾಪಕರು, ಭೂಸ್ವಾಧೀನ, ಕೃಮೇಯೋ, ನವನಗರ, ಬಾಗಲಕೋಟೆರವರು ಕಳುಹಿಸಿರುವ ದೋಷಾರೋಪಣೆ ಪಟ್ಟಿಯ ಅನುಬಂಧ–1 ರಿಂದ 4 ಗಳನ್ನು ಜಾರಿಗೊಳಿಸಿ, ಸದರಿ ನೋಟೀಸು ಸ್ವೀಕರಿಸಿದ 15 ದಿನಗಳೊಳಗಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ತಪ್ಪಿದ್ದಲ್ಲಿ ನಿಮ್ಮ ಪ್ರತಿವಾದವೇನೂ ಇಲ್ಲವೆಂದು ಭಾವಿಸಿ ಕ.ನಾ.ಸೇ (ವ.ನಿ ಮತ್ತು ಮೇ) ನಿಯಮ 1957ರ ನಿಯಮ 11ನೇ ಮೇರೆಗೆ ಅವರ ಮೇಲೆ ಏಕಪಕ್ಷೀಯವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸರ್ಕಾರದ ದಿನಾಂಕ: 16–10–2008 ಮತ್ತು 02–07–2009ರ ಪತ್ರಗಳಲ್ಲಿ ಶ್ರೀ ಕೆ. ನಾಗರಾಜುಭಟ್ ಅಂದಿನ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಕೃಮೇಯೋ, ಜಮಖಂಡಿ ಪ್ರಸ್ತುತ ತಹಶೀಲ್ದಾರ್, ಜಗಳೂರು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿದ್ದು, ಲಿಖಿತ ಹೇಳಿಕೆಯು ಬಾರದಿದ್ದ ಕಾರಣ, ಒಂದು ವಾರದೊಳಗಾಗಿ ಪ್ರತಿವಾದದ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ಸೂಚಿಸುತ್ತಾ, ತಪ್ಪಿದ್ದಲ್ಲಿ 1957ರ ಕ.ನಾ.ಸೇ (ವ.ನಿ ಮತ್ತು ಮೇ) ನಿಯಮಗಳು 11ನೇ ನಿಯಮದ ಮೇರೆಗೆ ಏಕಪಕ್ಷೀಯವಾಗಿ ಕ್ರಮ ಜರುಗಿಸಲಾಗುತ್ತದೆ. ಎಂದು ತಿಳಿಸಿ ಪತ್ರ ಬರೆಯಲಾಗಿರುತ್ತದೆ.

ಶ್ರೀ ಕೆ. ನಾಗರಾಜಭಟ್ ಅಂದಿನ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃಮೇಯೋ, ಜಮಖಂಡಿ ಪ್ರಸ್ತುತ ತಹಶೀಲ್ದಾರ್, ಜಗಳೂರು, ದಾವಣಗೆರೆ ಜಿಲ್ಲೆ ರವರು ಮೇಲೆ ಓದಲಾದ ಕ್ರಮ ಸಂಖ್ಯೆ: (4) ದಿನಾಂಕ: 17-07-2009 ರಂದು ತಮ್ಮ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಪುನರ್ವಸತಿ ಅಧಿಕಾರಿಗಳು ವರ್ಗವಾದ ಪ್ರಯುಕ್ತ ಜಮಖಂಡಿ ವಿಶೇಷ ಭೂ ಸ್ವಾಧೀನ ಕಛೇರಿಯ ವ್ಯಾಪ್ತಿಯಲ್ಲಿ 28 ಹಳ್ಳಿಗಳು ಮುಳುಗಡೆಯಾಗಿದ್ದು, ಸುಮಾರು 1200 ಎಕರೆ ಜಮೀನು ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಬೇಕಾಗಿದ್ದು ಪ್ರವಾಹದಿಂದ ಹಾನಿಗೊಳಗಾದ ಸಂತ್ರಸ್ಥರಿಗೆ ಪರಿಹಾರ, ಗಂಜಿ ಕೇಂದ್ರ ಹಾಗೂ ನಿರಾಶ್ರಿತರಿಗೆ ಮನೆ ಕಟ್ಟಿಸಿಕೊಡುವ ಕೆಲಸ ಒತ್ತಡ ಮತ್ತು ಇದಕ್ಕಾಗಿ ಪ್ರತಿಯೊಂದು ಗ್ರಾಮಕ್ಕೂ ಭೇಟಿ ನೀಡಿ, ಸ್ಥಳ ತನಿಖೆ ನಡೆಸಿ ಪರಿಹಾರ ಕಾರ್ಯ ಕೈಗೊಳ್ಳಬೇಕಾಗಿದ್ದು, ಭೂ ಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ, 4ಬಿ1 ಅಧಿಸೂಚನೆ 6ಬಿ1 ಸೂಚನೆ ಹೊರಡಿಸುವುದು, ಜೆ.ಎಂ.ಸಿ. ಮಾಡುವುದು ನೋಟೀಸು ನೀಡಿ, ಗ್ರಾಮಗಳಿಗೆ ತೆರಳಿ ಗ್ರಾಮಸಭೆ ನಡೆಸಿ ಪರಿಹಾರ ಚೆಕ್ ವಿತರಿಸುವ ಮಹತ್ತರವಾದ ಜವಾಬ್ದಾರಿ ಇದ್ದು, ಇದರೊಂದಿಗೆ ಜಮಖಂಡಿ, ಅಥಣಿ, ಬಾಗಲಕೋಟೆ ಹಾಗೂ ಬಿಜಾಪುರ ಸಿವಿಲ್ ನ್ಯಾಯಾಲಯಗಳಲ್ಲಿ ಸರ್ಕಾರದ ಪರ ವಾದಿಸಬೇಕಾಗಿದ್ದು, ಇಷ್ಟೆಲ್ಲಾ ಜವಾಬ್ದಾರಿಯ ತಮ್ಮ ಮೇಲಿದ್ದರಿಂದ, 28(ಎ) ಅರ್ಜಿಗಳು ಸ್ವೀಕೃತವಾದ ಸಮಯದಲ್ಲಿ 1200 ಎಕರೆ ಜಮೀನು ಭೂ ಸ್ವಾಧೀನ ಪಡೆದುಕೊಳ್ಳುವ ಪ್ರಕ್ರಿಯೆ ಭರದಿಂದ ಸಾಗುತ್ತಿದ್ದು, ಸದರಿ ಐತೀರ್ಪು ರಚಿಸುವ ಕಾರ್ಯ ನಿಗದಿತ ಅವಧಿಯೊಳಗೆ ಪೂರ್ಣಗೊಳ್ಳದಿದ್ದಲ್ಲಿ ಅಸಿಂಧು ಆಗಿ ನಿಷ್ಪಲಗೊಳ್ಳುವುದನ್ನು ತಪ್ಪಿಸುವ ಉದ್ದೇಶದಿಂದ ಹಾಗೂ ಈ ಬಗ್ಗೆ ಮೇಲಾಧಿಕಾರಿಗಳಿಂದ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದರಿಂದ 28(ಎ) ಅರ್ಜಿಗಳ ಕಟ್ಟಡದ ಮಾಲೀಕರಿಗೆ ಈಗಾಗಲೇ ಮೊದಲನೆ ಕಂತಿನ ಪರಿಹಾರ ಧನವನ್ನು ನೀಡಿದ್ದರಿಂದ 1200 ಎಕರೆ ಜಮೀನಿನ ಐತೀರ್ಪಿನ ಕಾರ್ಯ ಮುಗಿದ ನಂತರ 28(ಎ) ಪ್ರಕರಣ ವಿಲೇನಗೊಳಿಸಲು ತೀರ್ಮಾನಿಸಲಾಯಿತು. 28(ಎ) ಅಡಿಯಲ್ಲಿ ಸಲ್ಲಿಸಿದ 18 ಅರ್ಜಿಗಳನ್ನು ಶೀಘ್ರವಾಗಿ ವಿಲೇ ಮಾಡುವ ಆತುರತೆ ಇದ್ದರೂ ಅರ್ಜಿದಾರರು ವಿಚಾರಣೆಗೆಆಸ್ಪದ ಹಾಗೂ ಕನಿಷ್ಠ ಕಾಲಾವಕಾಶ ನೀಡದೇ ವಿಶೇಷ ಭೂ ಸ್ವಾಧೀನಾಧಿಕಾರಿಗಳಿಂದ ಯಾವುದೇ ಆದೇಶ. ಹಿಂಬರಹ ಪಡೆಯದೇ 18(3)(ಬಿ) ಅಡಿಯಲ್ಲಿ ಅಥಣಿ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು.ಈ ಬಗ್ಗೆ ಅಫಿಡವಿಟ್ ಸಹ ಸಲ್ಲಿಸಿದ್ದು, ನ್ಯಾಯಾಲಯದ ಅಂತಿಮ ಆದೇಶ ಬರುವ ಪೂರ್ವದಲ್ಲಿ ಈ ಅರ್ಜಿಗಳನ್ನು ವಿಲೀನಗೊಳಿಸಿದಲ್ಲಿ, ನ್ಯಾಯಾಲಯದ ಪ್ರಿಜಿಡೀಸ್ ಆಗುತ್ತದೆ. ಆದ ಪ್ರಯುಕ್ತ ಮುಂದಿನ ಪ್ರಕ್ರಿಯೆ ತಡೆಹಿಡಿಯಲಾಗಿತ್ತು. ಅಥಣಿ ಸಿವಿಲ್ ನ್ಯಾಯಾಲಯವು ದಿನಾಂಕ: 11-09-2009 ರಂದು ನೀಡಿದ ತೀರ್ಪು ಪ್ರಶ್ನಿಸಿ ದಿನಾಂಕ: 25-10-2006 ರಂದು ಸರ್ಕಾರದ ವಿಶೇಷ ಅಧಿಕಾರಿಗಳು, ಕಾನೂನು ಕೋಶ, ಬಾಗಲಕೋಟೆ ಇವರು ಸಿ.ಆರ್.ಪಿ.ಸಿ.ನಂ. 6/2007 ರಂದು ಆದೇಶ ನೀಡಿರುತ್ತದೆ. ಜಮಖಂಡಿಯಿಂದ ತಮಗೆ ವರ್ಗವಾದ ಕಾರಣ ದಿನಾಂಕ: 13-09-2006 ರಂದು ಕರ್ತವ್ಯದಿಂದ ಬಿಡುಗಡೆ ಹೊಂದಿದ್ದು, ಕಾರಣ ಉಚ್ಚ ನ್ಯಾಯಾಲಯದ ತೀರ್ಪಿನ ವಿಚಾರ ತಮ್ಮ ಗಮನಕ್ಕೆ ಬಂದಿರುವುದಿಲ್ಲ. ಅತಿ ಹೆಚ್ಚಿನ ಕೆಲಸದ ಒತ್ತಡ ಜವಾಬ್ದಾರಿ ಇದ್ದು, ದುರುದ್ದೇಶದಿಂದ ಕೂಡಿದ್ದು, ಇಲ್ಲ ಎಂದು ತಿಳಿಸಿ ಮೇಲಿನ ಅಂಶಗಳ ಹಿನ್ನಲೆಯಲ್ಲಿ, ತಮ್ಮನ್ನು ಈ ಆಪಾದನೆಯಿಂದ ಮುಕ್ತಗೊಳಿಸಿ ದೋಷಮುಕ್ತರನ್ನಾಗಿ ಮಾಡಲು ಮತ್ತು ತಮಗೆ ವಿಧಿಸಿರುವ ದಂಡನೆಯನ್ನು ಕೈಬಿಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (5)ರಲ್ಲಿ ಶ್ರೀ ಕೆ. ನಾಗರಾಜಭಟ್, ಅವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಶ್ರೀ ಡಿ.ವಿ. ಸೇಟ್, ನಿವೃತ್ತ ನ್ಯಾಯಾಧೀಶರು, ಧಾರವಾಡ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ವಿಶೇಷ ಭೂ ಸ್ವಾಧೀನಾಧಿಕಾರಿ ಕೃಮೇಯೋ, ಜಮಖಂಡಿ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಈ ಪ್ರಕರಣದ ವಿಚಾರಣೆ ನಡೆಸಿ ಸಲ್ಲಿಸಿರುವ ವಿಚಾರಣಾಧಿಕಾರಿಗಳ ವಿಚಾರಣಾ ವರದಿಯಲ್ಲಿ ಆಪಾದಿತರ ಮೇಲೆ ಹೊರಿಸಲಾದ ಆರೋಪಗಳು ಸಾಬೀತಾಗಿಲ್ಲವೆಂದು ಮೇಲೆ ಓದಲಾದ ಕ್ರಮ ಸಂಖ್ಯೆ: (6)ರಲ್ಲಿ ವರದಿ ಮತ್ತು ದಾಖಲೆಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿ ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ, ಸರ್ಕಾರವು ವಿಚಾರಣಾಧಿಕಾರಿಯವರ ವಿಚಾರಣಾ ವರದಿ ಒಪ್ಪಿಕೊಂಡು ಸದರಿ ಅಧಿಕಾರಿಯ ಆಪಾದನೆಗಳು ಸಾಬೀತಾಗಿರುವುದರಿಂದ ಅವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಗಳಿಂದ ಮುಕ್ತಗೊಳಿಸಲು ನಿರ್ಧರಿಸಿರುವುದರಿಂದ ಈ ಆದೇಶ:

ಸರ್ಕಾರದ ಆದೇಶ ಸಂಖ್ಯೆ: ಕಂಇ 8 ಎಡಿಇ 2007 ಬೆಂಗಳೂರು ದಿನಾಂಕ: 06-06-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಶ್ರೀ ಕೆ. ನಾಗರಾಜಭಟ್, ವಿಶೇಷ ತಹಶೀಲ್ದಾರ್ ಪ್ರಸ್ತುತ ತಹಶೀಲ್ದಾರ್ ಹಗರಿಬೊಮ್ಮನಹಳ್ಳಿ ಅವರ ವಿರುದ್ಧ ದಿನಾಂಕ: 08-06-2010ರ ಸರ್ಕಾರಿ ಆದೇಶ ಸಂಖ್ಯೆ: ಕಂಇ 8 ಎಡಿಇ 2010ರಲ್ಲಿ ಹೊರಿಸಲಾದ ಅರೋಪಗಳಿಂದ ಮುಕ್ತಗೊಳಿಸಿ ಆದೇಶಿಸಿದೆ.

ಶ್ರೀ ಕೆ. ನಾಗರಾಜಭಟ್, ವಿಶೇಷ ತಹಶೀಲ್ದಾರ್ ಪ್ರಸ್ತುತ ತಹಶೀಲ್ದಾರ್ ಹಗರಿಬೊಮ್ಮನಹಳ್ಳಿ ಅವರು ಈ ಪ್ರಕರಣದ ಮಟ್ಟಿಗೆ ವಿಚಾರಣೆ ನಡೆಯದಿದ್ದಲ್ಲಿ ಯಾವ ಸೌಲಭಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ವಿ. ರಾಮಲಿಂಗಯ್ಯ

ಪಿ.ಆರ್.ನಂ. 1639

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು-3).

ಕಂದಾಯ ಸಚಿವಾಲಯ

ವಿಷಯ : ಶ್ರೀ ಆರ್. ಹನುಮರೆಡ್ಡಿ ಕಛೇರಿ ಸಹಾಯಕರು, ಜಿಲ್ಲಾಧಿಕಾರಿಯವರ ಕಛೇರಿ, ಮೈಸೂರು ಅವರಿಗೆ ಮೊದಲನೆ ವಾರ್ಷಿಕ ಸ್ಥಗಿತ ವೇತನ ಬಡ್ತಿ ಮಂಜೂರು ಮಾಡುವ ಕುರಿತು.

ಓದಲಾಗಿದೆ : 1. ಜಿಲ್ಲಾಧಿಕಾರಿ, ಮೈಸೂರು ಅವರ ಪತ್ರ ಸಂಖ್ಯೆ: ಎಸಿಟಿ (1)ಸಿಆರ್ 66/2011-12 ದಿನಾಂಕ: 23-07-2012.

2. ಸರ್ಕಾರಿ ಪತ್ರ ಸಂಖ್ಯೆ: ಆರ್‌ಡಿ 373 ಎಎಸ್‌ಡಿ 11 ದಿನಾಂಕ: 16-09-2011.

3. ಮಹಾಲೇಖಪಾಲರು, (ಎ ಮತ್ತು ಇ) ಕರ್ನಾಟಕ, ಬೆಂಗಳೂರು, ಅವರ ಪತ್ರ ಸಂಖ್ಯೆ: ಜಿಇ 1/ಆರ್ 1/Vol H-III-74/026, ದಿನಾಂಕ: 27-10-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರಲ್ಲಿ ಶ್ರೀ ಆರ್. ಹನುಮರೆಡ್ಡಿ, ಕಛೇರಿ ಸಹಾಯಕರು, ಜಿಲ್ಲಾಧಿಕಾರಿಯವರ ಕಛೇರಿ, ಮೈಸೂರು ಅವರಿಗೆ ಮೊದಲನೆಯ ಸ್ಥಗಿತ ವೇತನ ಬಡ್ತಿ ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಶ್ರೀ ಆರ್. ಹನುಮರೆಡ್ಡಿ, ಕಛೇರಿ ಸಹಾಯಕರು, ಜಿಲ್ಲಾಧಿಕಾರಿಯವರ ಕಛೇರಿ, ಮೈಸೂರು ಅವರಿಗೆ ಮೊದಲನೆಯ ಸ್ಥಗಿತ ವೇತನ ಬಡ್ತಿ ಮಂಜೂರಾತಿಗೆ ಅರ್ಹರಿರುವ ಬಗ್ಗೆ ಮಾಹಿತಿ ಕೋರಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ: (3)ರಲ್ಲಿ ಶ್ರೀ ಆರ್. ಹನುಮರೆಡ್ಡಿ, ಕಛೇರಿ ಸಹಾಯಕರು, ಜಿಲ್ಲಾಧಿಕಾರಿಯವರ ಕಛೇರಿ, ಮೈಸೂರು ಅವರಿಗೆ ಮೊದಲನೆಯ ಸ್ಥಗಿತ ವೇತನ ಬಡ್ತಿ ಮಂಜೂರು ಬಗ್ಗೆ ತಿಳಿಸಿರುತ್ತಾರೆ. ಆದ್ದರಿಂದ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 373 ಎಎಸ್‌ಡಿ 2011, ಬೆಂಗಳೂರು, ದಿನಾಂಕ: 07-06-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಆರ್. ಹನುಮರೆಡ್ಡಿ, ಕಛೇರಿ ಸಹಾಯಕರು, ಜಿಲ್ಲಾಧಿಕಾರಿಯವರ ಕಛೇರಿ, ಮೈಸೂರು ಅವರಿಗೆ ವೇತನ ಶ್ರೇಣಿ ರೂ. 22,800-43,200 ವೇತನ ಶ್ರೇಣಿಯಲ್ಲಿ 01-08-2011 ರಿಂದ ಮೊದಲನೆಯ ಸ್ಥಗಿತ ವೇತನ ಬಡ್ತಿ ಮಂಜೂರು ಮಾಡಿ ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ವಿ. ರಾಮಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1640 ಕಂದಾಯ ಇಲಾಖೆ (ಸೇವೆಗಳು-3)

ವಸತಿ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆ ಜೋಗ-ಕಾರ್ಗಲ್ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನಾಮನಿರ್ದೇಶಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂ. ವಇ 42 ಹೆಚ್‌ಎಎಂ 1999 ದಿನಾಂಕ: 10.05.2000

ಪ್ರಸ್ತಾವನೆ :

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪುನರ್‌ರಚಿಸಲು ತೀರ್ಮಾನಿಸಿದ್ದು, ಅದರಂತೆ ಶಿವಮೊಗ್ಗ ಜಿಲ್ಲೆ ಜೋಗ-ಕಾರ್ಗಲ್ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ 66 ಹೆಚ್‌ಎಎಸ್ 2012, ಬೆಂಗಳೂರು, ದಿನಾಂಕ: 30ನೇ ಮೇ 2012

ಶಿವಮೊಗ್ಗ ಜಿಲ್ಲೆ ಜೋಗ-ಕಾರ್ಗಲ್ ಪಟ್ಟಣ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನು ನೇಮಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಆದೇಶಿಸಿದೆ.

1	ಶ್ರೀ ಸಿದ್ದರಾಜು ಬಿನ್ ಪುಟ್ಟಸೋಮಾಚಾರಿ, ರಾಮಮಂದಿರ ಹಿಂಭಾಗ, ಜೋಗ ಸಾಗರ ತಾಲ್ಲೂಕು.	ಸಾಮಾನ್ಯ
2	ಶ್ರೀ ಮಂಜಪ್ಪ ಬಿನ್ ಬೀರಾನಾಯ್ಕ್, ದೇವರಮಕ್ಕಿ, ಕಾರ್ಗಲ್ ಅಂಚೆ, ಸಾಗರ ತಾಲ್ಲೂಕು.	ಹಿಂ. ವರ್ಗ
3.	ಶ್ರೀ ಆನಂದ ಪಿ. ಬಿನ್ ಪೆರಿಸ್ವಾಮಿ, ಜೋಗ ರಸ್ತೆ, ಕಾರ್ಗಲ್, ಸಾಗರ ತಾಲ್ಲೂಕು.	ಪ. ಜಾತಿ
4.	ಶ್ರೀಮತಿ ಖುರ್ಷಿದಾ ಬೇಗಂ ಕೋಂ. ಸೈಯದ್ ಆಲಿ, ಬಜಾರ್‌ಲೈನ್, ಮಲಬಾರ್ ಕ್ಯಾಂಪ್, ಜೋಗ ಸಾಗರ ತಾಲ್ಲೂಕು.	ಅ. ಸಂ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1648 **ಬಿ. ಶಂಕರಪ್ಪ**

ಪೀಠಾಧಿಕಾರಿ-2, ವಸತಿ ಇಲಾಖೆ.

ವಸತಿ ಸಚಿವಾಲಯ

ವಿಷಯ : ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಜೆಎನ್ಎನ್ಯುಆರ್ಎಂ–ಬಿಎಸ್ಯುಪಿ ಯೋಜನೆಯಡಿ ಪ್ರಾರಂಭಿಸದೇ ಇರುವ 4742 ಮನೆಗಳಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಕಕೊಅಮಂಡಳಿರವರ ಪತ್ರ ಸಂಖ್ಯೆ: ಕಕೊಅಮಂ/ಆಯುಕ್ತರು/ತಾಂನಿ–1/ ನರ್ಮ್/ಹೆಚ್ಚುವರಿ/2011–12/108, ದಿನಾಂಕ: 09–04–2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ:1 ರಲ್ಲಿ ಕೇಂದ್ರ ಪುರಸ್ಕೃತ ಜೆಎನ್ಎನ್ಯುಆರ್ಎಂ–ಬಿಎಸ್ಯುಪಿ ಯೋಜನೆಯಡಿ ಬೆಂಗಳೂರು ಮತ್ತು ಮೈಸೂರು ನಗರಗಳ 112 ಕೊಳಚೆ ಪ್ರದೇಶಗಳಲ್ಲಿ 20042 ಮನೆಗಳನ್ನು ಮೂಲಭೂತ ಸೌಕರ್ಯಗಳೊಂದಿಗೆ ನಿರ್ಮಿಸುವ ಕಾಮಗಾರಿಗೆ ಕೇಂದ್ರ ಸರ್ಕಾರದ ಅನುಮೋದನೆ ದೊರೆತಿದ್ದು, ಯೋಜನಾ ಮೊತ್ತ ರೂ. 44966.00 ಲಕ್ಷಗಳಾಗಿರುತ್ತದೆ. 2006–07 ಮತ್ತು 2007–08ರಲ್ಲಿ ತಯಾರಿಸಿದ ಮೂಲ ಯೋಜನಾ ಮೊತ್ತ ವರದಿಯಲ್ಲಿನ ಬಹತೇಕ ಕೊಳಚೆ ಪ್ರದೇಶಗಳಲ್ಲಿ ವಿವಿಧ ತಾಂತ್ರಿಕ ಕಾರಣಗಳಿಂದ ಸ್ಥಳ ಸಮಸ್ಯೆಗಳಿದ್ದುದ್ದರಿಂದ ಸ್ಥಳ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸ್ಥಳ ಸಮಸ್ಯೆ ಇರುವ ಕೊಳಚೆ ಪ್ರದೇಶಗಳನ್ನು ಕೈಬಿಟ್ಟು ಬೇರೆ ಕೊಳಚೆ ಪ್ರದೇಶಗಳಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪ್ರಸ್ತಾವನೆಯನ್ನು ತಯಾರಿಸಿ ಸದರಿ ಸ್ಥಳ ಬದಲಾವಣೆ ಪ್ರಸ್ತಾವನೆಗೆ ದಿನಾಂಕ: 08–12–2010 ರಂದು ನಡೆದ 17ನೇ ಎಸ್ಎಲ್ಇಸಿ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಕಾಮಗಾರಿಗಳನ್ನು ಪ್ರಾರಂಭಿಸಲಾಗಿರುತ್ತದೆ. ಸದರಿ ಕಾರಣಗಳಿಂದಾಗಿ ಬೆಂಗಳೂರು ನಗರದಲ್ಲಿ 4410 ಮನೆಗಳನ್ನು ಮತ್ತು ಮೈಸೂರು ನಗರದಲ್ಲಿ 332 ಮನೆಗಳು ಒಟ್ಟು 4742 ಮನೆಗಳ ಕಟ್ಟಡ ಕಾರ್ಯವನ್ನು ಇನ್ನು ಪ್ರಾರಂಭಿಸದೇ ಇರುವುದಾಗಿ ತಿಳಿಸುತ್ತಾ, ಸದರಿ ಮನೆಗಳನ್ನು ನಿರ್ಮಿಸಲು ಈಗಾಗಲೇ ಅನುಮೋದನೆ ನೀಡಿರುವ ಮೊತ್ತಕ್ಕಿಂತ ಹೆಚ್ಚುವರಿಯಾಗಿ ರೂ. 3608.52 ಲಕ್ಷಗಳು ಅವಶ್ಯಕತೆ ಇದೆಯೆಂದು ತಿಳಿಸಲಾಗಿದೆ.

ಹಾಗೂ ಈ ಬಗ್ಗೆ ದಿನಾಂಕ: 11–01–2012 ರಂದು ನಡೆದ 21ನೇ ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಹೆಚ್ಚುವರಿ ಅನುದಾನದ ಮೊತ್ತ ರೂ. 3608.52 ಲಕ್ಷಗಳನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಹಾಗೂ ವಸತಿ ಇಲಾಖೆಯ ಭರಿಸಲು ತೀರ್ಮಾನಿಸಲಾಗಿರುತ್ತದೆ.

ಆರ್ಥಿಕ ಇಲಾಖೆಯು ತಿಳಿಸಿರುವಂತೆ ನಗರಾಭಿವೃದ್ಧಿ ಇಲಾಖೆಯ ಪಾಲಿನ ಶೇ. 50%ರಷ್ಟು ಅಂದರೆ ರೂ. 18.04 ಕೋಟಿಗಳನ್ನು ಲೆಕ್ಕ ಶೀರ್ಷಿಕೆ 3604–00–191–1–51(059) ರಡಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಜೆಎನ್ಎನ್ಯುಆರ್ಎಂ–ಬಿಎಸ್ಯುಪಿ ಯೋಜನೆಯಡಿ ಪ್ರಾರಂಭಿಸದೇ ಇರುವ 4742 ಮನೆಗಳಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಬೇಕಾಗಿರುತ್ತದೆ.

ಆರ್ಥಿಕ ಇಲಾಖೆಯವರ ಅಭಿಪ್ರಾಯದಂತೆ ಉಳಿದ ಶೇ. 50% ಅನುದಾನವನ್ನು ವಸತಿ ಇಲಾಖೆ ವತಿಯಿಂದ ಬಿಡುಗಡೆ ಮಾಡಬೇಕಾಗಿದೆ. ಆದ್ದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ವಇ 15 ಕೊಮಂಲೆ 2012, ಬೆಂಗಳೂರು, ದಿನಾಂಕ: 11–06–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಆರ್ಥಿಕ ಇಲಾಖೆಯು ತಿಳಿಸಿರುವಂತೆ ನಗರಾಭಿವೃದ್ಧಿ ಇಲಾಖೆಯ ಪಾಲಿನ ಶೇ. 50% ರಷ್ಟು ಅಂದರೆ ರೂ. 18.04 ಕೋಟಿಗಳನ್ನು ಲೆಕ್ಕ ಶೀರ್ಷಿಕೆ 3604–00–191–1–51 (059) ರಡಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಜೆಎನ್ಎನ್ಯುಆರ್ಎಂ–ಬಿಎಸ್ಯುಪಿ ಯೋಜನೆಯಡಿ ಪ್ರಾರಂಭಿಸದೇ ಇರುವ 4742 ಮನೆಗಳನ್ನು ಪೂರ್ಣಗೊಳಿಸಲು ಹೆಚ್ಚುವರಿ ಅನುದಾನವನ್ನು ನಗರಾಭಿವೃದ್ಧಿ ಇಲಾಖೆಯು ಬಿಡುಗಡೆ ಮಾಡಬೇಕಾಗಿದೆ. ಅದರಂತೆ ವಸತಿ ಇಲಾಖೆಯ ಪಾಲಿನ ಶೇ. 50 ರಷ್ಟು ಅಂದರೆ 18.04 ಕೋಟಿಗಳನ್ನು ಲೆಕ್ಕ ಶಿರ್ಷಿಕೆ 2217–04–191–2–02– ಕೊಳಚೆಗಳ ಸುಧಾರಣೆ (ಯೋಜನೆ) ಅಡಿಯಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಜೆಎನ್ಎನ್ಯುಆರ್ಎಂ–ಬಿಎಸ್ಯುಪಿ ಯೋಜನೆಯಡಿ ಪ್ರಾರಂಭಿಸದೇ ಇರುವ 4742 ಮನೆಗಳಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ.

ಈ ಅನುದಾನವನ್ನು ಈ ಕೆಳಕಂಡ ನಿಬಂಧನೆಗೊಳಪಟ್ಟು ಬಿಡುಗಡೆಗೊಳಿಸಿದೆ.

1. ಸರ್ಕಾರದ ಉಪ ಕಾರ್ಯದರ್ಶಿ, ವಸತಿ ಇಲಾಖೆ, ಬೆಂಗಳೂರು ಇವರು ಹಣ ಬಿಡುಗಡೆ ಮಾಡುವ ಬಿಲ್ಲಿಗೆ ಮೇಲೆ ರುಜು ಮಾಡಲು ಅಧಿಕೃತವಾಗಿರುತ್ತಾರೆ.
2. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನದ ಬಗ್ಗೆ ಪ್ರತ್ಯೇಕ ಲೆಕ್ಕವನ್ನು ಇಡತಕ್ಕದ್ದು.
3. ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆ ಮಾಡಿದೆಯೋ ಅದೇ ಉದ್ದೇಶಕ್ಕಾಗಿ ಬಳಸತಕ್ಕದ್ದು.
4. ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣಕಾಸಿನ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು ಇವರಿಗೆ ಕಳುಹಿಸಿ ಅದರ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್ಡಿ 257 ವೆಚ್ಚ–9 2012, ದಿನಾಂಕ: 04–06–2012ರ ಸಹಮತಿಯೊಂದಿಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1649

ಬಿ. ಶಂಕರಪ್ಪ

ಪೀಠಾಧಿಕಾರಿ–4(ಪ್ರ), ವಸತಿ ಇಲಾಖೆ.

ವಸತಿ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆ ಹೊಸನಗರ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನಾಮ ನಿರ್ದೇಶಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂ. ವಇ 42 ಹೆಚ್‌ಎಎಂ 1999 ದಿನಾಂಕ: 10.05.2000.

ಪ್ರಸ್ತಾವನೆ :

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪುನರ್ರಚಿಸಲು ತೀರ್ಮಾನಿಸಿದ್ದು, ಅದರಂತೆ ಶಿವಮೊಗ್ಗ ಜಿಲ್ಲೆ ಹೊಸನಗರ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ. ವಇ 67 ಹೆಚ್‌ಎಎಸ್ 2012, ಬೆಂಗಳೂರು, ದಿನಾಂಕ: 30ನೇ ಮೇ 2012

ಶಿವಮೊಗ್ಗ ಜಿಲ್ಲೆ ಹೊಸನಗರ ಪಟ್ಟಣ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನು ನೇಮಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿ ಆದೇಶಿಸಿದೆ.

1	ಶ್ರೀಮತಿ ಸುಜಾತ ಕೋಂ ಸುರೇಶ್, ಶಿವಮೊಗ್ಗ ರಸ್ತೆ, ಹೊಸನಗರ.	ಸಾಮಾನ್ಯ (ಮಹಿಳೆ)
2	ಶ್ರೀ ಮಂಜುನಾಥ್ ಡಿ. ಬಿನ್ ದೇವಪ್ಪ ಸ್ಮಶಾನ ರಸ್ತೆ, ಮಾರಿಗುಡ್ಡ, ಹೊಸನಗರ.	ಹಿಂ. ವರ್ಗ
3	ಶ್ರೀ ಜಿ. ಅಶ್ರಫ್ ಬಿನ್ ಈಸೂಫ್, ಚರ್ಚ್ ರಸ್ತೆ, ಹೊಸನಗರ	ಅ. ಸಂ.
4	ಶ್ರೀ ಹೆಚ್.ಎಸ್. ನಿಂಗಮೂರ್ತಿ ಬಿನ್ ಸಣ್ಣ ಹನುಮಂತಪ್ಪ, ಮಾರಿಗುಡ್ಡ, ಹೊಸನಗರ ತಾಲ್ಲೂಕು, ಹೊಸನಗರ	ಪ. ಜಾತಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1650

ಬಿ. ಶಂಕರಪ್ಪ

ಪೀಠಾಧಿಕಾರಿ-2, ವಸತಿ ಇಲಾಖೆ.

ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಪರೀಕ್ಷಾರ್ಥ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯ ತರಬೇತಿಗೆ ಉಪ ವಿಭಾಗಗಳಲ್ಲಿ ಸಂಖ್ಯಾತಿರಿಕ್ತ (supernumory) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳನ್ನು ಸೃಜಿಸುವ ಬಗ್ಗೆ ಆದೇಶ

ಓದಲಾಗಿದೆ : **1)** ದಿನಾಂಕ: 28-03-2012ರ ಆದೇಶ ಸಂಖ್ಯೆ: ಅಪಜೀ 178 ಅಪಸೇ 2009

2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ರವರ ಪತ್ರ ಸಂಖ್ಯೆ: A1.EST.CR-48/2007-08, ದಿನಾಂಕ: 21-04-12

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ, ಕರ್ನಾಟಕ ಲೋಕಸೇವಾ ಆಯೋಗದಿಂದ 2006-07 ನೇ ಸಾಲಿನಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗೆ ಆಯ್ಕೆಯಾದ 5 ಅಭ್ಯರ್ಥಿಗಳಿಗೆ 12 ವಾರಗಳ ಉಪ ವಿಭಾಗ ತರಬೇತಿಯನ್ನು ಆಯೋಜಿಸಿ, ಪರಿಷ್ಕೃತ ಕಾರ್ಯತರಬೇತಿಯನ್ನು ಅಳವಡಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ, ದಿನಾಂಕ: 08-08-2012 ರಿಂದ 12 ವಾರಗಳ ಉಪ ವಿಭಾಗ ತರಬೇತಿಗಾಗಿ, ಕೆಳಕಂಡ ಪರೀಕ್ಷಾರ್ಥ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಅವರ ಹೆಸರಿನ ಮುಂದೆ ನಮೂದಿಸಿರುವ ಉಪ ವಿಭಾಗಗಳಿಗೆ ನೇಮಿಸಿ, ಈಗ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಜೊತೆ ಕಾರ್ಯನಿರ್ವಹಿಸಲು ದಿನಾಂಕ: 08-08-2012 ರಿಂದ 30-10-2012 ರವರೆಗೆ 5 ತಾತ್ಕಾಲಿಕ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳನ್ನು ಹೆಚ್ಚುವರಿಯಾಗಿ ಸೃಜಿಸಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪರೀಕ್ಷಾರ್ಥ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯ ಹೆಸರು	ಉಪ ವಿಭಾಗ
ಶ್ರೀಯುತರಾದ	
1. ಕುಮಾರಿ ಹೆಚ್ ಅನುಪಮಾ	ಮೈಸೂರು
2. ಹರ್ಷಬಾನು ಜೆ.ಪಿ	ಬೆಳಗಾಂ
3. ಪ್ರಸನ್ನ ಕೃಷ್ಣ ಪಟಗಾರ್	ಶಿರಸಿ
4. ದಿನೇಶ್ ಕುಮಾರ್ ವೈ.ಕೆ	ಮಂಗಳೂರು
5. ಕುಮಾರಿ ಸರೀನಾ ಸಿಕ್ಕಲಿಗರ್	ಚಿತ್ರದುರ್ಗ

ಪ್ರಸ್ತಾವನೆಯನ್ನು, ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ. ಅಪಜೀ 178 ಅಪಸೇ 2009, ಬೆಂಗಳೂರು, ದಿನಾಂಕ: 11-06-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕೆಳಕಂಡ ಪರೀಕ್ಷಾರ್ಥ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಉಪ ವಿಭಾಗದ ತರಬೇತಿಗಾಗಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಜೊತೆ ಕರ್ತವ್ಯ ನಿರ್ವಹಿಸಲು, ಕೆಳಕಂಡ ಉಪ ವಿಭಾಗದಲ್ಲಿ ದಿನಾಂಕ: 08-08-2012ರಿಂದ 30-10-2012 ರವರೆಗೆ 5 ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸಂಖ್ಯಾತಿರಿಕ್ತ ಹುದ್ದೆಗಳನ್ನು ಸೃಜಿಸಿ ಆದೇಶಿಸಿದೆ.

ಪರೀಕ್ಷಾರ್ಥ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯ ಹೆಸರು	ಉಪ ವಿಭಾಗ
ಶ್ರೀಯುತರಾದ	
1. ಕುಮಾರಿ ಹೆಚ್ ಅನುಪಮಾ	ಮೈಸೂರು
2. ಹರ್ಷಬಾನು ಜೆ.ಪಿ.	ಬೆಳಗಾಂ
3. ಪ್ರಸನ್ನ ಕೃಷ್ಣ ಪಟಗಾರ್	ಶಿರಸಿ
4. ದಿನೇಶ್ ಕುಮಾರ್ ವೈ.ಕೆ.	ಮಂಗಳೂರು
5. ಕುಮಾರಿ ಸರೀನಾ ಸಿಕ್ಕಲಿಗರ್	ಚಿತ್ರದುರ್ಗ

ಈ ಆದೇಶವನ್ನು ಆರ್ಥಿಕ ಇಲಾಖೆಯ ದಿನಾಂಕ: 14-05-1968ರ ಅಧಿಕೃತ ಜ್ಞಾಪನ ಸಂಖ್ಯೆ: ಎಫ್‌ಡಿ 040 ಎಸ್‌ಆರ್‌ಎಸ್ 1968 ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1651

ಎಸ್. ಬಾಲಕೃಷ್ಣಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾಲ್ಲೂಕಿನ ಕುಮತೆ ವಸರು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನಿಗೆ ನ್ಯಾಯಾಲಯದ ಆದೇಶದಂತೆ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 17/01/12 ರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜೆಪಿ/ ಭೂಸ್ವಾಪ್ರ/ 2011-12/242.

ಪ್ರಸ್ತಾವನೆ :

ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾಲ್ಲೂಕಿನ ಕುಮತೆ ವಸರು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಗೋಠೆ ತೇರದಾಳ ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಪ್ರಸ್ತಾವನೆ ಸಲ್ಲಿಸಿದ್ದಾರೆ. ಭೂಸ್ವಾಧೀನ ಪ್ರಕ್ರಿಯೆ ವಿವರಗಳು ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆಯನ್ನು ಗ್ರಾಮ ಚಾವಡಿಯಲ್ಲಿ ಪ್ರಕಟಿಸಿದ ದಿನಾಂಕ 05/07/01.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿ ಭೂಸ್ವಾಧೀನಾಧಿಕಾರಿಗಳು ಐತೀರ್ಪು ರಚಿಸಿದ ದಿನಾಂಕ 22/01/04.

ಭೂಸ್ವಾಧೀನಾಧಿಕಾರಿಗಳ ಐತೀರ್ಪಿನಂತೆ ಪರಿಹಾರ ಪಡೆದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಜಮಖಂಡಿ ಸಿವಿಲ್ ಜಡ್ಜ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಎಲ್.ಎ.ಸಿ. ಪ್ರಕರಣ ಸಂಖ್ಯೆ: 249/04ನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ 23/05/10ರಂದು ನೀಡಿದ ಆದೇಶದಂತೆ ಪ್ರತಿ ಎಕರೆಗೆ ರೂ. 1,60,086/-ಗಳನ್ನು ನಿಗದಿಪಡಿಸಿದೆ. ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯ ಕಾನೂನು ಕೋಶವು ಪತ್ರ ಸಂಖ್ಯೆ: ಆರ್‌ಡಿ 951 ಎಲ್‌ಸಿಬಿ 2010, ದಿನಾಂಕ 12/01/11ರಂದು ಅಭಿಪ್ರಾಯ ನೀಡಿದೆ. ಪಾವತಿಸಬೇಕಾದ ಪರಿಹಾರ ಮೊತ್ತದ ವಿವರ ಕೆಳಕಂಡಂತಿದೆ;

ಕ್ರ. ಸಂ	ಎಲ್.ಎ.ಸಿ ಸಂಖ್ಯೆ	ಗೋಠೆ ತೇರದಾಳ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ ರೂ. ಗಳಲ್ಲಿ
1	249/04	379	3-23	13,46,390-00
			ಒಟ್ಟು	13,46,390-00

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ. ಸನೀಇ 31 ಭೂಸ್ವಾಪ್ರ 2012, ಬೆಂಗಳೂರು, ದಿನಾಂಕ 07ನೇ ಜೂನ್ 2012

ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾಲ್ಲೂಕಿನ ಕುಮತೆ ವಸರು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಗೋಠೆ ತೇರದಾಳ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ನ ಜಮೀನಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ ಪ್ರಕರಣದಲ್ಲಿ ನೀಡಿರುವ ತೀರ್ಪಿನಂತೆ ರೂ. 13,46,390-00

ಗಳನ್ನು (ಹದಿಮೂರು ಲಕ್ಷದ ನಲವತ್ತಾರು ಸಾವಿರದ ಮುನ್ನೂರ ತೊಂಭತ್ತು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2012–13 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00– ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು– ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ರೂ. 13,46,390/– ಗಳನ್ನು ಹಂಚಿಕೆ ಮಾಡಿ, ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20/10/10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1652

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ದಿ. ಮೈಸೂರು ಷುಗರ್ ಕಂಪೆನಿ ಲಿಮಿಟೆಡ್, ಮಂಡ್ಯ ಈ ಕಾರ್ಖಾನೆಗೆ ಬಂಡವಾಳ ಕೆಲಸಗಳ ಹೂಡಿಕೆಗಾಗಿ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪೆನಿ ಲಿಮಿಟೆಡ್, ಮಂಡ್ಯ, ಇವರ ಪತ್ರ ಸಂಖ್ಯೆ: ಎಂಎಸ್‌ಕೋ / ಡಿಒ /ಬಿಎಲ್‌ಆರ್/07/2012, ದಿನಾಂಕ: 09.05.2012.

ಪ್ರಸ್ತಾವನೆ :

ಮೇಲೆ ಓದಲಾದ ವ್ಯವಸ್ಥಾಪಕ ನಿರ್ದೇಶಕರು, ದಿ. ಮೈಸೂರು ಷುಗರ್ ಕಂಪೆನಿ ಲಿಮಿಟೆಡ್ ಇವರ ಅರೆಸರ್ಕಾರಿ ಪತ್ರದಲ್ಲಿ ಬಂಡವಾಳ ವೆಚ್ಚಗಳಿಗಾಗಿ (CAPEX) ನೀಡಲಾಗಿರುವ ಅನುದಾನದ ಮೊತ್ತದಲ್ಲಿ ಉಳಿದಿರುವ ರೂ. 5.93 ಕೋಟಿಗಳನ್ನು ಮತ್ತು ಕಾರ್ಖಾನೆಗೆ ದುಡಿಯುವ ಬಂಡವಾಳವಾಗಿ ರೂ. 15.00 ಕೋಟಿಗಳನ್ನು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿರುವ ರೈತರಿಗೆ ಬಾಕಿ ಪಾವತಿಸಲು ಕೋರಿರುತ್ತಾರೆ. ಕಾರ್ಖಾನೆಯ ದಾಸ್ತಾನಿನಲ್ಲಿರುವ ಸಕ್ಕರೆ ಮಾರಾಟದಿಂದ ಬಂದ ಆದಾಯದಿಂದ ಬಂಡವಾಳ ವೆಚ್ಚಗಳಿಗಾಗಿ (CAPEX) ನೀಡಲಾದ ಅನುದಾನಕ್ಕೆ ಹಣವನ್ನು ಮರು ಭರಣ ಮಾಡಲಾಗುವುದೆಂದು ಪ್ರಸ್ತಾಪಿಸಿರುತ್ತಾರೆ.

ಆರ್ಥಿಕ ಇಲಾಖೆಯು ಬಂಡವಾಳ ವೆಚ್ಚಗಳಿಗಾಗಿ (CAPEX) ಒದಗಿಸಲಾದ ಅನುದಾನದಿಂದ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿರುವ ಬಾಬ್ತು ಪಾವತಿಸಲು ಅಥವಾ ದುಡಿಯುವ ಬಂಡವಾಳಕ್ಕಾಗಿ ಬಳಸಿಕೊಳ್ಳಬಾರದೆಂದು ತನ್ನ ಅಭಿಪ್ರಾಯದಲ್ಲಿ ಸೂಚಿಸಿದೆ.

ಸರ್ಕಾರದ ಆದೇಶ ಸಂಖ್ಯೆ. ಸಿಐ 58 ಎಸ್‌ಜಿಎಫ್ 2012, ಬೆಂಗಳೂರು, ದಿನಾಂಕ: 08.06.2012

ದಿ. ಮೈಸೂರು ಷುಗರ್ ಕಂಪೆನಿ ಲಿಮಿಟೆಡ್, ಮಂಡ್ಯ ಈ ಕಾರ್ಖಾನೆಗೆ 2012–13ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 4860-04-190-1-00(Plan)-211-Investment of Capital works of MYSUGAR ಇದರಡಿಯಲ್ಲಿ ಒದಗಿಸಿರುವ ಅನುದಾನ ರೂ. 1500.00 ಲಕ್ಷಗಳನ್ನು (ಒಂದು ಸಾವಿರದ ಐದುನೂರು ಲಕ್ಷ ರೂಪಾಯಿಗಳು ಮಾತ್ರ) ಬಂಡವಾಳೇತರ ಕಾರ್ಯಗಳಿಗೆ ಬಳಸಬಾರದೆಂದು ಷರತ್ತಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಸಹಾಯಕ ನಿರ್ದೇಶಕರು, (ಹೆಚ್.ಆರ್.ಡಿ ಆಡಳಿತ ಮತ್ತು ಇಎಂ) ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ ಇವರು ಹಣ ಸೆಳೆಯುವ ಅಧಿಕಾರಿಯಾಗಿದ್ದು, ಸದರಿಯವರು ಹಣ ಸೆಳೆಯುವ ಬಿಲ್ಲನ್ನು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಸಕ್ಕರೆ ನಿರ್ದೇಶನಾಲಯ, ಬೆಂಗಳೂರು ಇವರ ಮೇಲು ಸಹಿಯೊಂದಿಗೆ ಖಜಾನೆಗೆ ಸಲ್ಲಿಸತಕ್ಕದ್ದು.

ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ/636/ವೆಚ್ಚ–1/2012, ದಿನಾಂಕ: 28.05.2012 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1653

ಶಿವಶಂಕರ ನಾಯಕ್. ಎಲ್

ಪೀಠಾಧಿಕಾರಿ (ಸಕ್ಕರೆ)

14) The Secretary (e-Governance) would fully empowered to discuss with the department and visit the e-Governance projects. The gist of the discussions and proceedings of the visit and advise if any shall be sent by the Secretary (e-Governance) to the Administrative department and field department for their guidance/compliance. The administrative department-field department has any problem in accepting the advise of Secretary (e-Governance) it would justify the same with the proper reason.

15) This Government Order is available on website http://www.karnataka.gov.in.

By Order and in the name of the Governor of Karnataka,

RAJEEV CHAWLA

Secretary (e-Governance)

D.P.A.R. (A.R.)

P.R. 1690

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಪುತ್ತೂರು ತಾಲ್ಲೂಕಿನ ಕುದ್ಮಾರು ಗ್ರಾಮದ ಶಾಂತಿಮೊಗೇರು ಎಂಬಲ್ಲಿ ಸೇತುವೆ ರಚನೆ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಮತ್ತು ರೂ.9.40 ಕೋಟಿ ಅನುದಾನವನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ), ಬೆಂಗಳೂರು, ಇವರ ಪತ್ರ ಸಂಖ್ಯೆ: ಸಂಕದ : ಸೇಶಾ : ಮಂವ್ಯ : 5054 ಓಆರ್ಎಫ್ : ಅಲಂಕಾರು : 2011-12, ದಿನಾಂಕ: 07-03-2012.

ಪ್ರಸ್ತಾವನೆ :

ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ), ಬೆಂಗಳೂರು, ಇವರು ತಮ್ಮ ಪತ್ರ ಸಂಖ್ಯೆ: ಸಂಕದ : ಸೇಶಾ : ಮಂವ್ಯ : 5054 ಓಆರ್ಎಫ್ : ಅಲಂಕಾರು : 2011-12, ದಿನಾಂಕ: 07-03-2012 ರಲ್ಲಿ ಪುತ್ತೂರು ತಾಲ್ಲೂಕಿನ ಕುದ್ಮಾರು ಗ್ರಾಮದ ಶಾಂತಿಮೊಗೇರು ಎಂಬಲ್ಲಿ ಸೇತುವೆ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಪುತ್ತೂರು ತಾಲ್ಲೂಕಿನ ಕುದ್ಮಾರು-ಶಾಂತಿಮೊಗೇರು-ಶರವೂರು-ಆಲಂಕಾರು-ಜಿಲ್ಲಾ ಮುಖ್ಯ ರಸ್ತೆಯ (MDR) ಕಿ.ಮೀ. 1.20ರ ಶಾಂತಿಮೊಗೇರು ಎಂಬಲ್ಲಿ ಕುಮಾರಧಾರ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿಯನ್ನು ಅಂದಾಜು ಮೊತ್ತ ರೂ.7.40 ಕೋಟಿಗಳಿಗೆ ಲೆಕ್ಕ ಶೀರ್ಷಿಕೆ 5054-ಓಆರ್ಎಫ್ (ಯೋಜನೆ) ರಡಿ 2011-12ನೇ ಸಾಲಿನ ಅಪೆಂಡಿಕ್ಸ್-ಇ ನಲ್ಲಿ ಸೇರಿಸಲಾಗಿದೆ ಎಂದು ಮುಖ್ಯ ಇಂಜಿನಿಯರ್, ಇವರು ವರದಿ ಮಾಡಿರುತ್ತಾರೆ. ಸದರಿ ಸೇತುವೆಯು ಎರಡು ರಾಜ್ಯ ಹೆದ್ದಾರಿ ಹಾಗೂ ಒಂದು ರಾಷ್ಟ್ರೀಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುವುದರಿಂದ ಈ ಸೇತುವೆ ನಿರ್ಮಾಣದಿಂದ ಆ ಭಾಗದ ಕೃಷಿಕರು, ಸಾರ್ವಜನಿಕರಿಗೆ ಅನುಕೂಲವಾಗುತ್ತದೆಂದು ಮುಖ್ಯ ಇಂಜಿನಿಯರ್, ಇವರು ತಮ್ಮ ಪತ್ರದಲ್ಲಿ ತಿಳಿಸಿರುತ್ತಾರೆ. ಸುಳ್ಯ ಮತ್ತು ಧರ್ಮಸ್ಥಳಗಳ ನಡುವಿನ ಅಂತರ 50 ಕಿ.ಮೀಗಳಷ್ಟು ಕಡಿಮೆಯಾಗುವುದರಿಂದ ಬೆಂಗಳೂರು, ಮೈಸೂರು ಮತ್ತು ಮಡಿಕೇರಿಯಿಂದ ಧರ್ಮಸ್ಥಳಕ್ಕೆ ಹೋಗುವ ಭಕ್ತಾದಿಗಳಿಗೆ ಸಹಾಯವಾಗುತ್ತದೆ ಎಂದು ಸಹ ವರದಿ ಮಾಡಲಾಗಿದೆ.

ಅಪ್ರೋಚ್ ರಸ್ತೆಗಳೊಂದಿಗೆ ಸೇತುವೆ ನಿರ್ಮಾಣಕ್ಕಾಗಿ ವಿವರವಾದ ಅಂದಾಜನ್ನು ತಯಾರಿಸಿದ ನಂತರ ಅಂದಾಜು ಮೊತ್ತವು 2011–12ನೇ ಸಾಲಿನ ಅಪೆಂಡಿಕ್ಸ್–ಇ ನಲ್ಲಿ ತಿಳಿಸಿರುವಂತೆ ರೂ.7.40 ಕೋಟಿಗಳ ಬದಲಿಗೆ ರೂ.9.40 ಕೋಟಿಗಳಷ್ಟಾಗುವುದೆಂದು ಮುಖ್ಯ ಇಂಜಿನಿಯರ್, ಇವರು ವರದಿ ಮಾಡಿರುತ್ತಾರೆ. ಇದರಿಂದಾಗಿ, ಸದರಿ ಸೇತುವೆಯನ್ನು ಪೂರ್ಣಗೊಳಿಸಲು ರೂ.2.00 ಕೋಟಿಗಳ ಹೆಚ್ಚುವರಿ ಮೊತ್ತದ ಅವಶ್ಯಕತೆಯಿರುತ್ತದೆ.

ಅಂತೆಯೇ, ಪುತ್ತೂರು ತಾಲ್ಲೂಕಿನ ಶಾಂತಿಮೊಗೇರು ಎಂಬಲ್ಲಿ ಕುಮಾರಧಾರ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ಹಾಗೂ ಲೆಕ್ಕ ಶೀರ್ಷಿಕೆ 5054–ಓಆರ್‌ಎಫ್ ರಡಿ ಅಪೆಂಡಿಕ್ಸ್–ಇ ರಲ್ಲಿ ಸೇರಿಸಲಾಗಿರುವ ರೂ.9.40 ಕೋಟಿಗಳ ಮೊತ್ತಕ್ಕೆ ಅನುದಾನವನ್ನು ಮುಖ್ಯ ಇಂಜಿನಿಯರ್, ಇವರು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಗಿಂತೆ ಆದೇಶಿಸಿದೆ:

ಸರ್ಕಾರದ ಆದೇಶ ಸಂಖ್ಯೆ: ಲೋಇ 28 ಸಿಬಿಆರ್ 2012, ದಿನಾಂಕ: 8ನೇ ಜೂನ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಪುತ್ತೂರು ತಾಲ್ಲೂಕಿನಲ್ಲಿ ಜಿಲ್ಲಾ ಮುಖ್ಯ ರಸ್ತೆಯಾದ ಕುದ್ಮಾರು – ಶಾಂತಿಮೊಗೇರು – ಶರವೂರು – ಆಲಂಕಾರು – ಸುರುಳಿ – ಮಾಪಲ – ನೆಲ್ಯಾಡಿ ರಸ್ತೆಯ ಕಿ.ಮೀ.1.20ರಲ್ಲಿ ಶಾಂತಿಮೊಗೇರು ಎಂಬಲ್ಲಿ ಕುಮಾರಧಾರ ನದಿಗೆ ಅಡ್ಡಲಾಗಿ ಸೇತುವೆ ಹಾಗೂ ಅಪ್ರೋಚ್ ರಸ್ತೆ ನಿರ್ಮಾಣ ಕಾಮಗಾರಿಗೆ ಲೆಕ್ಕ ಶೀರ್ಷಿಕೆ ಅಪೆಂಡಿಕ್ಸ್–ಇ 5054–ಓಆರ್‌ಎಫ್ ಯೋಜನೆಯಡಿಯಲ್ಲಿ ರೂ.9.40 ಕೋಟಿಗಳಿಗೆ (ಒಂಬತ್ತು ಕೋಟಿ ನಲವತ್ತು ಲಕ್ಷ ರೂಪಾಯಿಗಳು ಮಾತ್ರ) ಅಂದಾಜು ಮೊತ್ತಕ್ಕೆ ಈ ಕೆಳಗಿನ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಷರತ್ತು: 2012–13ನೇ ಸಾಲಿನ ಅಪೆಂಡಿಕ್ಸ್–ಇ ನಲ್ಲಿ ಈ ಕಾಮಗಾರಿಯ ಅಂದಾಜಿನ ಮೊತ್ತದ ಶೇಕಡ 33 ಭಾಗವನ್ನು ಅಂದರೆ ರೂ.3.13 ಕೋಟಿಗಳ (ಮೂರು ಕೋಟಿ ಹದಿಮೂರು ಲಕ್ಷ ರೂಪಾಯಿಗಳು ಮಾತ್ರ) ಅನುದಾನ ಹಂಚಿಕೆಯೊಂದಿಗೆ ಸೇರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಲೋಇ 289 ಆಕೋ–1/12, ದಿನಾಂಕ: 09–05–2012ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಆರ್. ರೇವಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ)

ಪಿ.ಆರ್. 1697

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಬಾಗಲಕೋಟೆ ಜಿಲ್ಲೆ ರಾಜ್ಯ ಹೆದ್ದಾರಿ–20 ರಲ್ಲಿ ಕಿ.ಮೀ. 199.80 ರ ಬಾಗಲಕೋಟೆ ರೈಲ್ವೆ ನಿಲ್ದಾಣದ ಕ್ರಾಸ್‌ನಿಂದ ಕಿಮಿ 210.50ರವರೆಗಿನ **ಗದ್ದನಕೆರೆ** ಕ್ರಾಸ್ ವರೆಗಿನ ರಸ್ತೆ ಅಭಿವೃದ್ಧಿ ಮತ್ತು ಉನ್ನತ ಮಟ್ಟದ ಮುಖ್ಯ ಸೇತುವೆ ನಿರ್ಮಾಣದ ಅಂದಾಜು ಮೊತ್ತದ ಪರಿಷ್ಕರಣೆ

ಓದಲಾಗಿದೆ : ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ, ಬೆಂಗಳೂರು, ಇವರ ಪತ್ರ ಸಂಖ್ಯೆ: CNH/TA2/AE/Bagalkot brg/Additional proposal -2011–12, ದಿನಾಂಕ: 07–03–2012.

ಪ್ರಸ್ತಾವನೆ :

ಬಾಗಲಕೋಟೆ ಜಿಲ್ಲೆಯ ಆಲಮಟ್ಟಿ ಅಣೆಕಟ್ಟಿನ ಹಿನ್ನೀರಿನ ಅಡಿಯಲ್ಲಿ ಬರುವ ರಾಜ್ಯ ಹೆದ್ದಾರಿ–20 ರಲ್ಲಿ ಬಾಗಲಕೋಟೆ ರೈಲ್ವೆ ನಿಲ್ದಾಣದ ಕ್ರಾಸ್‌ನ ಕಿಮೀ 199.80 ರಿಂದ ಗದ್ದನಕೆರೆ ಕ್ರಾಸ್ ವರೆಗೆ ಕಿಮೀ 210.50 ರವರೆಗಿನ ರಸ್ತೆ ಅಭಿವೃದ್ಧಿ ಮತ್ತು ಉನ್ನತ ಮಟ್ಟದ ಮುಖ್ಯ ಸೇತುವೆ ನಿರ್ಮಾಣ ಕಾಮಗಾರಿಗೆ ಜಾಬ್ ಸಂ.CRF-KNT-2009–1322ರಲ್ಲಿ, ಕೇಂದ್ರ ರಸ್ತೆ ನಿಧಿ ಯೋಜನೆಯಡಿ ರೂ. 56.83 ಕೋಟಿಗಳಿಗೆ ಭೂಸಾರಿಗೆ, ಮಂತ್ರಾಲಯವು ತನ್ನ ಪತ್ರ ದಿನಾಂಕ: 31–03–2010 ರಲ್ಲಿ ಮಂಜೂರಾತಿ ನೀಡಿರುತ್ತದೆ. ರೂ.53.47 ಕೋಟಿ ಮೊತ್ತದ ಕಾಮಗಾರಿಯ ಭಾಗಕ್ಕೆ ಟೆಂಡರ್ ಆಹ್ವಾನಿಸಿ (ಉಳಿದ ರೂ.3.36 ಕೋಟಿ ಮೊತ್ತವನ್ನು ಕಂಟಿಂಜೆನ್ಸಿ, ಯುಟಿಲಿಟಿಗಳ ಸ್ಥಳಾಂತರಿಕೆ, ಗುಣ ನಿಯಂತ್ರಣ, ಇತರೆಗಳಿಗಾಗಿ ವ್ಯವಸ್ಥಿಸಿದೆ) ಮೆ: ಆರ್.ಎನ್. ನಾಯಕ್ ಅಂಡ್ ಸನ್ಸ್, ರವರಿಗೆ ರೂ. 55.97 ಕೋಟಿಗೆ (ಶೇಕಡ 4.69 ರಷ್ಟು ಅಧಿಕವನ್ನು ಟೆಂಡರ್ ಪ್ರೀಮಿಯಂರಂತೆ) ವಹಿಸಲಾಗಿದ್ದು, ದಿನಾಂಕ: 05–01–2011 ರಂದು ಕೆಲಸ ಪ್ರಾರಂಭಿಸಿ, ದಿನಾಂಕ: 04–07–2012 ರಂದು ಕಾಮಗಾರಿ ಪೂರ್ಣಗೊಳಿಸಬೇಕಾಗಿದೆ. ಮುಖ್ಯ ಇಂಜಿನಿಯರ್ ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು ರವರು ತಮ್ಮ ಪತ್ರ ಸಂ. CNH/TA2/AE/Bagalkot brg/Additional proposal - 2011-12, ದಿನಾಂಕ: 07–03–2012 ರಲ್ಲಿ, ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಎಫ್‌ಆರ್‌ಎಲ್ ಅನ್ನು ಹಿಂದಿನ 519.60 ಮೀಟರ್‌ನಿಂದ 524.256 ಮೀಟರ್‌ಗೆ ಹೆಚ್ಚಿಸಲು ನಿರ್ಧಾರಗೊಂಡ ಪರಿಣಾಮವಾಗಿ, ಸೆಟಲ್‌ಮೆಂಟ್ ಭಾಗದಲ್ಲಿನ ಏರಿಯ ತಡೆಗೋಡೆ ಎತ್ತರ ಹೆಚ್ಚಿಸಲು, ಅಡ್ಡಮೋರಿಗಳ ಅಗಲೀಕರಣ, ಕಾಂಕ್ರೀಟ್ ಚರಂಡಿ ಮತ್ತು ಇತರೆ ಕೆಲಸಗಳಿಗಾಗಿ ರೂ.19.58 ಕೋಟಿಗಳ ಹೆಚ್ಚುವರಿಗಾಗಿ ಕೋರಿರುತ್ತಾರೆ. ಮೂಲ ಅಂದಾಜು ಪಟ್ಟಿಯನ್ನು ತಯಾರಿಸುವಾಗ, ಆಲಮಟ್ಟಿ ಅಣೆಕಟ್ಟಿನ 1ನೇ ಹಂತದ ಹಿನ್ನೀರಿನ ಮಟ್ಟವನ್ನು ಆರ್‌ಎಲ್ 519.60 ಮೀ. ಎಂದು ಪರಿಗಣಿಸಿ, ರಸ್ತೆಯ ಎತ್ತರವನ್ನು ಆರ್‌ಎಲ್ 522.000

ರಿಂದ 524.00 ಮೀ. ರಂತೆ ನಿರ್ಮಿಸಲು ಪ್ರಸ್ತಾಪಿಸಲಾಗಿತ್ತೆಂದು ವರದಿಸಿರುತ್ತಾರೆ. ಆದರೆ, ಉನ್ನತ ಮಟ್ಟದ ಸೇತುವೆಗಳಂತಹ ಶಾಶ್ವತ ನಿರ್ಮಾಣಗಳ ಎತ್ತರವನ್ನು ಆರ್‌ಎಲ್ 528.200 ಮೀಟರ್ ಎಂದು ಪ್ರಸ್ತಾಪಿಸಲಾಗಿದೆ. ಆಲಮಟ್ಟಿ ಅಣೆಕಟ್ಟಿನ 2ನೇ ಹಂತಕ್ಕೆ ಸಂಬಂಧಿಸಿದಂತೆ ನ್ಯಾಯಾಧೀಕರಣದ ತೀರ್ಪನ್ನು ಡಿಸೆಂಬರ್ 2010ರಲ್ಲಿ ಪ್ರಕಟಿಸಲಾಗಿದ್ದು, ಅಣೆಕಟ್ಟಿನ ಹಿನ್ನೀರಿನ ಮಟ್ಟ ಆರ್‌ಎಲ್ 524.546 ಮೀಟರ್‌ಗೆ ಹೆಚ್ಚಿಸಲು ಪ್ರಸ್ತಾಪಿಸಲಾಗಿರುವುದಾಗಿ ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಲಯ, ಇವರು ವರದಿಸಿರುತ್ತಾರೆ. ಈಗ ಮಂಜೂರಾಗಿರುವ ಅಂದಾಜಿನಂತೆ ಕಿಮೀ 1.00 ರಿಂದ 5.00 ರವರೆಗೆ ಅಭಿವೃದ್ಧಿ ಪಡಿಸಿದಲ್ಲಿ, ಆ ಸೆಟಲ್‌ಮೆಂಟ್ ಭಾಗವು ಎಫ್‌ಆರ್‌ಎಲ್ 524.546 ಮೀ.ನ ಮುಳುಗಡೆಯಾಗಿ ಬಾಗಲಕೋಟೆ ಮತ್ತು ಗದ್ದನಕೆರೆ ನಡುವೆ ಸಂಪರ್ಕ ಕಲ್ಪಿಸಲು ಸಾಧ್ಯವಾಗುವುದಿಲ್ಲ. ಆದಕಾರಣ, ಐಆರ್‌ಸಿ ನಿಯಮಗಳನ್ವಯ, settlement **reaches**ನ ನೀರು ಸಂಗ್ರಹಣಾ ಪ್ರದೇಶದ ಅಡಿ ತಡೆಗೋಡೆಯ ಅವಶ್ಯಕತೆಗಳನ್ನು ಪರಿಗಣಿಸಿ ರಸ್ತೆಯ ಎತ್ತರವನ್ನು ಹೆಚ್ಚಿಸ ಬೇಕಿರುತ್ತದೆ. ಅದರಂತೆ, ರೂ.19.58 ಕೋಟಿಗಳ ಹೆಚ್ಚುವರಿ ಆರ್ಥಿಕ ಹೊರೆಯ ಅಂದಾಜನ್ನು ತಯಾರಿಸಲಾಗಿದೆ. ಪ್ರಸ್ತಾಪಿಸಲಾದ ಹೆಚ್ಚುವರಿ ಕಾಮಗಾರಿಯನ್ನು ಮೂಲ ಗುತ್ತಿಗೆಯಂತೆ ವಿವಿಧ ಐಟಂಗಳಿಗೆ ಒಪ್ಪಿತ ದರಗಳಂತೆ ಈಗ ಕಾರ್ಯಗತಗೊಳಿಸುತ್ತಿರುವ ಗುತ್ತಿಗೆದಾರರಿಗೆ ವಹಿಸಿದಲ್ಲಿ, 2011–12ನೇ ಸಾಲಿನ ದರಪಟ್ಟಿಯಂತೆ ರೂ.19.58 ಕೋಟಿ ಅಂದಾಜು ಮೊತ್ತಕ್ಕೆದುರಾಗಿ ರೂ.17.07 ಕೋಟಿ ಮೊತ್ತವು ಅವಶ್ಯಕವಾಗುತ್ತದೆ (2009–10 ರ ದರಪಟ್ಟಿಯಂತೆ ಮೂಲ ಕಾಮಗಾರಿಗೆ ವಹಿಸಿದಂತೆ ಪರಿಗಣಿಸಿದಲ್ಲಿ ಪ್ರಸ್ತಾವಿತ ಹೆಚ್ಚುವರಿ ಕೆಲಸದ ಮೊತ್ತವು ರೂ. 15.51 ಕೋಟಿಗಳಾಗುತ್ತಿತ್ತು). 2009–10ರ ದರ ಪಟ್ಟಿಯಂತೆ ಪರಿಷ್ಕೃತ ಅಂದಾಜು ಮೊತ್ತವು ರೂ.72.34 ಕೋಟಿಗಳಾಗುತ್ತಿತ್ತು [ರೂ. 53.47 ಕೋಟಿ (ಕಾಮಗಾರಿಯ ಭಾಗ) + ರೂ. 3.36 ಕೋಟಿ (ಯುಟಿಲಿಟಿ ಸ್ಥಳಾಂತರಿಕೆ, ಇತರೆ) + ರೂ. 15.51 ಕೋಟಿ (ಹೆಚ್ಚುವರಿ ಕೆಲಸ)]. ವಾಸ್ತವಿಕ ಅವಶ್ಯಕತೆಯ ಮೊತ್ತವು ರೂ. 76.40 ಕೋಟಿಗಳಾಗುತ್ತಿತ್ತು [ರೂ. 55.97 ಕೋಟಿ (ಗುತ್ತಿಗೆಯ ಕೆಲಸದ ಭಾಗ) + ರೂ. 3.36 ಕೋಟಿ (ಯುಟಿಲಿಟಿ ಸ್ಥಳಾಂತರಿಕೆ, ಇತರೆ) + ರೂ. 17.07 ಕೋಟಿ (ಒಪ್ಪಿತಗೊಂಡ ದರಗಳಂತೆ ಹೆಚ್ಚುವರಿ ಕೆಲಸ)]. ಈ ಕಾಮಗಾರಿಯಲ್ಲಿನ ಹೆಚ್ಚುವರಿ ಪ್ರಸ್ತಾವನೆಯಲ್ಲಿ ಅಡಕವಾಗಿರುವ ಏರಿ ನಿರ್ಮಾಣದ, ತಡೆ ಗೋಡೆಯ ಎತ್ತರವನ್ನು ಹೆಚ್ಚಿಸದ ಹೊರತು ಗುತ್ತಿಗೆದಾರರಿಗೆ ಈಗಾಗಲೇ ವಹಿಸಲಾಗಿರುವ ಮೇಲು ಭಾಗದ ಕೆಲಸಗಳನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲವೆಂದು ಸಹ ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಲಯರವರು ವರದಿ ಮಾಡಿರುತ್ತಾರೆ. ಕೇಂದ್ರ ರಸ್ತೆ ನಿಧಿಯ ಮಾರ್ಗಸೂಚಿ ನಿಯಮಗಳನ್ವಯ, 2 ವರ್ಷಗಳ ಒಳಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಗುತ್ತಿಗೆದಾರರು, ಈ ಭಾಗದ ಕಾಮಗಾರಿ ಹೊರತುಪಡಿಸಿ ಉಳಿದ ಎಲ್ಲಾ ಭಾಗಗಳ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಿರುತ್ತಾರೆ. ಆದಕಾರಣ, ಈ ಹೆಚ್ಚುವರಿ ಕೆಲಸಗಳನ್ನು ಸೂಕ್ತ ಸಹಕಾರದೊಂದಿಗೆ ಕಾರ್ಯಗತಗೊಳಿಸಲು ಪ್ರತ್ಯೇಕವಾಗಿ ಟೆಂಡರ್ ಕರೆಯದೇ ಮೂಲ ಕಾಮಗಾರಿಯ ಗುತ್ತಿಗೆದಾರರಿಗೆ ವಹಿಸುವುದು ಸೂಕ್ತವೆಂದು ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು ರವರು ವರದಿ ಮಾಡಿರುತ್ತಾರೆ. ಕೇಂದ್ರ ರಸ್ತೆ ನಿಧಿ ನಿಯಮಗಳನ್ವಯ, ಮಂಜೂರಾದ ವೆಚ್ಚಕ್ಕಿಂತ ಯಾವುದೇ ಹೆಚ್ಚುವರಿ ವೆಚ್ಚವನ್ನು ರಾಜ್ಯದ ಸಂಪನ್ಮೂಲಗಳಿಂದಲೇ ಭರಿಸಬೇಕಾಗಿರುತ್ತದೆ.

ಆದ್ದರಿಂದ, ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ:

ಸರ್ಕಾರದ ಆದೇಶ ಸಂಖ್ಯೆ: ಲೋಇ 54 ಸಿಬಿಆರ್ 2012, ದಿನಾಂಕ: 8ನೇ ಜೂನ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆ ರಾಜ್ಯ ಹೆದ್ದಾರಿ–20 ರಲ್ಲಿ ಕಿ.ಮೀ. 199.80 ರ ಬಾಗಲಕೋಟೆ ರೈಲ್ವೆ ನಿಲ್ದಾಣದ ಕ್ರಾಸ್‌ನಿಂದ ಕಿಮೀ 210.50ರವರೆಗಿನ ಗದ್ದನಕೆರೆ ಕ್ರಾಸ್ ವರೆಗಿನ ರಸ್ತೆ ಅಭಿವೃದ್ಧಿ ಮತ್ತು ಉನ್ನತ ಮಟ್ಟದ ಮುಖ್ಯ ಸೇತುವೆ ನಿರ್ಮಾಣ ಮಾಡುವುದಕ್ಕೆ 2009–10ರ ದರಪಟ್ಟಿಯನುಸಾರ ರೂ.72.34 ಕೋಟಿಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಹಾಗೂ ಕಾಮಗಾರಿಗೆ ರೂ.17.07 ಕೋಟಿಗಳ ಹೆಚ್ಚುವರಿ ಅನುದಾನ ಒದಗಿಸಲಾಗಿದೆ. 2012–13ನೇ ಸಾಲಿನ ಅಪೆಂಡಿಕ್ಸ್–ಇ ನಲ್ಲಿ ಸೂಕ್ತ ಅನುದಾನದೊಂದಿಗೆ ಈ ಕಾಮಗಾರಿಯನ್ನು ಸೇರಿಸಲು ಸೂಚಿಸುತ್ತಾ ಹಾಗೂ ಕಾಮಗಾರಿಯನ್ನು ದಿನಾಂಕ: 04–07–2012ರ ಒಳಗೆ ಪೂರ್ಣಗೊಳಿಸುವ ಸಲುವಾಗಿ, ಹೆಚ್ಚುವರಿ ಕಾಮಗಾರಿಯನ್ನು ಅದೇ ಗುತ್ತಿಗೆದಾರರಿಗೆ ವಹಿಸಲು ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಲೋಇ 311 ಆಕೋ – 1/12, ದಿನಾಂಕ: 07–05–2012 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೃಷ್ಣಮೂರ್ತಿ ಬಿ. ಕುಲಕರ್ಣಿ

ಸರ್ಕಾರದ ಉಪ ಕಾರ್ಯದರ್ಶಿ

ಲೋಕೋಪಯೋಗಿ, ಬಂದರು ಮತ್ತು ಒಳನಾಡು

ಜಲಸಾರಿಗೆ ಇಲಾಖೆ (ಸಂಪರ್ಕ ಮತ್ತು ಕಟ್ಟಡ)

ಪಿ.ಆರ್. 1698

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕಿನ 6 ರಸ್ತೆಗಳನ್ನು ಒಂದು ಬಾರಿ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವತಿಯಿಂದ ಅಭಿವೃದ್ಧಿಪಡಿಸಿ ಮುನ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವಾಪಸ್ ನೀಡುವ ಕುರಿತು.

ಓದಲಾಗಿದೆ : 1) ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 20–04–2012 ರಂದು ನಡೆದ ರಾಜ್ಯದಲ್ಲಿನ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ/ಕೆಳದರ್ಜೆಗಿಳಿಸುವ ಪ್ರಸ್ತಾವನೆಗಳನ್ನು ಪರಿಗಣಿಸಲು ರಚಿಸಲಾಗಿರುವ ಸಮಿತಿಯ ಸಭೆಯ ನಡವಳಿ.

ಪ್ರಸ್ತಾವನೆ :

ಮೇಲೆ ಓದಲಾದ ಸಮಿತಿಯ ಸಭೆಯ ನಡವಳಿಯಲ್ಲಿ ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕಿನ ಈ ಕೆಳಕಂಡ 6 ರಸ್ತೆಗಳನ್ನು ಒಂದು ಬಾರಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಅಭಿವೃದ್ಧಿಪಡಿಸಿ ನಂತರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಹಿಂತಿರುಗಿಸಲು ತೀರ್ಮಾನಿಸಲಾಗಿದೆ.

1. ಪಾಂಡವಪುರ ತಾಲ್ಲೂಕು ಪಾಂಡವಪುರ–ಚಿನಕುರಳಿ ರಸ್ತೆ ಮಾರ್ಗ ಕೆ.ಬೆಟ್ಟಹಳ್ಳಿ ಜಾಗಶೆಟ್ಟಿಹಳ್ಳಿ–ಬೇಬಿಬೆಟ್ಟ ಮುಖಾಂತರ ಸೇರುವ ರಸ್ತೆಯ ಸರಪಳಿ 2.30 ಕಿ.ಮೀ. ಇಂದ ಸರ್ಕಾರಿ ಐಟಿಐ ಕಾಲೇಜಿಗೆ ಸೇರುವ ಸಂಪರ್ಕ ರಸ್ತೆಯ ಸರಪಳಿ 0.00 ರಿಂದ 0.30 ರವರೆಗೆ.
2. ಪಾಂಡವಪುರ ತಾಲ್ಲೂಕು, ರಾಗಿಮುದ್ದನಹಳ್ಳಿಯಿಂದ ಬನ್ನಂಗಾಡಿಗೆ ಸೇರುವ ರಸ್ತೆಯ ಸರಪಳಿ 1.60 ಕಿ.ಮೀ. ಇಂದ ಪ್ರಾರಂಭವಾಗಿ ಡಿಂಕಾ ಗ್ರಾಮಕ್ಕೆ ಸೇರುವ ರಸ್ತೆಯ ಸರಪಳಿ 0.00 ರಿಂದ 2.40 ಕಿ.ಮೀ. ವರೆಗೆ.
3. ಪಾಂಡವಪುರ ತಾಲ್ಲೂಕು, ಶ್ರೀರಂಗಪಟ್ಟಣ–ಅರಸೀಕೆರೆ ರಸ್ತೆಯ ಸರಪಳಿ 17.42 ಕಿ.ಮೀ. ಇಂದ (ರಾಜ್ಯ ಹೆದ್ದಾರಿ–7 ಚಿನಕುರಳಿ ಹತ್ತಿರ) ಪ್ರಾರಂಭವಾಗಿ ಮುನ: ಶ್ರೀರಂಗಪಟ್ಟಣ–ಅರಸೀಕೆರೆ ರಸ್ತೆಯ ಸರಪಳಿ 18.10 ಕಿ.ಮೀ. ಹತ್ತಿರ ಸೇರುವ ರಸ್ತೆಯ ಸಂಪರ್ಕ ರಸ್ತೆ ಮತ್ತು ಚಿನಕುರಳಿಯಿಂದ ಕೆ.ಮಲ್ಲೇನಹಳ್ಳಿ–ಕನಗೋನಹಳ್ಳಿಗೆ ಸೇರುವ ರಸ್ತೆಗೆ ಕೂಡು ರಸ್ತೆ ಸರಪಳಿ 0.00 ರಿಂದ 1.75 ಕಿ.ಮೀ. ವರೆಗೆ.
4. ಪಾಂಡವಪುರ ತಾಲ್ಲೂಕು, ಚಿಟ್ಟನಹಳ್ಳಿಯಿಂದ ಗೌಡಗೆರೆಗೆ ಸೇರುವ ರಸ್ತೆ ಅಭಿವೃದ್ಧಿ ಸರಪಳಿ 0.00 ರಿಂದ 2.00 ಕಿ.ಮೀ. ವರೆಗೆ.
5. ಮಂಡ್ಯ ತಾಲ್ಲೂಕು, ಮಂಡ್ಯ ನಾಗಮಂಗಲ ರಸ್ತೆಯ 7.00 ನೇ ಕಿ.ಮೀ. ಇಂದ ಮಂಡ್ಯ ಹಡಗಲಿ ರಸ್ತೆಯ 22ನೇ ಕಿ.ಮೀ. ನಲ್ಲಿ ಸೇರುವ ರಸ್ತೆಯ ಸರಪಳಿ 8.50 ಮಂಡ್ಯ–ಹಡಗಲಿ ರಸ್ತೆಯ 5.60 ಕಿ.ಮೀ. ನಲ್ಲಿ ಸೇರುವ ಹೊಳಲು ಗ್ರಾಮ ಪರಿಮಿತಿಯ ರಸ್ತೆ ಅಭಿವೃದ್ಧಿ ಸರಪಳಿ 0.00 ರಿಂದ 0.50 ಕಿ.ಮೀ. ವರೆಗೆ.
6. ಮಂಡ್ಯ ತಾಲ್ಲೂಕು, ಮಂಡ್ಯ ಹಡಗಲಿ ರಸ್ತೆಯ 7.00 ನೇ ಕಿ.ಮೀ. ಇಂದ ಮಂಡ್ಯ–ಹಡಗಲಿ ರಸ್ತೆಯ 15ನೇ ಕಿ.ಮೀ. ನಲ್ಲಿ ಸೇರುವ ರಸ್ತೆಯ 0.50 ಕಿ.ಮೀ. ಇಂದ ಮಂಡ್ಯ–ಹಡಗಲಿ ರಸ್ತೆಯ 7.50 ಕಿ.ಮೀ. ನಲ್ಲಿ ಸಂಪರ್ಕಿಸಿಕೊಂಡು ಭೈರವೇಶ್ವರ ದೇವಸ್ಥಾನದ ಮಾರ್ಗವಾಗಿ ಮಂಡ್ಯ–ಹಡಗಲಿ ರಸ್ತೆಯ 8.50 ನೇ ಕಿ.ಮೀ. ನಲ್ಲಿ ಸೇರುವ ರಸ್ತೆಯ ಅಭಿವೃದ್ಧಿ ಸರಪಳಿ 0.00 ರಿಂದ 1.60 ಕಿ.ಮೀ. ವರೆಗೆ.

ಸರ್ಕಾರವು ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ: ಲೋಇ 554 ಸಿಆರ್‌ಎಂ 2011, ಬೆಂಗಳೂರು, ದಿನಾಂಕ: 11–06–2012

ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕಿನ ಈ ಕೆಳಕಂಡ 6 ರಸ್ತೆಗಳನ್ನು ಒಂದು ಬಾರಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಅಭಿವೃದ್ಧಿಪಡಿಸಿ ನಂತರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಹಿಂತಿರುಗಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

1. ಪಾಂಡವಪುರ ತಾಲ್ಲೂಕು, ಪಾಂಡವಪುರ–ಚಿನಕುರಳಿ ರಸ್ತೆ ಮಾರ್ಗ ಕೆ.ಬೆಟ್ಟಹಳ್ಳಿ ಜಾಗಶೆಟ್ಟಿಹಳ್ಳಿ–ಬೇಬಿಬೆಟ್ಟ ಮುಖಾಂತರ ಸೇರುವ ರಸ್ತೆಯ ಸರಪಳಿ 2.30 ಕಿ.ಮೀ. ಇಂದ ಸರ್ಕಾರಿ ಐಟಿಐ ಕಾಲೇಜಿಗೆ ಸೇರುವ ಸಂಪರ್ಕ ರಸ್ತೆಯ ಸರಪಳಿ 0.00 ರಿಂದ 0.30.
2. ಪಾಂಡವಪುರ ತಾಲ್ಲೂಕು, ರಾಗಿಮುದ್ದನಹಳ್ಳಿಯಿಂದ ಬನ್ನಂಗಾಡಿಗೆ ಸೇರುವ ರಸ್ತೆಯ ಸರಪಳಿ 1.60 ಕಿ.ಮೀ. ಇಂದ ಪ್ರಾರಂಭವಾಗಿ ಡಿಂಕಾ ಗ್ರಾಮಕ್ಕೆ ಸೇರುವ ರಸ್ತೆಯ ಸರಪಳಿ 0.00 ರಿಂದ 2.40 ಕಿ.ಮೀ. ವರೆಗೆ.
3. ಪಾಂಡವಪುರ ತಾಲ್ಲೂಕು, ಶ್ರೀರಂಗಪಟ್ಟಣ–ಅರಸೀಕೆರೆ ರಸ್ತೆಯ ಸರಪಳಿ 17.42 ಕಿ.ಮೀ. ಇಂದ (ರಾಜ್ಯ ಹೆದ್ದಾರಿ–7 ಚಿನಕುರಳಿ ಹತ್ತಿರ) ಪ್ರಾರಂಭವಾಗಿ ಮುನ: ಶ್ರೀರಂಗಪಟ್ಟಣ–ಅರಸೀಕೆರೆ ರಸ್ತೆಯ ಸರಪಳಿ 18.10 ಕಿ.ಮೀ. ಹತ್ತಿರ ಸೇರುವ ರಸ್ತೆಯ ಸಂಪರ್ಕ ರಸ್ತೆ ಮತ್ತು ಚಿನಕುರಳಿಯಿಂದ ಕೆ.ಮಲ್ಲೇನಹಳ್ಳಿ–ಕನಗೋನಹಳ್ಳಿಗೆ ಸೇರುವ ರಸ್ತೆಗೆ ಕೂಡು ರಸ್ತೆ ಸರಪಳಿ 0.00 ರಿಂದ 1.75 ಕಿ.ಮೀ. ವರೆಗೆ.
4. ಪಾಂಡವಪುರ ತಾಲ್ಲೂಕು, ಚಿಟ್ಟನಹಳ್ಳಿಯಿಂದ ಗೌಡಗೆರೆಗೆ ಸೇರುವ ರಸ್ತೆ ಅಭಿವೃದ್ಧಿ ಸರಪಳಿ 0.00 ರಿಂದ 2.00 ಕಿ.ಮೀ. ವರೆಗೆ.
5. ಮಂಡ್ಯ ತಾಲ್ಲೂಕು, ಮಂಡ್ಯ ನಾಗಮಂಗಲ ರಸ್ತೆಯ 7.00 ನೇ ಕಿ.ಮೀ. ಇಂದ ಮಂಡ್ಯ ಹಡಗಲಿ ರಸ್ತೆಯ 22ನೇ ಕಿ.ಮೀ. ನಲ್ಲಿ ಸೇರುವ ರಸ್ತೆಯ ಸರಪಳಿ 8.50 ಮಂಡ್ಯ–ಹಡಗಲಿ ರಸ್ತೆಯ 5.60 ಕಿ.ಮೀ. ನಲ್ಲಿ ಸೇರುವ ಹೊಳಲು ಗ್ರಾಮ ಪರಿಮಿತಿಯ ರಸ್ತೆ ಅಭಿವೃದ್ಧಿ ಸರಪಳಿ 0.00 ರಿಂದ 0.50 ಕಿ.ಮೀ. ವರೆಗೆ.

6. ಮಂಡ್ಯ ತಾಲ್ಲೂಕು, ಮಂಡ್ಯ ಹಡಗಲಿ ರಸ್ತೆಯ 7.00 ನೇ ಕಿ.ಮೀ. ಇಂದ ಮಂಡ್ಯ-ಹಡಗಲಿ ರಸ್ತೆಯ 15ನೇ ಕಿ.ಮೀ. ನಲ್ಲಿ ಸೇರುವ ರಸ್ತೆಯ 0.50 ಕಿ.ಮೀ. ಇಂದ ಮಂಡ್ಯ-ಹಡಗಲಿ ರಸ್ತೆಯ 7.50 ಕಿ.ಮೀ. ನಲ್ಲಿ ಸಂಪರ್ಕಿಸಿಕೊಂಡು ಭೈರವೇಶ್ವರ ದೇವಸ್ಥಾನದ ಮಾರ್ಗವಾಗಿ ಮಂಡ್ಯ-ಹಡಗಲಿ ರಸ್ತೆಯ 8.50 ನೇ ಕಿ.ಮೀ. ನಲ್ಲಿ ಸೇರುವ ರಸ್ತೆಯ ಅಭಿವೃದ್ಧಿ ಸರಪಳಿ 0.00 ರಿಂದ 1.60 ಕಿ.ಮೀ. ವರೆಗೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಆರ್. ರೇವಣ್ಣ

ಸರ್ಕಾರದ ಅಧೀನ ಕಾರ್ಯದರ್ಶಿ

ಲೋಕೋಪಯೋಗಿ, ಬಂದರು ಮತ್ತು ಒಳನಾಡು

ಪಿ.ಆರ್. 1699 ಜಲಸಾರಿಗೆ ಇಲಾಖೆ (ಸಂಪರ್ಕ-1)

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಹಾದುಹೋಗುವ ಗುಂಡ್ಲುಪೇಟೆ-ಸುಲ್ತಾನಬತ್ತೇರಿ ರಾಷ್ಟ್ರೀಯ ಹೆದ್ದಾರಿ-212ರ ರಸ್ತೆಯ ಭಾಗಕ್ಕೆ ಪರ್ಯಾಯವಾಗಿ ಗೋಣಿಕೊಪ್ಪ (ರಾಜ್ಯ ಹೆದ್ದಾರಿ-90) ಮತ್ತು ಪೊನ್ನಂಪೇಟೆ (ರಾಜ್ಯ ಹೆದ್ದಾರಿ-89)ರ ಮಾರ್ಗವಾಗಿ ಹುಣಸೂರು-ಕುಟ್ಟ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ.

ಓದಲಾಗಿದೆ : 1) ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾಜೆಕ್ಟ್ ಟೈಗರ್), ಮೈಸೂರು ಇವರ ಟಿಪ್ಪಣಿ ಸಂ. FCS/PT/NH/2008-09 ದಿನಾಂಕ: 19-12-2011.

2) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರ ಪತ್ರ ಸಂ. ಮುಇಂ:ಸಂಕದ:ರಶಾ:ಸಇ1:2011-12, ದಿನಾಂಕ: 24-12-2011, 18-02-2012 ಮತ್ತು 05-03-2012.

ಪ್ರಸ್ತಾವನೆ :

ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ದಿನಾಂಕ: 19-12-2011 ರ ಟಿಪ್ಪಣಿಯಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಪ್ರಾಜೆಕ್ಟ್ ಟೈಗರ್), ಮೈಸೂರು, ಇವರು, ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ. 26621-629-2009, ರಿಟ್ ಅರ್ಜಿ ಸಂ. 1749:2009 ಮತ್ತು ರಿಟ್ ಅರ್ಜಿ ಸಂ. 919-2010 ಗಳಲ್ಲಿ ದಿನಾಂಕ: 09-03-2010 ರಂದು ನೀಡಿದ ಆದೇಶದ ಅನುಸಾರ, ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 212 ರ ರಸ್ತೆಯ ಭಾಗದಲ್ಲಿ ರಾತ್ರಿ ವೇಳೆ ಸಂಚಾರ ನಿಷೇಧಿಸಿದ್ದು, ಇದಕ್ಕೆ ಪರ್ಯಾಯ ರಸ್ತೆಯಾಗಿ, ಗೋಣಿಕೊಪ್ಪ (ರಾಜ್ಯ ಹೆದ್ದಾರಿ-90) ಮತ್ತು ಪೊನ್ನಂಪೇಟೆ (ರಾಜ್ಯ ಹೆದ್ದಾರಿ-89)ರ ಮಾರ್ಗವಾಗಿ ಹುಣಸೂರು-ಕುಟ್ಟ ರಸ್ತೆಯನ್ನು ಅಭಿವೃದ್ಧಿಪಡಿಸುವುದು ಅವಶ್ಯಕವೆಂದು ತಿಳಿಸಿರುತ್ತಾರೆ. ಈ ಪರ್ಯಾಯ ರಸ್ತೆಯನ್ನು ಅಭಿವೃದ್ಧಿಪಡಿಸುವುದಾಗಿ ಮಾನ್ಯ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯವರು ಮಾನ್ಯ ಕೇರಳ ರಾಜ್ಯದ ಮುಖ್ಯಮಂತ್ರಿಯವರಿಗೆ ದಿನಾಂಕ: 18-12-2011 ರಂದು ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಭರವಸೆ ನೀಡಿರುತ್ತಾರೆಂದೂ ಸಹ ತಿಳಿಸಿರುತ್ತಾರೆ.

ಮೇಲೆ ಕ್ರಮಾಂಕ (2) ರಲ್ಲಿ ಓದಲಾದ, ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ರವರ ದಿನಾಂಕ: 24-12-2011, 18-02-2012 ಮತ್ತು 05-03-2012ರ ಪತ್ರಗಳಲ್ಲಿ, ಈ ಕೆಳಕಂಡಂತೆ ರಸ್ತೆಯನ್ನು ಅಭಿವೃದ್ಧಿ ಪಡಿಸಲು ರೂ. 49.32 ಕೋಟಿಗಳ ಅಂದಾಜು ಮೊತ್ತದ ಪ್ರಸ್ತವನೆಯನ್ನು ಸಲ್ಲಿಸಿ, ಆಡಳಿತಾತ್ಮಕ ಅನುಮೋದನೆ ಕೋರಿರುತ್ತಾರೆ.

ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ರವರ ಪ್ರಸ್ತಾವನೆಯನ್ನು, ಆರ್ಥಿಕ ಇಲಾಖೆಯ ಸಮಾಲೋಚನೆಯೊಂದಿಗೆ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ ಸಂ: ಲೋಇ 649 ಸಿಆರ್‌ಎಂ 2011, ಬೆಂಗಳೂರು, ದಿನಾಂಕ: 13ನೇ ಜೂನ್ 2012

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, "ಗೋಣಿಕೊಪ್ಪ" ಮತ್ತು ಪೊನ್ನಂಪೇಟೆ ಮಾರ್ಗವಾಗಿ ಹುಣಸೂರಿನಿಂದ ಕುಟ್ಟಾ ವರೆಗಿನ ರಸ್ತೆಯನ್ನು ರೂ. 49.32 ಕೋಟಿಗಳ ಅಂದಾಜು ವೆಚ್ಚದಲ್ಲಿ ಈ ಕೆಳಕಂಡ ಭಾಗಗಳಾಗಿ ಅಭಿವೃದ್ಧಿ ಪಡಿಸುವ ಪ್ರಸ್ತಾವನೆಗೆ ಈ ಕಾಮಗಾರಿಯ ಅಂದಾಜು ಮೊತ್ತ ರೂ. 49.32 ಕೋಟಿಯ 1/3 (ಮೂರನೇ ಒಂದು) ಭಾಗದಷ್ಟು ಅನುದಾನವನ್ನು ಲೆಕ್ಕ ಶೀರ್ಷಿಕೆ 5054-SH improvement (plan) ಅಡಿಯಲ್ಲಿ 2012-13ನೇ ಸಾಲಿನ ಅನುದಾನದಲ್ಲಿ ಒದಗಿಸುವ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ:

ಅ) ಮೈಸೂರು ಜಿಲ್ಲೆಯ ಹುಣಸೂರು ಮತ್ತು ಪಿರಿಯಾಪಟ್ಟಣ ತಾಲ್ಲೂಕಿನಲ್ಲಿನ 21.59 ಕಿಮೀ ಉದ್ದದ ಹುಣಸೂರು-ತಲಕಾವೇರಿ ರಾಜ್ಯ ಹೆದ್ದಾರಿ-90ರ ಸರಪಳಿ 0.00 ಕಿಮೀ ಯಿಂದ 21.59 ಕಿಮೀ ರವರೆಗೆ ರೂ. 31.74 ಕೋಟಿಅಂದಾಜು ವೆಚ್ಚದಲ್ಲಿ

ಆ) ಕೊಡಗು ಜಿಲ್ಲೆಯ ವೀರಾಜಪೇಟೆ ತಾಲ್ಲೂಕಿನ 14.328 ಕಿಮೀ ಉದ್ದದ ಹುಣಸೂರು-ತಲಕಾವೇರಿ ರಾಜ್ಯ ಹೆದ್ದಾರಿ-90ರ ಸರಪಳಿ 21.595 ರಿಂದ 38.223 ಕಿಮೀ ರವರೆಗೆ ರೂ. 10.51 ಕೋಟಿ ಅಂದಾಜು ವೆಚ್ಚದಲ್ಲಿ

ಇ) ಕೊಡಗು ಜಿಲ್ಲೆಯ ವೀರಾಜಪೇಟೆ ತಾಲ್ಲೂಕಿನ 10.358 ಕಿಮೀ ಉದ್ದದ ಮಡಿಕೇರಿ–ಕುಂಟ್ಟಾ ರಾಜ್ಯ ಹೆದ್ದಾರಿ–89ರ ಸರಪಳಿ 51.30 ಕಿಮೀ ರಿಂದ 55.90 ಕಿಮೀ ಮತ್ತು 76.00 ಕಿಮೀ ರಿಂದ 86.358 ಕಿಮೀ ರವರೆಗೆ ರೂ. 7.07 ಕೋಟಿ ಅಂದಾಜು ವೆಚ್ಚದಲ್ಲಿ

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: PWD 222 FC–1/12 ದಿನಾಂಕ: 12–04–2012ರಲ್ಲಿ ನೀಡಿದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಆರ್. ರೇವಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ (ಸಂಪರ್ಕ)

ಪಿ.ಆರ್. 1700

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಹುಬ್ಬಳ್ಳಿ ತಾಲ್ಲೂಕಿನ ವೀರಾಪೂರ – ಮಂಟೂರ ಜಿಲ್ಲಾ ಮುಖ್ಯ ರಸ್ತೆ ಕಿಮೀ 1.50 ರಿಂದ ಕಿ.ಮೀ. 5.25 ರ ವರೆಗೆ ರಸ್ತೆ ಅಭಿವೃದ್ಧಿ ಪಡಿಸುವ ಕಾಮಗಾರಿಯ ಅಂದಾಜು ಪತ್ರಿಕೆಗೆ ಆಡಳಿತಾತ್ಮಕ ಅನುಮೋದನೆ.

ಪ್ರಸ್ತಾವನೆ :

ಹುಬ್ಬಳ್ಳಿ ತಾಲ್ಲೂಕಿನ ವೀರಾಪೂರ – ಮಂಟೂರ ಜಿಲ್ಲಾ ಮುಖ್ಯ ರಸ್ತೆ (ಕಿಮೀ. 1.50 ರಿಂದ 5.25 ರ ವರೆಗೆ ರಸ್ತೆ) ಅಭಿವೃದ್ಧಿ ಕಾಮಗಾರಿಯು 2011–12ನೇ ಸಾಲಿನ ಆಯವ್ಯಯದ ಅಪೆಂಡಿಕ್ಸ್ – ಇ ನಲ್ಲಿ ಲೆಕ್ಕ ಶೀರ್ಷಿಕೆ – 5054 ರಸ್ತೆ ಮತ್ತು ಸೇತುವೆಗಳು ಅಡಿಯಲ್ಲಿ ರೂ.600.00 ಲಕ್ಷಗಳ (ರೂ. ಆರನೂರು ಲಕ್ಷಗಳು) ಅಂದಾಜಿನೊಂದಿಗೆ ಸೇರ್ಪಡೆಯಾಗಿದ್ದು 2011–12ನೇ ಸಾಲಿಗೆ ರೂ.180.00 ಲಕ್ಷಗಳ ಅನುದಾನ ಅವಕಾಶ ಕಲ್ಪಿಸಲಾಗಿದೆ.

ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ) ಧಾರವಾಡ ಇವರು ಹುಬ್ಬಳ್ಳಿ ತಾಲ್ಲೂಕಿನ ವೀರಾಪೂರ – ಮಂಟೂರ ಜಿಲ್ಲಾ ಮುಖ್ಯ ರಸ್ತೆ (ಕಿಮೀ 1.50 ರಿಂದ ಕಿ.ಮೀ. 5.25 ರ ವರೆಗೆ) ರಸ್ತೆಯನ್ನು ಅಭಿವೃದ್ಧಿ ಕಾಮಗಾರಿಯು ರೂ.600.00 ಲಕ್ಷಗಳ (ರೂ. ಆರನೂರು ಲಕ್ಷಗಳು) ಅಂದಾಜು ಪಟ್ಟಿಯನ್ನು 2011–12ನೇ ಸಾಲಿನ ಧಾರವಾಡ ವೃತ್ತದ ದರಪಟ್ಟಿಯನ್ನಾಧರಿಸಿ ತಯಾರಿಸಿ, ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಿದ್ದಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ:

ಸರ್ಕಾರದ ಆದೇಶ ಸಂಖ್ಯೆ: ಲೋಇ 82 ಸಿಆರ್ಎಂ 2012, ಬೆಂಗಳೂರು, ದಿನಾಂಕ: 16–06–2012

ಪ್ರಸ್ತಾವನೆಯಲ್ಲಿ ವಿವರಿಸಲಾದ ಹಿನ್ನೆಲೆಯಲ್ಲಿ ಹುಬ್ಬಳ್ಳಿ ತಾಲ್ಲೂಕಿನ ವೀರಾಪುರ–ಮಂಟೂರ ರಸ್ತೆ (1.50 ಕಿ.ಮೀ. ರಿಂದ ಕಿ.ಮೀ. 5.25ರ ವರೆಗೆ) ರಸ್ತೆಯನ್ನು ರೂ.600.00 ಲಕ್ಷಗಳ (ರೂ. ಆರನೂರು ಲಕ್ಷಗಳು) ಅಂದಾಜಿನಲ್ಲಿ 2012–13ನೇ ಸಾಲಿನ ಅಪೆಂಡಿಕ್ಸ್–ಇ ನಲ್ಲಿ ಅಂದಾಜು ಮೊತ್ತದ ಶೇ.33 ಭಾಗವನ್ನು ಅಂದರೆ ರೂ.180.00 ಲಕ್ಷಗಳ ಅನುದಾನ ಹಂಚಿಕೆಯೊಂದಿಗೆ ಹೊಸದಾಗಿ ಸೇರಿಸುವ ಷರತ್ತಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಲೋಇ 231/ಆಕೋ–1/2012, ದಿನಾಂಕ: 10–04–2012 ರನ್ವಯ ಹೊರಡಿಸಲಾಗದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಆರ್. ರೇವಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ
ಲೋಕೋಪಯೋಗಿ, ಬಂದರುಗಳು ಹಾಗೂ ಒಳನಾಡು
ಜಲಸಾರಿಗೆ ಇಲಾಖೆ (ಸಂಪರ್ಕ)

ಪಿ.ಆರ್. 1701

HORTICULTURE SECRETARIAT

No. HCD 86 HPP 2012, Bangalore, Dated: 15-06-2012

CORRIGENDUM

Sub: "Central Sponsored Scheme – Drip Irrigation" – Implementation during 2012-13- reg.

In the Government Order No. HCD 86 HPP 2012, dated: 06-06-2012 the subject shall be read as below;

"Central Sponsored Scheme – Drip Irrigation" – Implementaion
During 2012-13-reg.

By Order and in the Name of the Governor of Karnataka
B.C. PRAKASH
Under Secretary to Government
Horticulture Department

P.R. No: 1702

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : ರಾಜ್ಯದಲ್ಲಿ ಜೀತದಾಳುಗಳನ್ನು ಗುರುತಿಸುವ ಸಲುವಾಗಿ ಸಮೀಕ್ಷೆ ಕಾರ್ಯ ಕೈಗೊಳ್ಳಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, ಭಾರತಸರ್ಕಾರ, ನವದೆಹಲಿ ಇವರ ಆದೇಶ ಸಂ.ಎಸ್–11011/05/98–ಬಿಎಲ್(Vol.II)ದಿ:28–03–2012(ಎರಡು ಪ್ರತ್ಯೇಕ ಆದೇಶಗಳು

2) ಸರ್ಕಾರ ಸಮ ಸಂಖ್ಯೆ: ಪತ್ರ ದಿನಾಂಕ: 30–05–2012

ಪ್ರಸ್ತಾವನೆ :

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಜೀತಪದ್ಧತಿ ಮತ್ತು ಬಾಲಕಾರ್ಮಿಕರ ಪದ್ಧತಿಗಳ ನಿರ್ಮೂಲನೆಗಾಗಿ 2011ರ ಡಿಸೆಂಬರ್ 17ಮತ್ತು 18ರಂದು ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ ಕಾರ್ಯಗಾರದಲ್ಲಿ ರಾಜ್ಯದಲ್ಲಿ ಜೀತದಾಳುಗಳನ್ನು ಪತ್ತೆ ಹಚ್ಚುವ ಹಾಗೂ ಅವರುಗಳ ನಿರ್ಮೂಲನೆಗಾಗಿ ಅಗತ್ಯ ಕ್ರಮಗಳನ್ನು ವಹಿಸುವ ಬಗ್ಗೆ ಚರ್ಚಿಸಲಾಯಿತು.

ಕೇಂದ್ರ ಸರ್ಕಾರವು ರಾಜ್ಯದಲ್ಲಿ ಜೀತದಾಳುಗಳನ್ನು ಗುರುತಿಸಲು ಮರು ಸಮೀಕ್ಷೆಯನ್ನು ನಡೆಸಲು ಈ ಕೆಳಗೆ ತಿಳಿಸಿದಂತೆ ಪ್ರತಿ ಜಿಲ್ಲೆಗೆ ರೂ: 2.00 ಲಕ್ಷಗಳಂತೆ ಕ್ರಮವಾಗಿ ರೂ.51.30 ಲಕ್ಷ ಹಾಗೂ 8.70ಲಕ್ಷಗಳನ್ನು ಒಟ್ಟಾಗಿ ರೂ: 60.00 ಲಕ್ಷಗಳನ್ನು (ಅರವತ್ತು ಲಕ್ಷ ರೂಗಳು ಮಾತ್ರ) ಉಲ್ಲೇಖ (1)ರ ಆದೇಶಗಳಲ್ಲಿ ರಾಜ್ಯಕ್ಕೆ ಬಿಡುಗಡೆ ಮಾಡಿರುತ್ತದೆ. ಈ ಸಮೀಕ್ಷೆ ಕಾರ್ಯವನ್ನು ಆಯಾಯ ಜಿಲ್ಲೆಗಳ ಜಿಲ್ಲಾಧಿಕಾರಿಗಳು ನಡೆಸಬೇಕಾಗಿರುತ್ತದೆ. 2012–13ನೇ ಸಾಲಿನಲ್ಲಿ ರಾಜ್ಯದ ಆಯವಯ್ಯದಡಿ 'ಜೀತದಾಳುಗಳ ಪುನರ್‌ವಸತಿ ಯೋಜನೆಯ' ಕಾರ್ಯಕ್ರಮಕ್ಕಾಗಿ ಲೆಕ್ಕಶೀರ್ಷಿಕೆ 2230–01–198–6–01 (2230–01–101–0–01) ರಡಿ ಒಟ್ಟು 68.00ಲಕ್ಷಗಳನ್ನು ಕಲ್ಪಿಸಿರುತ್ತದೆ. ಆದ ಕಾರಣ ಈ ಲೆಕ್ಕ ಶೀರ್ಷಿಕೆಯಡಿ ಲಭ್ಯವಿರುವ ಅನುದಾನದಿಂದ ಕೇಂದ್ರ ಸರ್ಕಾರದಿಂದ ಸ್ವೀಕೃತವಾದ ಒಟ್ಟು 60.00ಲಕ್ಷಗಳನ್ನು ರಾಜ್ಯದ 30 ಜಿಲ್ಲೆಗಳಿಗೆ ಮರು ಬಿಡುಗಡೆ ಮಾಡಲು ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:05 ಆರ್.ಬಿ.ಎಲ್. 2012, ದಿನಾಂಕ: 13–06–2012

ಕೇಂದ್ರ ಸರ್ಕಾರದಿಂದ ಉಲ್ಲೇಖ (1)ರ ಆದೇಶದಂತೆ ರಾಜ್ಯದಲ್ಲಿ ಜೀತದಾಳುಗಳನ್ನು ಗುರುತಿಸುವ ಸಲುವಾಗಿ ಸಮೀಕ್ಷೆ ಕಾರ್ಯ ನಡೆಸಲು ಪಡೆಯಲಾದ ಒಟ್ಟು 60.00ಲಕ್ಷಗಳನ್ನು (ಅರವತ್ತು ಲಕ್ಷಗಳನ್ನು ಮಾತ್ರ) 2012–13ನೇ ಸಾಲಿನಲ್ಲಿ ರಾಜ್ಯದ ಆಯವ್ಯಯದಡಿ ಜೀತದಾಳುಗಳ ಪುನರ್ವಸತಿ ಯೋಜನೆಯ ಕಾರ್ಯಕ್ರಮಕ್ಕಾಗಿ ಲೆಕ್ಕಶೀರ್ಷಿಕೆ 2230–01–198–6–01 (2230–01–101–0–01)ರಡಿ ಲಭ್ಯವಿರುವ ಅನುದಾನದಿಂದ 30 ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಿದಂತೆ ಮರು ಬಿಡುಗಡೆ ಗೊಳಿಸಲು ಆದೇಶಿಸಿದೆ.

		ಕೋಷ್ಟಕ	(ರೂ.ಲಕ್ಷಗಳಲ್ಲಿ)
ಕ್ರ.ಸಂ.	ಜಿಲ್ಲೆಯ ಹೆಸರು	ಜಿಲ್ಲಾಧಿಕಾರಿಗಳ DDO-Code	ಬಿಡುಗಡೆ ಮಾಡಲಾದ ಹಣ
1.	ಬೆಂಗಳೂರು ನಗರ	0100RD0004	2.00
2.	ಬೆಂಗಳೂರು (ಗ್ರಾ)	0200RD0001	2.00
3.	ಬೆಳಗಾಂ	2200RD0002	2.00
4.	ಬಳ್ಳಾರಿ	3400RD0004	2.00
5.	ಬೀದರ್	3800RD6702	2.00
6.	ಬಿಜಾಪುರ	2800RD6702	2.00
7.	ಚಿಕ್ಕಮಗಳೂರು	1800RD0115	2.00
8.	ಚಿತ್ರದುರ್ಗ	1600RD0002	2.00
9.	ದಕ್ಷಿಣ ಕನ್ನಡ	1900RD0001	2.00
10.	ಧಾರವಾಡ	2500RD6702	2.00
11.	ಗುಲ್ಬರ್ಗಾ	3200RD0009	2.00
12.	ಹಾಸನ	1300RD0001	2.00
13.	ಕೊಡಗು	1200RD0001	2.00
14.	ಕೋಲಾರ	0700RD6702	2.00
15.	ಮಂಡ್ಯ	1100RD0001	2.00
16.	ಮೈಸೂರು	0900RD0003	2.00
17.	ರಾಯಚೂರು	3600RD0001	2.00
18.	ಶಿವಮೊಗ್ಗ	1400RD0002	2.00

19.	ತುಮಕೂರು	0800RD0001	2.00
20.	ಉತ್ತರ ಕನ್ನಡ	3000RD0150	2.00
21.	ಚಾಮರಾಜನಗರ	1000RD0002	2.00
22.	ಉಡುಪಿ	2000RD0002	2.00
23.	ದಾವಣಗೆರೆ	1700RD0019	2.00
24.	ಕೊಪ್ಪಳ	1500RD0013	2.00
25.	ಬಾಗಲಕೋಟೆ	2900RD0001	2.00
26.	ಗದಗ	2600RD0001	2.00
27.	ಹಾವೇರಿ	2700RD0004	2.00
28.	ರಾಮನಗರ	0400RD0006	2.00
29.	ಚಿಕ್ಕಬಳ್ಳಾಪುರ	0600RD0001	2.00
30.	ಯಾದಗಿರಿ	3300RD0005	2.00
ಒಟ್ಟು			**60.00**

ಮೇಲೆ ತಿಳಿಸಿದ ಅನುದಾನವನ್ನು ಆಯಾಯ ಜಿಲ್ಲಾಧಿಕಾರಿಗಳು ಜಿಲ್ಲಾ ಖಜಾನೆಯಿಂದ ಒಂದು ವಾರದೊಳಗಾಗಿ ತಪ್ಪದೆ ಸೆಳೆದು ಉಲ್ಲೇಖ (2)ರ ನಿರ್ದೇಶನದಂತೆ ಬೇರೆ ಉದ್ದೇಶಗಳಿಗೆ ಬಳಸಿಕೊಳ್ಳದೆ, ಕೇವಲ ಜೀತದಾಳುಗಳನ್ನು ಪತ್ತೆ ಹಚ್ಚುವ ಸಮೀಕ್ಷೆಯ ಕಾರ್ಯಕ್ಕಾಗಿಯೇ ಬಳಸಿಕೊಳ್ಳತಕ್ಕದ್ದು. ಈ ಜೀತದಾಳುಗಳ ಸಮೀಕ್ಷೆ ಕಾರ್ಯದ ಅನುದಾನವನ್ನು ಪ್ರಶ್ನಾವಳಿಯ ಮುದ್ರಣಕ್ಕಾಗಿ, ಮಾಹಿತಿ ಒಟ್ಟು ಗೂಡಿಸಲು ಅನ್ವೇಷಕರಿಗೆ/ಕ್ಷೇತ್ರ ಕಾರ್ಯಕರ್ತರಿಗೆ ತರಬೇತಿ ನೀಡುವ ಉದ್ದೇಶಕ್ಕಾಗಿ, ಕ್ಷೇತ್ರದಿಂದ ಮಾಹಿತಿ ಸಂಗ್ರಹಣೆಗೆ ಮಾಡುವ ಉದ್ದೇಶಕ್ಕಾಗಿ, ಮಾಹಿತಿಯ ತಪಾಸಣೆ, ಕ್ರೋಢಿಕರಣ ಮತ್ತು ವಿಶ್ಲೇಷಣೆ ಮಾಡುವ ಸಲುವಾಗಿ ಹಾಗೂ ಮಾಹಿತಿಯ ಗಣಕೀಕರಣಕ್ಕಾಗಿ ಬಳಸಿಕೊಳ್ಳುವುದು.

ಕೇಂದ್ರ ಸರ್ಕಾರದ ಆದೇಶದಲ್ಲಿ ಸೂಚಿಸಿದಂತೆ ತ್ರೈಮಾಸಿಕ ವರದಿಯನ್ನು ಹಾಗೂ ಹಣಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ತಪ್ಪದೆ ಸಲ್ಲಿಸುವುದು.

ಈ ಆದೇಶವನ್ನು ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂ.ಗ್ರಾಅಪ. 09/ಪಿಬಿಎಸ್:2012-13, ದಿನಾಂಕ: 07-06-2012 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ದೀಪಾ
ನಿರ್ದೇಶಕರು ಸ್ವ.ಉ.ಕಾ
ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿ.ಆರ್: 1703

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ: ಕರ್ನಾಟಕ ರಾಜ್ಯ ಗಿಡಮೂಲಿಕ ಔಷಧಿ ಪ್ರಾಧಿಕಾರದ ಆಡಳಿತ ಮಂಡಳಿಯ ಅವಧಿಯನ್ನು ದಿನಾಂಕ 31-03-2013ರ ವರೆಗೆ ವಿಸ್ತರಿಸುವ ಬಗ್ಗೆ.-

ಓದಲಾಗಿದೆ: 1)ಸರ್ಕಾರಿ ಆದೇಶ ಸಂಖ್ಯೆ: ಅಪಜೀ 33 ಎಫ್‌ಡಿಎಸ್ 2001, ದಿನಾಂಕ 27-02-2002

2) ಸರ್ಕಾರಿ ಆದೇಶ ಸಂಖ್ಯೆ: ಅಪಜೀ 50 ಎಫ್‌ಪಿಸಿ 2009, ದಿನಾಂಕ 06-01-2010

3) ಸರ್ಕಾರಿ ಆದೇಶ ಸಂಖ್ಯೆ: ಅಪಜೀ 12 ಎಫ್‌ಪಿಸಿ 2012, ದಿನಾಂಕ 14-02-2012

4) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ರಾಜ್ಯ ಗಿಡಮೂಲಿಕ ಔಷಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ: ಕಂಪ/ಆಮಂ/82/2011-12, ದಿನಾಂಕ 31-03-2012.

ಪ್ರಸ್ತಾವನೆ:

1. ಮೇಲೆ (1)ರಲ್ಲಿ ಓದಲಾದ ದಿನಾಂಕ 27-02-2002ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ರಾಜ್ಯ ಗಿಡಮೂಲಿಕೆ ಔಷಧಿ ಪ್ರಾಧಿಕಾರದ (ಕಂಪ) ಆಡಳಿತ ಮಂಡಳಿಯನ್ನು ಸ್ಥಾಪಿಸಲಾಗಿದೆ.
2. ಮೇಲೆ (2)ರಲ್ಲಿ ಓದಲಾದ ದಿನಾಂಕ 06-01-2010ರ ಆದೇಶದಲ್ಲಿ ಸರ್ಕಾರವು ಕರ್ನಾಟಕ ರಾಜ್ಯ ಗಿಡಮೂಲಿಕಾ ಔಷಧಿ ಪ್ರಾಧಿಕಾರದ ಆಡಳಿತ ಮಂಡಳಿಯನ್ನು ಪುನರ್ ರಚಿಸಿ ಆದೇಶ ಹೊರಡಿಸಲಾಗಿದೆ.

3. ಮೇಲೆ (3)ರಲ್ಲಿ ಓದಲಾದ ದಿನಾಂಕ 14–02–2012ರ ಆದೇಶದಲ್ಲಿ ಸರ್ಕಾರವು ಸದರಿ ಪ್ರಾಧಿಕಾರದ ಆಡಳಿತ ಮಂಡಳಿಯ ಅಧಿಕಾರದ ಅವಧಿಯನ್ನು ದಿನಾಂಕ 06–01–2012 ರಿಂದ ದಿನಾಂಕ 31–03–2012ರ ವರೆಗೆ ವಿಸ್ತರಿಸಿ ಆದೇಶಿಸಿದೆ.
4. ಮೇಲೆ (4)ರಲ್ಲಿ ಓದಲಾದ ದಿನಾಂಕ 31–03–2012ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ರಾಜ್ಯ ಔಷಧೀಯ ಸಸ್ಯಗಳ ಪ್ರಾಧಿಕಾರ, ಬೆಂಗಳೂರು ಇವರು ದಿನಾಂಕ 01–04–2012 ರಿಂದ ಅನ್ವಯವಾಗುವಂತೆ ಹೊಸ ಆಡಳಿತ ಮಂಡಳಿಯನ್ನು ರಚಿಸಲು ಕೋರಿರುತ್ತಾರೆ. ಅಲ್ಲದೇ, ಈ ಹಿಂದೆ ರಚಿಸಲಾಗಿದ್ದ ಆಡಳಿತ ಮಂಡಳಿಯಲ್ಲಿನ ಸದಸ್ಯರಾದ ಡಾ॥ ಮಾಧವ ಗಾಡ್ಗೀಳ್ ಇವರು ಕಳೆದ ಎರಡು ವರ್ಷಗಳಲ್ಲಿ ನಡೆದ ಆಡಳಿತ ಮಂಡಳಿಯ ಯಾವ ಸಭೆಗೂ ಹಾಜರಾಗಿರುವುದಿಲ್ಲವೆಂದು ತಿಳಿಸಿ ಈಗ ರಚಿಸಲಾಗುವ ಆಡಳಿತ ಮಂಡಳಿಯಿಂದ ಸದರಿಯವರ ಹೆಸರನ್ನು ಕೈ ಬಿಡಲು ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ

ಸರ್ಕಾರದ ಆದೇಶ ಸಂಖ್ಯೆ: ಅಪಜೀ 38 ಎಫಪಿಸಿ 2012, ಬೆಂಗಳೂರು, ದಿನಾಂಕ 12–06–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರವು ಕರ್ನಾಟಕ ರಾಜ್ಯ ಗಿಡಮೂಲಿಕಾ ಔಷಧಿ ಪ್ರಾಧಿಕಾರದ ಮೆಮೋರಾಂಡಂ ಆಫ್ ಅಸೋಸಿಯೇಷನ್ ರನ್ವಯ ಈ ಕೆಳಕಂಡಂತೆ ಸದರಿ ಪ್ರಾಧಿಕಾರದ ಆಡಳಿತ ಮಂಡಳಿಯನ್ನು ಪುನರ್ ರಸಿಸಿ ಪ್ರಾಧಿಕಾರದ ಅವಧಿಯನ್ನು ದಿನಾಂಕ 01–04–2012 ರಿಂದ ಪೂರ್ವಾನ್ವಯವಾಗುವಂತೆ ಒಂದು ವರ್ಷದ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

1. ಮಾನ್ಯ ಅರಣ್ಯ ಸಚಿವರು	...	ಅಧ್ಯಕ್ಷರು
2. ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ	...	ಸದಸ್ಯರು
3. ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	...	ಸದಸ್ಯರು
4. ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ	...	ಸದಸ್ಯರು
5. ಪ್ರಧಾನ ಕಾರ್ಯದರ್ಶಿ, ಕೃಷಿ ಮತ್ತು ತೋಟಗಾರಿಕೆ ಇಲಾಖೆ	...	ಸದಸ್ಯರು
6. ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	...	ಸದಸ್ಯರು
7. ಪ್ರಧಾನ ಕಾರ್ಯದರ್ಶಿ (ತೋಟಗಾರಿಕೆ), ಕೃಷಿ ಮತ್ತು ತೋಟಗಾರಿಕೆ	...	ಸದಸ್ಯರು
8. ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ	...	ಸದಸ್ಯರು
9. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು	...	ಸದಸ್ಯರು
10. ನಿರ್ದೇಶಕರು, ಭಾರತೀಯ ವೈದ್ಯಪದ್ಧತಿಗಳು, ಬೆಂಗಳೂರು	...	ಸದಸ್ಯರು

ಸರ್ಕಾರೇತರ ಸಂಸ್ಥೆ ಪ್ರತಿನಿಧಿ–ಪ್ರಾಧಿಕಾರದ ಉಪಾಧ್ಯಕ್ಷರು:

11. ಶ್ರೀ ಅನಂತ ಹೆಗಡೆ ಆಶಿಸರ, ಅಧ್ಯಕ್ಷರು, ವೃಕ್ಷಲಕ್ಷ ಅಂದೋಲನ (ರಿ) ಬಿ.ಹೆಚ್. ರಸ್ತೆ ಸಾಗರ.

ಅಧಿಕಾರೇತರ ಸದಸ್ಯರುಗಳು:

12. ಡಾ॥ ಡಿ. ಕೆ. ವೇದ್, ನಿರ್ದೇಶಕರು, ಎಫ್.ಆರ್.ಎಲ್.ಹೆಚ್.ಟಿ. ನಂ. 74/2, ಜಾರಕಬಂಡೆ ಕಾವಲ್ ಅಟ್ಟೂರ್ ಅಂಚೆ, ಯಲಹಂಕ, ಬೆಂಗಳೂರು.

ಮೂಲಿಕೆ ಔಷಧಿ ಉತ್ಪಾದಕರ ಪ್ರತಿನಿಧಿ:

13. ಜೆ. ಎಸ್. ಡಿ. ಪಾಣಿ, ಅಧ್ಯಕ್ಷರು, ಕರ್ನಾಟಕ ರಾಜ್ಯ ಭಾರತೀಯ ವೈದ್ಯ ಪದ್ದತಿ ಔಷಧಿಗಳ ಉತ್ಪಾದಕರ ಸಂಘ (ರಿ) (ಕಿಮ್ಮ) ನಂ. 126/6, ಚೇಳಕೆರೆ (ಶುಶ್ರೂತ ಆಸ್ಪತ್ರೆ ಮುಂಭಾಗ), ಕಲ್ಯಾಣ ನಗರ, ಬೆಂಗಳೂರು–43.

ಗಿಡಮೂಲಿಕಾ ಸಸ್ಯಗಳ ಮಾರಾಟಗಾರರ ಪ್ರತಿನಿಧಿ:

14. ಡಾ॥ ಬಿ. ಆರ್. ಭಟ್, ಏರಿಯಲ್ ಫಾರ್ಮಾಸ್ಯೂಟಿಕಲ್ಸ್, ನಂ. 89, ಸಹಕಾರ ನಗರ, ಬೆಂಗಳೂರು–560 092

ಆಯುರ್ವೇದ ವೈದ್ಯರ ಪ್ರತಿನಿಧಿ:

15. ಡಾ॥ ಎಂ. ಜಿ. ಕೃಷ್ಣಮೂರ್ತಿ, ನಂ. 246, ಬೃಂದಾವನ ಬಡಾವಣೆ, ಬೀರಿಹುಂಡಿ, ಮೈಸೂರು ತಾಲ್ಲೂಕು, ಅಂಚೆ ಪೆಟ್ಟಿಗೆ ಸಂಖ್ಯೆ: 8, ಮೈಸೂರು–570 020.

ಲ್ಯಾಂಪ್ಸ್ ಸೊಸೈಟಿ ಪ್ರತಿನಿಧಿ:

16. ಅಧ್ಯಕ್ಷರು, ಲ್ಯಾಂಪ್ ಸೊಸೈಟಿ, ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ ಆವರಣ, ಸತ್ತಿ ಸರ್ಕಲ್, ಚಾಮರಾಜನಗರ ಜಿಲ್ಲೆ, ಚಾಮರಾಜನಗರ.
17. ಡಾ॥ ಕೇಶವ ಹೆಚ್. ಕೋರ್ಸೆ, ಪ್ರಾಧ್ಯಾಪಕರು ಮತ್ತು ಸಂಶೋಧಕರು, ಔಷಧ ಸಸ್ಯಶಾಸ್ತ್ರ ವಿಭಾಗ, ಶ್ರೀ ಧ.ಮ.ಕಾಲೇಜು, ಉಜಿರೆ, (ದ.ಕ.)

ಗ್ರಾಮ ಅರಣ್ಯ ಸಮಿತಿ ಪ್ರತಿನಿಧಿ:

18. ಶ್ರೀ ಜಯದೇವಯ್ಯ, ಸದಸ್ಯರು, ಸಾವಂದಿ ಗ್ರಾಮ ಅರಣ್ಯ ಸಮಿತಿ, ಕೆ.ವಿ. ಮಠ, ಮಾಗಡಿ, ರಾಮನಗರ ಜಿಲ್ಲೆ

ಸರ್ಕಾರೇತರ/ಅಧಿಕಾರೇತರ ಪ್ರತಿನಿಧಿಗಳಿಗೆ ಪ್ರವಾಸ, ದಿನಭತ್ಯೆಗಳನ್ನು ಆಗಿಂದಾಗ್ಗೆ ಜಾರಿಯಲ್ಲಿರುವ ದರದಂತೆ ಮಂಜೂರಾತಿ ನೀಡಲು ಪ್ರಾಧಿಕಾರವು ಅಧಿಕಾರ ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಉಮಾದೇವಿ

ಸರ್ಕಾರದ ಅಧೀನ ಕಾರ್ಯದರ್ಶಿ

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಪಿ.ಆರ್. 1704

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ರಾಜ್ಯದಲ್ಲಿರುವ ಸರ್ಕಾರಿ ನರ್ಸಿಂಗ್ ಶಾಲೆಗಳಲ್ಲಿನ ಮತ್ತು ಖಾಸಗಿ ನರ್ಸಿಂಗ್ ಶಾಲೆಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳಿಗೆ ರಾಜ್ಯಮಟ್ಟದ ಕೌನ್ಸಿಲಿಂಗ್ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅನುಮತಿ ನೀಡುವ ಬಗ್ಗೆ.–

ಓದಲಾಗಿದೆ: ವೈದ್ಯಕೀರಯ ಶಿಕ್ಷಣ ನಿರ್ದೇಶಕರು, ಬೆಂಗಳೂರು ಇವರ ಪತ್ರ ಸಂಖ್ಯೆ: ವೈಶಿನಿ/ಎನ್‌ಆರ್‌ಸಿ (2)/01/2012–13, ದಿನಾಂಕ 03–05–2012.

ಪ್ರಸ್ತಾವನೆ:

ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು ಇವರು ಮೇಲೆ ಓದಲಾದ ತಮ್ಮ ಪತ್ರದಲ್ಲಿ ದಿನಾಂಕ 13–04–2012 ರಂದು ವೈದ್ಯಕೀಯ ಶಿಕ್ಷಣ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಶುಸ್ರೂಷಾ ತರಬೇತಿ ಆಯ್ಕೆ ಸಮಿತಿ ಸಭೆಯಲ್ಲಿನ ತೀರ್ಮಾನದಂತೆ 2012–13ನೇ ಸಾಲಿನ ಶೈಕ್ಷಣಿಕ ವರ್ಷದಿಂದ ರಾಜ್ಯದಲ್ಲಿರುವ ಸರ್ಕಾರಿ ನರ್ಸಿಂಗ್ ಶಾಲೆಗಳಲ್ಲಿನ ಮತ್ತು ಖಾಸಗಿ ನರ್ಸಿಂಗ್ ಶಾಲೆಗಳಲ್ಲಿನ ಶೇ. 10 ರಷ್ಟು ಸರ್ಕಾರಿ ಕೋಟಾದ ಸೀಟುಗಳಿಗೆ ಶುಶ್ರೂಷಾ ತರಬೇತಿಗಾಗಿ ಅಭ್ಯರ್ಥಿಗಳನ್ನು ರಾಜ್ಯಮಟ್ಟದ ಕೌನ್ಸಿಲಿಂಗ್ ಮೂಲಕ ಆಯ್ಕೆ ಮಾಡಲು ಅನುಮತಿ ನೀಡಿ ಆದೇಶ ಹೊರಡಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ 2012–13ನೇ ಸಾಲಿನ ಶೈಕ್ಷಣಿಕ ವರ್ಷದಿಂದ ರಾಜ್ಯದಲ್ಲಿರುವ ಸರ್ಕಾರಿ ನರ್ಸಿಂಗ್ ಶಾಲೆಗಳಲ್ಲಿ ಲಭ್ಯವಿರುವ ಎಲ್ಲಾ ಸೀಟುಗಳಿಗೆ ಮತ್ತು ಖಾಸಗಿ ನರ್ಸಿಂಗ್ ಶಾಲೆಗಳಲ್ಲಿನ ಶೇ. 10 ರಷ್ಟು ಸರ್ಕಾರಿ ಕೋಟಾದ ಸೀಟುಗಳಿಗೆ ಶುಶ್ರೂಷಾ ತರಬೇತಿಗಾಗಿ ಅಭ್ಯರ್ಥಿಗಳನ್ನು ರಾಜ್ಯಮಟ್ಟದ ಕೌನ್ಸಿಲಿಂಗ್ ಮೂಲಕ ಆಯ್ಕೆ ಮಾಡಲು ಅನುಮತಿ ನೀಡಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 140 ಎಂಎಂಇ 2011, ಬೆಂಗಳೂರು, ದಿನಾಂಕ 16–06–2012

2012–13ನೇ ಸಾಲಿನ ಶೈಕ್ಷಣಿಕ ವರ್ಷದಿಂದ ರಾಜ್ಯದಲ್ಲಿರುವ ಸರ್ಕಾರಿ ನರ್ಸಿಂಗ್ ಶಾಲೆಗಳಲ್ಲಿ ಲಭ್ಯವಿರುವ ಎಲ್ಲಾ ಸೀಟುಗಳಿಗೆ ಮತ್ತು ಖಾಸಗಿ ನರ್ಸಿಂಗ್ ಶಾಲೆಗಳಲ್ಲಿನ ಶೇ. 10 ರಷ್ಟು ಸರ್ಕಾರಿ ಕೋಟಾದ ಸೀಟುಗಳಿಗೆ ಶುಶ್ರೂಷಾ ತರಬೇತಿಗಾಗಿ ಅಭ್ಯರ್ಥಿಗಳನ್ನು ರಾಜ್ಯಮಟ್ಟದ ಕೌನ್ಸಿಲಿಂಗ್ ಮೂಲಕ ಆಯ್ಕೆ ಮಾಡಲು ಅನುಮತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ವಿ. ಸಾಯಿಬಾಬಾ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ವೈದ್ಯಕೀಯ ಶಿಕ್ಷಣ)

ಪಿ.ಆರ್. 1705

ಕಂದಾಯ ಸಚಿವಾಲಯ

ವಿಷಯ: ಆಸರೆ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಿಸಲು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ಇವರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.–

ಓದಲಾಗಿದೆ:

1) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ–2ರವರ ಟಿಪ್ಪಣಿ ಸಂಖ್ಯೆ: ಮುಮಪ್ರಕಾ–2/3209/2012, ದಿನಾಂಕ 22–05–2012

2) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ–2ರವರ ಟಿಪ್ಪಣಿ ಸಂಖ್ಯೆ: ಮುಮಪ್ರಕಾ–2/3210/2012, ದಿನಾಂಕ 22–05–2012 ಮತ್ತು 29–05–2012.

ಪ್ರಸ್ತಾವನೆ:

ಮೇಲೆ (1)ರ ಓದಲಾದ ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿಯಲ್ಲಿ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ನಂದಿಕೇಶ್ವರ, ಬಿ. ಎನ್. ಜಾಲಿಹಾಳ, ಚೋಳಚಗುಡ್ಡ, ನೆಲವಗಿ ಹಾಗೂ ಹುನಗುಂದ ತಾಲ್ಲೂಕಿನ ಹಿರೇಮಾಗಿ ಮತ್ತು ಕಮತಗಿ ಗ್ರಾಮಗಳಲ್ಲಿ ಕ್ರೇಡೈ

ಸಂಸ್ಥೆಯವರು ಪೂರ್ಣಗೊಳಿಸದೇ ಬಿಟ್ಟಿದ್ದ 986 ಆಸರೆ ಮನೆಗಳನ್ನು ನಿರ್ಮಾಣ ಮಾಡಲು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರಿಗೆ ಸರ್ಕಾರದ ಆದೇಶ ಸಂ: ಕಂಇ 174 ಟಿಎನ್‌ಆರ್ 2010, ದಿನಾಂಕ 21–03–2012ರ ಆದೇಶದಲ್ಲಿ ರೂ. 12,59,40,000/– ಬಿಡುಗಡೆ ಮಾಡಿದ್ದು, ಸದರಿ ಆದೇಶವನ್ನು ರದ್ದುಗೊಳಿಸಿ, ಈ ಹಿಂದೆ ಕ್ರೇಡೈ ಸಂಸ್ಥೆ ಮನೆಗಳಿಗೆ ಖರ್ಚು ಮಾಡಿದ್ದ ಹಣವನ್ನು ಸರಿಯಾಗಿ ಪರಿಶೀಲಿಸಿ, ಭಾಗಶಃ ಪೂರ್ಣಗೊಳಿಸಿದ ಮನೆಗಳನ್ನು ಪೂರ್ಣಗೊಳಿಸಲು ಬೇಕಾದ ಹಣವನ್ನು ಅಂದರೆ ರೂ. 1114.61 ಲಕ್ಷಗಳನ್ನು ಹಾಗೂ ಮೇಲೆ ಓದಲಾದ (2)ರಲ್ಲಿ ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ಹಚ್ಚೊಳಿ ಗ್ರಾಮದಲ್ಲಿ ವಿ.ಎಸ್.ಲಾಡ್ ಸಂಸ್ಥೆಯವರು ವಿವಿಧ ಹಂತಗಳಲ್ಲಿ ನಿರ್ಮಿಸದೇ ಉಳಿಸಿದ್ದ 649 ಮನೆಗಳನ್ನು ಪೂರ್ಣಗೊಳಿಸಲು ಬೇಕಾದ ಅನುದಾನ ರೂ. 596.89 ಲಕ್ಷಗಳನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಅನುದಾನ ಬಿಡುಗಡೆ ಮಾಡಲು ಕೆಳಕಂಡಂತೆ ಆದೇಶ ಹೊರಡಿಸಿದೆ

ಸರ್ಕಾರದ ಆದೇಶ ಸಂಖ್ಯೆ: ಕಂಇ 215 ಟಿಎನ್‌ಆರ್ 2012, ಬೆಂಗಳೂರು, ದಿನಾಂಕ 11–06–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ನಂದಿಕೇಶ್ವರ, ಬಿ.ಎನ್. ಜಾಲಿಹಾಳ, ಚೋಳಚಗುಡ್ಡ, ನೆಲವಗಿ ಹಾಗೂ ಹುನಗುಂದ ತಾಲ್ಲೂಕಿನ ಹಿರೇಮಾಗಿ ಮತ್ತು ಕಮತಗಿ ಗ್ರಾಮಗಳಲ್ಲಿ 986 ಆಸರೆ ಮನೆಗಳನ್ನು ನಿರ್ಮಾಣ ಮಾಡಲು ಬೇಕಾದ ಅನುದಾನ ರೂ. 1114.61 ಲಕ್ಷಗಳನ್ನು ಹಾಗೂ ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ಹಚ್ಚೊಳಿ ಗ್ರಾಮದಲ್ಲಿ ಆಸರೆ ಮನೆಗಳ ನಿರ್ಮಾಣಕ್ಕಾಗಿ ರೂ. 596.89 ಲಕ್ಷಗಳು, ಒಟ್ಟು ರೂ. 1711.50 (ಒಂದ ಸಾವಿರದ ಏಳುನೂರ ಹನ್ನೊಂದು ಲಕ್ಷಗಳು ಮತ್ತು ಐವತ್ತು ಸಾವಿರ ಮಾತ್ರ) ಲಕ್ಷಗಳನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಇವರಿಗೆ ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ ಆಸರೆ ಮನೆಗಳನ್ನು ನಿರ್ಮಾಣ ಮಾಡಲು ರೂ. 12,59,40,000/– ಗಳನ್ನು ಬಾಗಲಕೋಟೆ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ ಸರ್ಕಾರದ ಆದೇಶ ಸಂ. ಆರ್‌ಡಿ 174 ಟಿಎನ್‌ಆರ್ 2010, ದಿನಾಂಕ 21–03–2012ನ್ನು ರದ್ದುಗೊಳಿಸಿದೆ ಹಾಗೂ ಸದರಿ ಮೊತ್ತವನ್ನು ಲೆಕ್ಕ ಶೀರ್ಷಿಕೆ 8235–00–111–0–02 "Public Contributions to Calamity Relief" ಗೆ ಮರು ಭರಣ ಮಾಡುವಂತೆ ಆದೇಶಿಸಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ 8235–00–111–0–02 "Public Contributions to Calamity Relief" ಅಡಿಯಲ್ಲಿ ಡ್ರಾ ಮಾಡುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಈ ಹಿಂದೆ ಈ ಮನೆಗಳಿಗೆ ದಾನಿಗಳು ಖರ್ಚು ಮಾಡಿದ್ದ ಹಣವನ್ನು ಸರಿಯಾಗಿ ಪರಿಶೀಲಿಸಿ ಭಾಗಶಃ ಪೂರ್ಣಗೊಳಿಸಿದ ಮನೆಗಳನ್ನು ಪೂರ್ಣಗೊಳಿಸಲು ಬೇಕಾದ ಹಣವನ್ನು ಮಾತ್ರ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ಖರ್ಚು ಮಾಡುವಂತೆ ಷರತ್ತು ವಿಧಿಸಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಸಂಬಂಧಿಸಿದ ಸಂಸ್ಥೆಯ ಮುಖ್ಯಸ್ಥರು ಅನುದಾನದ ಬಿಲ್ (ಪೇಯೀಸ್ ರಸೀದಿ) ತಯಾರಿಸಿ ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಇವರಿಂದ ಮೇಲು ರುಜು ಪಡೆದು, ರಾಜ್ಯ ಹುಜೂರ್ ಖಜಾನೆಯಿಂದ ಡ್ರಾ ಮಾಡಿಕೊಳ್ಳಲು ಆದೇಶಿಸಿದೆ. ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿಯೇ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದು.

ಅನುದಾನ ವೆಚ್ಚ ಮಾಡಿದ್ದಕ್ಕೆ, ಸಂಬಂಧಪಟ್ಟ ಅಧಿಕಾರಿಗಳು ಹಣಬಳಕೆ ಪ್ರಮಾಣ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸುವುದು ಹಾಗೂ ಕಾಮಗಾರಿಗಳ ಬಗ್ಗೆ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು ಸಹ ಸರ್ಕಾರಕ್ಕೆ ಸಲ್ಲಿಸುವುದು.

ಈ ಆದೇಶವನ್ನು ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ–2ರವರ ಟಿಪ್ಪಣಿ ಸಂಖ್ಯೆ: ಮುಮಪ್ರಕಾ–2/ಆಸರೆ/3209/2012, ದಿನಾಂಕ 22–05–2012 ಮತ್ತು ಮುಮಪ್ರಕಾ–2/ಆಸರೆ/3210/2012, ದಿನಾಂಕ 22–05–2012 ಮತ್ತು 29–05–2012ರ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ಎಮ್. ಆನಂದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿ.ನಿ ಮತ್ತು ಸೇ–2)

ಪಿ.ಆರ್. 1706

COMMERCE AND INDUSTRIES SECRETARIAT

Sub: Formation of PPP Cell in the Commerce and Industries Department under the IDD engagement-reg.

Read:
1) Government Order No. CI 27 SPI 2012, dated 28-03-2012
2) Letter from the Manager, Crisil Infrastructure Advisory, dated 22-03-2012.
3) Proceedings of the 2nd PPP Cell Meeting held at Department of Industries and Commerce dated 02-05-2012.

Preamble:

The Manager, Crisil Infrastructure Advisory, in his letter read at (2) has proposed for the formation of PPP Cell in the Commerce and Industries Department under the IDD engagement. The proposal has been verified and a Government Order has been issued to the effect (Read at (1).

In 2nd PPP Cell Meeting held on 2nd May 2012 at Department of Industries and Commerce, the committee proposed that the Cell be henceforth to be housed in the Directorate of Industries and Commerce, and an Officer from Directorate of Industries and Commerce shall be nominated as the member Secretary of the PPP Cell.

Government has examined the resolution made in the 2nd Meeting of PPP Cell, in all its aspects and as per the recommendations of Commissioner for I.D.G. Narayana Raju, Additional Director (Vishwa) is being nominated as Member Secretary of the PPP Cell.

Hence the following Order

Government Order No. CI 27 SPI 2012, Bangalore, dated 16-06-2012

Government is pleased to appoint Sri G. Narayana Raju, Additional Director (Vishwa), Dept. of I & C as a Member Secretary of the PPP Cell with immediate effect. The PPP Cell shall function from the office of Commissioner for ID and DIC henceforth.

By Order and in the name of the Governor of Karnataka

K. R. Chandramma

Desk Officer (Technical Cell) (I/c),

P.R. 1707 Commerce & Industries Department

INFRASTRUCTURE DEVELOPMENT SECRETARIAT

Sub: Project Management Services for Construction of Shimoga Airport-Fees to iDeck.-

Read:
1) Government letter No. IDD 72 DIA 08, dated 09-07-2009
2) G.O. No. IDD 86 DIA 08, dated 12-08-2009
3) G.O. No. IDD 86 DIA 08, dated 24-09-2010
4) G.O. No. IDD 86 DIA 08, dated 04-03-2011
5) G.O. No. IDD 86 DIA 08, dated 21-03-2011
6) Letter No. IDeCK/2011-12/887, dated: 16-09-2011 from CFO, iDeCK, Bangalore.
7) Government Notification No. ಆಇ 1122 ವೆಚ್ಚ–12/11, dated 27-12-2011
8) G.O. No. IDD 86 DIA 2008, dated 10-02-2012
9) G.O. No. IDD 86 DIA 2008, dated 29-02-2012
10) Letter No. iDeck/2011-12/1676, dated 13-03-2012 from the President (Projects) iDeCK, Bangalore.

Preamble:

In Government letter dated 09-07-2009 read at Sl. No. (1) above, iDeCK has been appointed as consultant to oversee the project implementation including verification of the physical/financial progress of the Shimoga Airport Development Project on a monthly basis and generate periodical reports and submit it to the Infrastructure development Department for monitoring the progress.

2. In G.O. dated 12-08-2009 read at Sl. NO. (2) above, approval was given for scope of services and sanction for payment of fees to iDeCK for project management services for Shimoga Airport Development project at the rate not exceeding of Rs. 3,00,000/-exclusive of applicable service taxes per month for the project period of twelve months.

3. In Government Orders read at Sl. No. (3-5) above, necessary amounts have been released to iDeCK, Bangalore towards the fees for Project Management Services of Shimoga Airport Project from October 2009-February 2011 respectively.

4. In letter dated 16-09-2011 read at (6) above, the President (projects), iDeCK, Bangalore has stated that the construction of Airport started in October 2009 and is likely to continue up to August 2012 and has requested for extension of the Project Management and Consultancy Services till the completion of the project.

5. In Government Notification read at (7) above, exemption for procuring the services of iDeCK under the provisions of 4(g) of the KTPP Act 1999, for the period from December 2011 to August 2012 has been given for Shimoga Airport.

6. In G.O. dated 10-02-2012 read at Sl. NO. (8) above, an amount of Rs. 21,78,425/- has been released to iDeCK, Bangalore towards fees to iDeCk for Project Management and Consultancy Services for the Shimoga Airport Project for the months of March 2011 and July to December 2011.

7. In G.O. dated 10-02-2012 read at Sl. No. (9) above, an amount of Rs. 9,09,975/-has been released to iDeCK, Bangalore towards fees to iDeCK for Project Management and Consultancy Services for the Shimoga Airport Project for the months of April 2011, May 2011 and June 2011.

8. In letter read at Sl. No. (10) above, the President (Projects), iDeCK, Bangalore has requested to release an amount of Rs. 6,61,800/- towards payment of fees to iDeCK for project management and consultancy services for pending months of January 2012 and February 2012.

9. The proposal has been examined in detail and hence this Order

Government Order No. IDD 86 DIA 2008, Bangalore, dated 16-06-2012

Under the circumstances explained in the preamble, sanction is accorded for release of Rs. 6,61,800/- (Rupees Six lakhs Sixty One thousand Eight Hundred only) towards fees to iDeck for Project Management and Consultancy Services for the Shimoga Airport Project for the months of January 2012 and February 2012.

2. This amount shall be met under the Head of **Account "5465-01-190-1-05-211-Development of Minor Airports Investment"** out of the provision of Rs. 500.00 laksh during 2012-13.

3. The Chief Financial Officer, iDeCK, Bangalore is authorized to draw the above amount on a payee's receipt duly countersigned by the Under Secretary to Government Infrastructure development Department, Bangalore.

4. This order issues in accordance with the financial powers delegated to Principal Secretaries/Secretaries to Government vide G.O. No. FD 1 TFP 2008, dated 16-05-2008 and Finance Department Notification No.: FD 1122/Exp-12/11, dated: 27-12-2011.

By Order and in the name of the Governor of Karnataka

S. J. Sampath Kumar

Under Secretary to Government

P.R. 1708 Infrastructure Development Department

INFRASTRUCTURE DEVELOPMENT SECRETARIAT

Sub: Servicing of HUDCO Loan availed for procurement of land for Bangalore International Airport Project Release of funds reg.-

Read:

1. G.O. No. IDD 47 DIA 2006, dated 29-06-2007
2. G.O. No. IDD 47 DIA 2006 (P) dated 24-09-2007
3. G.O. No. IDD 47 DIA 2006 (P) dated 25-09-2007
4. G.O. No. IDD 47 DIA 2006 (P) dated 03-12-2007
5. G.O. No. IDD 47 DIA 2006, dated 25-03-2008
6. G.O. No. IDD 47 DIA 2006, dated 23-06-2008
7. G.O. No. IDD 47 DIA 2007, dated 16-09-2008
8. G.O. No. IDD 47 DIA 2007, dated 15-12-2008
9. G.O. No. IDD 47 DIA 2006, dated 13-03-2009
10. G.O. No. IDD 47 DIA 2006, dated 12-08-2009
11. G.O. No. IDD 47 DIA 2006, dated 26-09-2009
12. G.O. No. IDD 47 DIA 2006, dated 17-12-2006
13. G.O. No. IDD 33 DIA 2010, dated 23-03-2010
14. G.O. No. IDD 33 DIA 2010, dated 22-06-2010
15. G.O. No. IDD 33 DIA 2010, dated 23-09-2010
16. G.O. No. IDD 33 DIA 2010, dated 21-12-2010
17. G.O. No. IDD 33 DIA 2010, dated 04-03-2011
18. G.O. No. IDD 33 DIA 2010, dated 21-06-2011
19. G.O. No. IDD 33 DIA 2010, dated 26-09-2011
20. G.O. No. IDD 33 DIA 2010, dated 21-12-2011
21. G.O. No. IDD 33 DIA 2010, dated 20-03-2012
22. Letter No. DGM (IPD-1)/35/2012-13, dated 16-05-2012. Of the deputy General Manager (IPD-I), KSIIDC, Bangalore.

Preamble:

In G.O's read at SL. No. (1) to (21) above, periodical release of funds have been made to Karnataka State Industrial and Infrastructure Development Corporation, Bangalore for servicing HUDCO loan for the period 2007-08 to 2011-12.

2. In letter dated 16-05-2012 read at Sl. No. (22) above, the Deputy General Manager (IPD-I), KSIIDC, Bangalore has requested for release of an amount of Rs. 355.89 lakhs (Principal Rs. 272.58 lakhs+Interest Rs. 78.54 lakhs+service charges of Rs. 4.77 lakhs) only towards servicing of HUDCO loan for the quarter ending June 2012.

3. The proposal of KSIIDC has been examined in detail and hence this Order

Government Order No. IDD 33 DIA 2010, Bangalore, dated 18-06-2012

After careful examination of the proposal, sanction is accorded for release of Rs. 3,51,12,000-00 (Rupees Three crores Fifty one lakh Twelve thousand only i.e., Principal Rs. 2,72,58,000-00 + Interest Rs. 78,54,000-00 lakhs) to KSIIDC, Bangalore towards the instalment for HUDCO loan servicing for the quarter ending June 2012.

2) This expenditure shall be met under the Head of Account **"5465-01-190-1-04 (P)-BIAP Assistance for repayment of HUDCO loan-240 Debt Servicing"** out of the Budget Provision of Rs. 1372.17 lakhs in 2012-13.

3) The Managing Director, KSIIDC, Bangalore is authorized to draw the amount on a payees receipt duly countersigned by the Under Secretary to Government, Infrastructure Development Department **and to pay it to the HUDCO within the due date.**

4) This order is issued with the concurrence of Finance Department vide Note No. 3699/L dated 30-05-2012, 3727/F dated 01-06-2012 and in accordance with the delegation of powers given to the Principal Secretaries/Secretaries to Government vide G.O. No. IDD 04 TFP 2012, dated 27-04-2012.

By Order and in the name of the Governor of Karnataka

S. J. Sampath Kumar

Under Secretary to Government

Infrastructure Development Department

P.R. 1709

ವಸತಿ ಸಚಿವಾಲಯ

ವಿಷಯ : ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಜೆಎನ್‌ಎನ್‌ಯುಆರ್‌ಎಂ–ಬಿಎಸ್‌ಯುಪಿ ಯೋಜನೆಯಡಿ ಪ್ರಾರಂಭಿಸದೇ ಇರುವ 4742 ಮನೆಗಳಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :

1. ಆಯುಕ್ತರು, ಕಕೊಅ ಮಂಡಳಿರವರ ಪತ್ರ ಸಂಖ್ಯೆ : ಕಕೊಅಮಂ/ಆಯುಕ್ತರು/ತಾಂನಿ–1/ನರ್ಮ/ಹೆಚ್ಚುವರಿ/2011–12/108 ದಿನಾಂಕ : 09–04–2012 ಮತ್ತು 10–02–2012.
2. ಆರ್ಥಿಕ ಇಲಾಖೆಯ ಟಿಪ್ಪಣಿ ಸಂ. ಎಫ್‌ಡಿ 257 ವೆಚ್ಚ–9, 2012, ದಿನಾಂಕ : 04–06–2012.
3. ಸರ್ಕಾರದ ಆದೇಶ ಸಂಖ್ಯೆ : ವಇ/15/ಕೊಮಂಲೆ/2012, ದಿನಾಂಕ : 11–06–2012.
4. ಸರ್ಕಾರದ ಆದೇಶ ಸಂಖ್ಯೆ : ನಅಇ/131/ಸಿಎಸ್‌ಎಸ್/2012, ದಿನಾಂಕ : 11–06–2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ–1 ರಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿರವರ ಕೇಂದ್ರ ಪುರಸ್ಕೃತ ಜೆಎನ್‌ಎನ್‌ಯುಆರ್‌ಎಂ–ಬಿಎಸ್‌ಯುಪಿ ಯೋಜನೆಯಡಿ ಬೆಂಗಳೂರು ಮತ್ತು ಮೈಸೂರು ನಗರಗಳ 112 ಕೊಳಚೆ ಪ್ರದೇಶಗಳಲ್ಲಿ 20042 ಮನೆಗಳನ್ನು ಮೂಲಭೂತ ಸೌಕರ್ಯಗಳೊಂದಿಗೆ ನಿರ್ಮಿಸುವ ಕಾಮಗಾರಿಗೆ ಕೇಂದ್ರ ಸರ್ಕಾರದ ಅನುಮೋದನೆ ದೊರೆತಿದ್ದು, ಯೋಜನಾ ಮೊತ್ತ ರೂ. 44,966.00 ಲಕ್ಷಗಳಾಗಿರುತ್ತದೆ. 2006–07 ಮತ್ತು 2007–08 ರಲ್ಲಿ ತಯಾರಿಸಿದ ಮೂಲ ಯೋಜನಾ ವರದಿಯಲ್ಲಿನ ಬಹುತೇಕ ಕೊಳಚೆ ಪ್ರದೇಶಗಳಲ್ಲಿ ವಿವಿಧ ತಾಂತ್ರಿಕ ಕಾರಣಗಳಿಂದ ಸ್ಥಳ ಸಮಸ್ಯಗಳಿದ್ದುದ್ದರಿಂದ ಸ್ಥಳ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸ್ಥಳ ಸಮಸ್ಯೆ ಇರುವ ಕೊಳಚೆ ಪ್ರದೇಶಗಳನ್ನು ಕೈಬಿಟ್ಟು ಬೇರೆ ಕೊಳಚೆ ಪ್ರದೇಶಗಳಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪ್ರಸ್ತಾವನೆಯನ್ನು ತಯಾರಿಸಿ ಸದರಿ ಸ್ಥಳ ಬದಲಾವಣೆ ಪ್ರಸ್ತಾವನೆಗೆ ದಿನಾಂಕ : 08–12–2010 ರಂದು ನಡೆದ 17ನೇ ಎಸ್‌ಎಲ್‌ಇಸಿ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಕಾಮಗಾರಿಗಳನ್ನು ಪ್ರಾರಂಭಿಸಲಾಗಿರುತ್ತದೆ. ದಿನಾಂಕ : 11–01–2012 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ 21ನೇ ಎಸ್‌ಎಲ್‌ಇಸಿ ಸಭೆಯಲ್ಲಿ ಪ್ರಾರಂಭಿಸದೇ ಉಳಿದಿರುವ ಮನೆಗಳನ್ನು ನಿರ್ಮಾಣ ಮಾಡಲು ಬೇಕಾದ ಹೆಚ್ಚುವರಿ ಅನುದಾನವನ್ನು ವಸತಿ ಇಲಾಖೆ ಹಾಗೂ ಕರ್ನಾಟಕ ಕೊಳಗೇರಿ ನಗರದಲ್ಲಿ 4410 ಮನೆಗಳನ್ನು ಮತ್ತು ಮೈಸೂರು ನಗರದಲ್ಲಿ 332 ಮನೆಗಳು ಒಟ್ಟು 4742 ಮನೆಗಳ ಕಟ್ಟಡ ಕಾರ್ಯವನ್ನು ಇನ್ನು ಪ್ರಾರಂಭಿಸದೇ ಇರುವುದಾಗಿ ತಿಳಿಸುತ್ತಾ, ಸದರಿ ಮನೆಗಳನ್ನು ನಿರ್ಮಿಸಲು ಈಗಾಗಲೇ ಅನುಮೋದನೆ ನೀಡಿರುವ ಮೊತ್ತಕ್ಕಿಂತ ಹೆಚ್ಚುವರಿಯಾಗಿ ರೂ. 3608.52 ಲಕ್ಷಗಳು ಅವಶ್ಯಕತೆ ಇದೆಯೆಂದು ತಿಳಿಸಲಾಗಿದೆ.

ಬೆಂಗಳೂರು ನಗರದಲ್ಲಿ ಇನ್ನೂ ಪ್ರಾರಂಭವಾಗದೇ ಇರುವ 4410 ಮನೆಗಳು ಹಾಗೂ ಮೈಸೂರಿನಲ್ಲಿ ಇನ್ನೂ ಪ್ರಾರಂಭಿಸದೇ ಇರುವ 332 ಮನೆಗಳು ಒಟ್ಟು 4742 ಮನೆಗಳನ್ನು ಮೂಲಭೂತ ಸೌಲಭ್ಯಗಳೊಂದಿಗೆ ಗುತ್ತಿಗೆ ಕರಾರಿನಂತೆ ಹೆಚ್ಚುವರಿ ಅನುದಾನ ನೀಡಿ ಮೂಲ ಗುತ್ತಿಗೆದಾರರ ಮುಖಾಂತರ ಮುಂದುವರೆಸಲು ಸರ್ಕಾರ ತೀರ್ಮಾನಿಸಿದೆ.

ಜೆಎನ್‌ಎನ್‌ಯುಆರ್‌ಎಂ-ಬಿಎಸ್‌ಯುಪಿ ಯೋಜನೆಯು ಬಡವರ ಪರವಾದ ಕಾರ್ಯಕ್ರಮವಾಗಿದ್ದು, ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಬಿಎಸ್‌ಯುಪಿ ಯೋಜನೆಯಡಿಯಲ್ಲಿ ನಿರ್ಮಾಣ ಮಾಡುವ ಮನೆಗಳು ಉತ್ತಮ ಗುಣಮಟ್ಟ ಹೊಂದಿದ್ದು, ಆದಷ್ಟು ಕೊಳಗೇರಿಯನ್ನು ನಿರ್ಮೂಲನೆ ಮಾಡುವ ದೃಷ್ಟಿಯಿಂದ ಈ ಕಾಮಗಾರಿಯನ್ನು ಈ ಕೆಳಕಂಡ ಅಂಶಗಳನ್ವಯ ಮೂಲಭೂತ ಸೌಲಭ್ಯದೊಂದಿಗೆ ಮುಂದುವರೆಸಬೇಕಾಗಿರುತ್ತದೆ.

ಅ) ಇನ್ನೂ ಪ್ರಾರಂಭಿಸದೇ ಇರುವ 4742 ಮನೆಗಳನ್ನು ಮೂಲಭೂತ ಸೌಲಭ್ಯಗಳೊಂದಿಗೆ ಗುತ್ತಿಗೆ ಕರಾರಿನಂತೆ, ಹೆಚ್ಚುವರಿ ಮೊತ್ತ ರೂ. 41.29 ಕೋಟಿಗಳನ್ನು ನೀಡಿ ಮೂಲ ಗುತ್ತಿಗೆದಾರರ ಮುಖಾಂತರ ಮುಂದುವರೆಸಲು ;

ಆ) ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ವಸತಿ ಇಲಾಖೆಯಿಂದ ರೂ. 18.04 ಕೋಟಿಗಳನ್ನು ನಗರಾಭಿವೃದ್ಧಿ ಇಲಾಖೆಯಿಂದ ರೂ. 18.04 ಕೋಟಿಗಳನ್ನು ಒಟ್ಟು ರೂ. 36.08 ಕೋಟಿ ವೆಚ್ಚ ಮಾಡಿ ಹಾಗೂ ಹಂತ-2 & 3ರ ಯೋಜನೆಗಳಲ್ಲಿ ಉಳಿತಾಯವಾಗಿರುವ ರೂ. 5.21 ಕೋಟಿಗಳನ್ನು ಉಪಯೋಗಿಸಿಕೊಂಡು ಪ್ರಾರಂಭಿಸದೇ ಉಳಿದಿರುವ 4742 ಮನೆಗಳನ್ನು ಮೂಲಭೂತ ಸೌಲಭ್ಯಗಳೊಂದಿಗೆ ಪೂರ್ಣಗೊಳಿಸಲು.

ಹಾಗೂ ಈ ಬಗ್ಗೆ ದಿನಾಂಕ : 11-01-2012ರಂದು ನಡೆದ 21ನೇ ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಹೆಚ್ಚುವರಿ ಅನುದಾನದ ಮೊತ್ತ ರೂ. 3608.52 ಲಕ್ಷಗಳನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಹಾಗೂ ವಸತಿ ಇಲಾಖೆಯು ಭರಿಸಲು ತೀರ್ಮಾನಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ರೂ. 36.8 ಲಕ್ಷಗಳನ್ನು 2012-13ನೇ ಸಾಲಿನ ಆಯವ್ಯಯದಲ್ಲಿ ಬಿಡುಗಡೆ ಮಾಡುವ ಬಗ್ಗೆ ತಿಳಿಸಿರುವಂತೆ ಕ್ರಮ ಸಂಖ್ಯೆ (3) ಮತ್ತು (4) ರಲ್ಲಿ ವಸತಿ ಇಲಾಖೆಯ ಶೇ. 50% ರಷ್ಟು ಅಂದರೆ ರೂ. 18.04 ಕೋಟಿಗಳನ್ನು ಲೆಕ್ಕಶೀರ್ಷಿಕೆ 2217-04-191-2-02- ಕೊಳಚೆಗಳ ಸುಧಾರಣೆ (ಯೋಜನೆ) ಅಡಿಯಲ್ಲಿ ಹಾಗೂ ನಗರಾಭಿವೃದ್ಧಿ ಇಲಾಖೆಯ ಪಾಲಿನ ಶೇ. 50% ರಷ್ಟು ಅಂದರೆ ರೂ. 18.04 ಕೋಟಿಗಳನ್ನು ಲೆಕ್ಕ ಶೀರ್ಷಿಕೆ 3604-00-191-1-51 (059) ರಡಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಜೆಎನ್‌ಎನ್‌ಯುಆರ್‌ಎಂ-ಬಿಎಸ್‌ಯುಪಿ ಯೋಜನೆಯಡಿ ಪ್ರಾರಂಭಿಸದೇ ಇರುವ 4742 ಮನೆಗಳಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ 15 ಕೊಮಂಲೆ 2012 ಬೆಂಗಳೂರು, ದಿನಾಂಕ: 19ನೇ ಜೂನ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಇನ್ನೂ ಪ್ರಾರಂಭಿಸದೇ ಇರುವ 4742 ಮನೆಗಳನ್ನು ಮೂಲಭೂತ ಸೌಲಭ್ಯಗಳೊಂದಿಗೆ ಗುತ್ತಿಗೆ ಕರಾರಿನಂತೆ, ಹೆಚ್ಚುವರಿ ಮೊತ್ತ ರೂ. 41.29 ಕೋಟಿಗಳನ್ನು ನೀಡಿ ಮೂಲ ಗುತ್ತಿಗೆದಾರರ ಮುಖಾಂತರ ಮುಂದುವರೆಸಲು ಹಾಗೂ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ವಸತಿ ಇಲಾಖೆಯಿಂದ ರೂ. 18.04 ಕೋಟಿಗಳನ್ನು ನಗರಾಭಿವೃದ್ಧಿ ಇಲಾಖೆಯಿಂದ ರೂ. 18.04 ಕೋಟಿಗಳನ್ನು ಒಟ್ಟು ರೂ. 36.08 ಕೋಟಿ ವೆಚ್ಚ ಮಾಡಿ ಹಾಗೂ ಹಂತ-2 & 3ರ ಯೋಜನೆಗಳಲ್ಲಿ ಉಳಿತಾಯವಾಗಿರುವ ರೂ. 5.21 ಕೋಟಿಗಳನ್ನು ಉಪಯೋಗಿಸಿಕೊಂಡು ಪ್ರಾರಂಭಿಸದೇ ಉಳಿದಿರುವ 4742 ಮನೆಗಳನ್ನು ಮೂಲಭೂತ ಸೌಲಭ್ಯಗಳೊಂದಿಗೆ ಪೂರ್ಣಗೊಳಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಎಫ್‌ಡಿ 257 ವೆಚ್ಚ-9 2012, ದಿನಾಂಕ : 04-06-2012ರ ಸಹಮತಿಯೊಂದಿಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ನಾಗಣ್ಣ

ಪಿ.ಆರ್. 1711 ಪೀಠಾಧಿಕಾರಿ-4, ವಸತಿ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಶ್ರೀ ಬಿ. ರಂಗಸ್ವಾಮಿ, ವಿಚಾರಣಾಧಿಕಾರಿಗಳು, ಹಾಗೂ ಜಿಲ್ಲಾ ಸೆಷನ್ಸ್ (ನಿವೃತ್ತ), ಇವರಿಗೆ ವಿಚಾರಣಾ ವರದಿ ಸಲ್ಲಿಸಿರುವುದಕ್ಕಾಗಿ ಗೌರವ ಧನ ಮತ್ತು ವಾಹನ ಭತ್ಯೆ ಮಂಜೂರಾತಿ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 142 ಎಸ್‌ಇಎನ್ 2005, ಬೆಂಗಳೂರು, ದಿನಾಂಕ : 11-06-2007.
2. ವಿಚಾರಣಾಧಿಕಾರಿಗಳ ವಿಚಾರಣಾ ವರದಿ ದಿನಾಂಕ : 22-12-2011.

ಪ್ರಸ್ತಾವನೆ :

ಶ್ರೀ ಬಿ.ಸಿ. ಮುಧೋಳ್, ನಿವೃತ್ತ ಮುಖ್ಯ ಇಂಜಿನಿಯರ್ ಇವರು ದಿನಾಂಕ : 01-02-2003 ರಿಂದ 21-12-2003 ರವರೆಗೆ ಮುಖ್ಯ ಇಂಜಿನಿಯರ್ ಆಗಿ ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಹಳೇ ಬಾಗಲಕೋಟೆ ಪಟ್ಟಣಕ್ಕೆ ವ್ಯಾಪಕವಾಗಿ ಒಳ ಚರಂಡಿ ವ್ಯವಸ್ಥೆ ಒದಗಿಸುವ ಕಾಮಗಾರಿಗೆ ಸಂಬಂಧಿಸಿದಂತೆ, ಅಂದಾಜು ಪತ್ರಿಕೆಗೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದುಕೊಳ್ಳದೆ ಮಂಜೂರಾತಿ ನೀಡಿ, ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಂಡು ಕರ್ನಾಟಕ ಲೋಕೋಪಯೋಗಿ ಇಲಾಖೆ ಕೋಡ್ ಸಂಪುಟ (1) ಕಂಡಿಕೆ 104 ಹಾಗೂ ಕೆ.ಎಫ್.ಸಿ. ನಿಯಮ 178ರ ಉಲ್ಲಂಘನೆ ಮಾಡಿರುವುದು, ದೃಢೀಕೃತ ಟೆಂಡರ್ ಷೆಡ್ಯೂಲ್ "ಬಿ" ಬಗ್ಗೆ ಕರ್ನಾಟಕ ಲೋಕೋಪಯೋಗಿ ಇಲಾಖೆ ಕೋಡ್ ಸಂಪುಟ 1ರ ಪ್ಯಾರಾ 181ರ ಪ್ರಕಾರ ಪ್ರತಿ ಪುಟಕ್ಕೆ ಸಹಿ ಮಾಡದೇ ಕರ್ತವ್ಯ ಲೋಪ ಎಸಗಿರುವುದು, ಷೆಡ್ಯೂಲ್ ಬಿ ದಲ್ಲಿನ ಎಲ್ಲಾ ಐಟಂಗಳ ಮೊತ್ತಗಳನ್ನು ದೃಢೀಕರಿಸದೇ ಬದಲಾವಣೆಗೊಂಡ ಪ್ರಮಾಣೀಕೃತ ಟೆಂಡರ್ ಪುಸ್ತಕಗಳಿಗೆ ಸಹಿ ಮಾಡಿ ಕರ್ನಾಟಕ ಲೋಕೋಪಯೋಗಿ ಇಲಾಖೆ,

ಕೋಡ್ ಸಂಪುಟ 1ರ ಕಂಡಿಕೆ 181ರ ನಿಯಮಗಳ ಉಲ್ಲಂಘನೆ ಮಾಡಿರುವುದು, ಮೊದಲನೇ ಬಿಲ್ ಪಾವತಿಗಾಗಿ ಮೇಲು ರುಜುವಿಗೆ ಬಂದಾಗ ಷೆಡ್ಯೂಲ್ "ಬಿ" ದರಗಳಂತೆ ಹೋಲಿಸಿ ಪರಿಶೀಲಿಸದೇ ಸಂದಾಯ ಮಾಡಿದ ಕರ್ತವ್ಯ ಲೋಪ ಎಸಗಿರುವುದು, ಈ ರೀತಿ ದರ ಬದಲಾವಣೆಯಿಂದ ಸರ್ಕಾರಕ್ಕೆ ರೂ. 59,85,060/-ಗಳ ತಾತ್ಕಾಲಿಕ ಹಾನಿ ಉಂಟು ಮಾಡಿ ಕರ್ನಾಟಕ ಆರ್ಥಿಕ ಸಂಹಿತೆಯ ನಿಯಮ 349, 350ರ ಉಲ್ಲಂಘನೆ ಮಾಡಿರುವ ಆರೋಪಗಳಿಗಾಗಿ ಸತ್ಯಾಸತ್ಯತೆಯನ್ನು ತಿಳಿಯುವ ದೃಷ್ಟಿಯಿಂದ ಮೇಲೆ ಓದಲಾದ (1)ರ ದಿನಾಂಕ : 11-06-2007 ರಂದು ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಬಿ. ರಂಗಸ್ವಾಮಿ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಮೇಲೆ ಓದಲಾದ (2)ರ ದಿನಾಂಕ : 22-12-2011 ರಲ್ಲಿ ವಿಚಾರಣಾಧಿಕಾರಿಗಳು ವರದಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿ ವಿಚಾರಣಾಧಿಕಾರಿಯವರಿಗೆ ನಿಯಮಗಳ ಪ್ರಕಾರ ಗೌರವ ಧನ ಮತ್ತು ವಾಹನ ಭತ್ಯೆಯನ್ನು ಮಂಜೂರು ಮಾಡಲು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 142 ಎಸ್‌ಇಎನ್ 2005, ಬೆಂಗಳೂರು, ದಿನಾಂಕ: 15ನೇ ಜೂನ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಬಿ. ರಂಗಸ್ವಾಮಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ವಿಚಾರಣಾ ವರದಿ ಸಲ್ಲಿಸಿರುವ ಕಾರಣ ಇವರಿಗೆ ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 16 ಸೇಇವಿ 2005, ದಿನಾಂಕ : 23-08-2005ರ ಅನ್ವಯ ರೂ. 6000/- ಗೌರವ ಧನ ಮತ್ತು ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 03 ಸೇಇವಿ 96, ದಿನಾಂಕ : 24-04-1998 ರನ್ವಯ ರೂ. 1000/- ವಾಹನ ಭತ್ಯೆಯನ್ನು ಮಂಜೂರು ಮಾಡಲಾಗಿದೆ.

ಈ ವೆಚ್ಚವನ್ನು ಆಯವ್ಯಯದ ಲೆಕ್ಕ ಶೀರ್ಷಿಕೆ "2052/ಸಚಿವಾಲಯ, ಸಾಮಾನ್ಯ ಸೇವೆಗಳು-090, ಸಚಿವಾಲಯ-01, ಕರ್ನಾಟಕ ಸರ್ಕಾರದ ಸಚಿವಾಲಯ-051, ಸಾಮಾನ್ಯ ವೆಚ್ಚಗಳು" ಇದರ ಅಡಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ. ಲಕ್ಷ್ಮೀನಾರಾಯಣ ರಾವ್

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1712 ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಹಾವೇರಿ ಜಿಲ್ಲೆಯ ಹಾನಗಲ್ಲ ಕಂದಾಯ ತಾಲ್ಲೂಕಿನ ಒಂದು ಹೆಚ್ಚುವರಿ ನೋಟರಿ ಹುದ್ದೆ ಸೃಜಿಸುವ ಬಗ್ಗೆ.

ಓದಲಾಗಿದೆ : 1. ಮಾನ್ಯ ಲೋಕೋಪಯೋಗಿ ಸಚಿವರ ಪತ್ರ ದಿನಾಂಕ: 25.11.2010

2. ಸರ್ಕಾರದ ಪತ್ರ ಸಂಖ್ಯೆ: ಲಾ 244 ಎಲ್‌ಸಿಎಲ್ 2010, ದಿನಾಂಕ: 28.8.2010, 30.8.2011, 14.10.2011 ಮತ್ತು 14.03.2012.
3. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾವೇರಿ ಜಿಲ್ಲೆ ಇವರ ಪತ್ರ ಸಂಖ್ಯೆ: 754/2012, ದಿನಾಂಕ: 12.03.2012.
4. ಮಾನ್ಯ ಕಾನೂನು ಸಚಿವರ ಆಪ್ತ ಕಾರ್ಯದರ್ಶಿಯವರ ಟಿಪ್ಪಣಿ ಪತ್ರ ದಿನಾಂಕ: 22.03.2012 ರೊಂದಿಗೆ, ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ ಇವರ ಪತ್ರ ಸಂಖ್ಯೆ: ಕಾನೂನು/ವಹಿ/349/2011-12, ದಿನಾಂಕ: 20.03.2012.

ಪ್ರಸ್ತಾವನೆ :

ಮಾನ್ಯ ಲೋಕೋಪಯೋಗಿ ಸಚಿವರು ಮೇಲೆ (1)ರಲ್ಲಿ ಓದಲಾದ ದಿನಾಂಕ: 25.11.2010ರ ಪತ್ರದಲ್ಲಿ ಹಾವೇರಿ ಜಿಲ್ಲೆಯ ಹಾನಗಲ್ಲ ಕಂದಾಯ ತಾಲ್ಲೂಕಿಗೆ ಓರ್ವ ಹೆಚ್ಚುವರಿ ನೋಟರಿ ನೇಮಕ ಮಾಡುವಂತೆ ಕೋರಿ ಮಾನ್ಯ ಕಾನೂನು ಸಚಿವರಿಗೆ ಪತ್ರ ಬರೆದಿದ್ದು, ಆ ಬಗ್ಗೆ ಹಾಲಿ ಇರುವ ನೋಟರಿಗಳಿಗೆ ಕೆಲಸದ ಒತ್ತಡ ಇರುವ ಬಗ್ಗೆ ಪರಿಶೀಲಿಸಿ, ವರದಿ ಸಲ್ಲಿಸಲು ಮೇಲೆ (2) ರಲ್ಲಿ ಓದಲಾದ ಪತ್ರಗಳಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾವೇರಿ ಹಾಗೂ ಜಿಲ್ಲಾಧಿಕಾರಿ, ಹಾವೇರಿ ಇವರುಗಳನ್ನು ಕೋರಲಾಗಿತ್ತು.

ಮೇಲೆ (3) ಹಾಗೂ (4) ರಲ್ಲಿ ಓದಲಾದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾವೇರಿ ಹಾಗೂ ಜಿಲ್ಲಾಧಿಕಾರಿಗಳು, ಹಾವೇರಿ ಇವರು ಹಾವೇರಿ ಜಿಲ್ಲೆಯ ಹಾನಗಲ್ಲ ತಾಲ್ಲೂಕಿಗೆ ರಾಜ್ಯ ಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ ನೇಮಕಗೊಂಡಿರುವ ನೋಟರಿಗಳ ಕೆಲಸದ ಒತ್ತಡವನ್ನು ಪರಿಶೀಲಿಸಲಾಗಿದ್ದು, ಪ್ರಸ್ತುತ ಹಾನಗಲ್ಲ ಕಂದಾಯ ತಾಲ್ಲೂಕಿನಲ್ಲಿ ಎರಡು ನ್ಯಾಯಾಲಯಗಳು ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಹಾಲಿ ಇರುವ ನೋಟರಿಗಳಿಗೆ ಕೆಲಸದ ಒತ್ತಡವಿರುತ್ತದೆ ಮತ್ತು ಹಾನಗಲ್ಲ ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವ ಅವಶ್ಯಕತೆ ಇದೆ ಎಂಬ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಿರುತ್ತಾರೆ.

ಮೇಲಿನ ವರದಿಗಳನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಲಾ 244 ಎಲ್‌ಸಿಎಲ್ 2010 ಬೆಂಗಳೂರು, ದಿನಾಂಕ: 18-06-2012

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಹಾವೇರಿ ಜಿಲ್ಲೆಯ ಹಾನಗಲ್ ಕಂದಾಯ ತಾಲ್ಲೂಕಿಗೆ ಸಾರ್ವಜನಿಕರ ಹಿತದೃಷ್ಟಿಯಿಂದ ಹೆಚ್ಚುವರಿಯಾಗಿ ಒಂದು ನೋಟರಿ ಹುದ್ದೆಯನ್ನು ಸೃಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1713 **ಟಿ.ಕೆ. ಲಕ್ಷ್ಮೀನರಸಯ್ಯ**

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2) (ಪ್ರ)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಸಮಾಜ ಕಲ್ಯಾಣ ಸಚಿವಾಲಯ

ವಿಷಯ : ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪ್ರತ್ಯೇಕ ಸಚಿವಾಲಯ ಪ್ರಾರಂಭಿಸುವ ಬಗ್ಗೆ.

1) 2012–13ನೇ ಸಾಲಿನ ಆಯವ್ಯಯದ ಚರ್ಚೆಯ ಅವಧಿಯಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪ್ರತ್ಯೇಕ ಸಚಿವಾಲಯ ತೆರೆಯಲಾಗುವುದೆಂದು ಮಾನ್ಯ ಮುಖ್ಯಮಂತ್ರಿಗಳು ಘೋಷಿಸುತ್ತಾರೆ.

2) ಇದರ ಬಗ್ಗೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ತಮ್ಮ ವಿಶೇಷ ವರದಿ –15/2010ರಲ್ಲಿ "ರಾಜ್ಯದ ಶೇಕಡ 55 ರಷ್ಟು ಜನಸಂಖ್ಯೆಯನ್ನು ಹೊಂದಿದ (ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಅಲ್ಪಸಂಖ್ಯಾತರನ್ನು ಹೊರತುಪಡಿಸಿ) ಹಿಂದುಳಿದ ವರ್ಗಗಳ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಸರ್ಕಾರದ ಹಂತದಲ್ಲಿ ಒಂದು "ಪ್ರತ್ಯೇಕ ಹಿಂದುಳಿದ ವರ್ಗಗಳ ಸಚಿವಾಲಯ"ವನ್ನು ತೆರೆಯುವಂತೆ ಮತ್ತು ಪ್ರತ್ಯೇಕ ಸಚಿವರನ್ನು ನೇಮಿಸುವಂತೆ" ಸರ್ಕಾರಕ್ಕೆ ಸಲಹೆ ನೀಡಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಸರ್ಕಾರ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಕಇ 28 ಬಿಸಿಎ 2012, ಬೆಂಗಳೂರು, ದಿನಾಂಕ: 19–06–2012.

1) ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಪ್ರತ್ಯೇಕ "ಸಚಿವಾಲಯ"ವನ್ನು ಸೃಜಿಸಲಾಗಿದೆ ಮತ್ತು ಅದನ್ನು "ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ" ಎಂದು ಕರೆಯಲಾಗುವುದು.

2) ಈ ಕೆಳಕಂಡ ಹುದ್ದೆಗಳನ್ನು ಹಿಂದುಳಿದ ವರ್ಗಗಳ ಸಚಿವಾಲಯಕ್ಕೆ ಮಂಜೂರು ಮಾಡಲಾಗಿದೆ.

ಹುದ್ದೆ	**ಮಂಜೂರಾದ ಹುದ್ದೆಗಳ ವಿವರ**	**ಷರಾ**
1) ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ	1	ಹೊಸದಾಗಿ ಸೃಜಿಸಲಾಗಿದೆ.
ಎ) ಆಪ್ತ ಕಾರ್ಯದರ್ಶಿ	1	– " –
ಬಿ) ಆಪ್ತ ಸಹಾಯಕರು (ಜಿ.ಪಿ.ಎ.)	1	– " –
ಸಿ) ಕಿರಿಯ ಸಹಾಯಕರು / ಸಹಾಯಕರು	1	– " –
ಡಿ) ಶೀಘ್ರ ಲಿಪಿಗಾರರು	2	– " –
ಇ) ದಲಾಯತ್ ಜಮೇದಾರ	2	– " –
ಎಫ್) ವಾಹನ ಚಾಲಕರು	1	– " –
ಒಟ್ಟು–ಎ	**9**	
2) ಉಪ ಕಾರ್ಯದರ್ಶಿ	1	
ಎ) ಕಿರಿಯ ಸಹಾಯಕರು	1	– " –
ಬಿ) ಶೀಘ್ರಲಿಪಿಗಾರರು	1	– " –
ಸಿ) ಗ್ರೂಫ್–ಡಿ	1	– " –
ಒಟ್ಟು –ಬಿ	4	
3) ಅಧೀನ ಕಾರ್ಯದರ್ಶಿ	2	– " –
ಎ) ಶೀಘ್ರಲಿಪಿಗಾರರು	2	– " –
ಬಿ) ಗ್ರೂಫ್–ಡಿ	2	– " –
ಒಟ್ಟು –ಸಿ	**6**	
4) ಶಾಖಾಧಿಕಾರಿ	3	2 ಹುದ್ದೆಗಳು ಸಮಾಜ ಕಲ್ಯಾಣ ಸಚಿವಾಲಯದಿಂದ ವರ್ಗಾವಣ, 1 ಹುದ್ದೆ ಹೊಸದಾಗಿ ಸೃಜಿಸಲಾಗಿದೆ.
ಎ) ಹಿರಿಯ ಸಹಾಯಕರು	2	1 ಹುದ್ದೆಗಳು ಸಮಾಜ ಕಲ್ಯಾಣ ಸಚಿವಾಲಯದಿಂದ ವರ್ಗಾವಣೆ, 1 ಹುದ್ದೆ ಹೊಸದಾಗಿ ಸೃಜಿಸಲಾಗಿದೆ.
ಬಿ) ಸಹಾಯಕರು	**4**	3 ಹುದ್ದೆಗಳು ಸಮಾಜ ಕಲ್ಯಾಣ ಸಚಿವಾಲಯದಿಂದ ವರ್ಗಾವಣೆ, 1 ಹುದ್ದೆ ಹೊಸದಾಗಿ ಸೃಜಿಸಲಾಗಿದೆ.
ಸಿ) ಕಿರಿಯ ಸಹಾಯಕರು	2	2 ಹುದ್ದೆಗಳನ್ನು ಸಮಾಜ ಕಲ್ಯಾಣ ಸಚಿವಾಲಯದಿಂದ ವರ್ಗಾವಣೆ
ಡಿ) ಗ್ರೂಫ್ –ಡಿ	3	2 ಹುದ್ದೆಗಳು ಸಮಾಜ ಕಲ್ಯಾಣ ಸಚಿವಾಲಯದಿಂದ ವರ್ಗಾವಣೆ, 1 ಹುದ್ದೆ ಹೊಸದಾಗಿ ಸೃಜಿಸಲಾಗಿದೆ.
ಒಟ್ಟು – ಡಿ	**14**	
ಒಟ್ಟು(ಎ+ಬಿ+ಸಿ+ಡಿ)	**33**	

3) ಸಮಾಜ ಕಲ್ಯಾಣ ಇಲಾಖೆಯಿಂದ ಮೇಲೆ ವಿವರಿಸಿದ ಹುದ್ದೆಗಳನ್ನು ಹಿಂದುಳಿದ ವರ್ಗಗಳ ಸಚಿವಾಲಯಕ್ಕೆ ವರ್ಗಾವಣೆ ಮಾಡುವುದು.

4) ಮೇಲೆ ವಿವರಿಸಿದಂತೆ ಹೊಸದಾಗಿ ಮಂಜೂರಾದ ಹುದ್ದೆಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣ ಇಲಾಖೆಯಿಂದ ಭರ್ತಿ ಮಾಡಲು ಕ್ರಮ ವಹಿಸುವುದು.

5) ಹಿಂದುಳಿದ ವರ್ಗಗಳ ಸಚಿವಾಲಯದ ಅಡಿಯಲ್ಲಿ ಈ ಕೆಳಕಂಡ ಇಲಾಖೆ / ನಿಗಮಗಳು ಕಾರ್ಯನಿರ್ವಹಿಸುತ್ತವೆ.
   - ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
   - ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ.
   - ಹಿಂದುಳಿದ ವರ್ಗಗಳ ಆಯೋಗ.
   - ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ.
   - ಕರ್ನಾಟಕ ಹಿಂದುಳಿದ ವರ್ಗಗಳ ಕಟ್ಟಡ ನಿರ್ಮಾಣ ಸಂಘ.

6) ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗೆ ಪ್ರತ್ಯೇಕ ಕೊಠಡಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಹಂಚಿಕೆ ಮಾಡುವುದು.

7) ಇತರೆ ಸಚಿವಾಲಯದ ಸಿಬ್ಬಂದಿಗಳಿಗೆ ಈಗಿರುವ ಸಮಾಜ ಕಲ್ಯಾಣ ಸಚಿವಾಲಯದ ಕೊಠಡಿಯಲ್ಲಿ ಅಂದರೆ ವಿಕಾಸಸೌಧ, ಕೊಠಡಿ ಸಂ. 229 ರಲ್ಲಿ ಒದಗಿಸುವುದು.

8) ಪ್ರತ್ಯೇಕ ಸಚಿವಾಲಯ ಸೃಜಿಸಿದ ಬಗ್ಗೆ ಕರ್ನಾಟಕ ಸರ್ಕಾರ (ವ್ಯವಹಾರ ಹಂಚಿಕೆ) ನಿಯಮಗಳು 1977ಕ್ಕೆ ಮತ್ತು ಇತರೆ ಸಂಬಂಧಿಸಿದ ಅಧಿನಿಯಮ ಮತ್ತು ನಿಯಮಗಳಿಗೆ ಸೂಕ್ತ ತಿದ್ದುಪಡಿಗಳನ್ನು ಮಾಡುವುದು.

9) ಈ ಆದೇಶವು ಸಚಿವ ಸಂಪುಟದ ಅನುಮೋದನೆ ಮೇರೆಗೆ ಹೊರಡಿಸಲಾಗಿದೆ ಮತ್ತು ತಕ್ಷಣವೇ ಜಾರಿಗೆ ಬರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ. ಎಂ. ಬಾಟೆ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1714 ಸಮಾಜ ಕಲ್ಯಾಣ ಇಲಾಖೆ.

ವಸತಿ ಸಚಿವಾಲಯ

ವಿಷಯ : ಯಲಹಂಕ ಉಪನಗರದಲ್ಲಿ ಕರ್ನಾಟಕ ಗೃಹ ಮಂಡಳಿಯ ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ.24 ರ 3.34 ಎಕರೆ ವಿಸ್ತೀರ್ಣದ ಜಾಗದಲ್ಲಿ ಕರ್ನಾಟಕ ಗೃಹ ಮಂಡಳಿಯು ಖಾಸಗಿ ಸಹಭಾಗಿತ್ವದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ ಕೈಗೊಳ್ಳಲು ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : ಆಯುಕ್ತರು ಕರ್ನಾಟಕ ಗೃಹ ಮಂಡಳಿಯ ರವರ ಪತ್ರ ಸಂಖ್ಯೆ ಕಗೃಮಂ/ ಮುಅ/ಯಲಹಂಕ/ವಾಣಿಜ್ಯಸಂಕೀರ್ಣ/ಖಾಸಗಿ ಸಹಭಾಗಿತ್ವ/ಬೆಂಗಳೂರು/2011-12/689/ 1883. ದಿನಾಂಕ: 11-08-2011, 03-11-2011 ಮತ್ತು 03/08-03-12.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರಗಳಲ್ಲಿ ಕರ್ನಾಟಕ ಗೃಹ ಮಂಡಳಿಯ ಆಯುಕ್ತರು, ಪ್ರಸ್ತಾವನೆ ಸಲ್ಲಿಸುತ್ತಾ, ಯಲಹಂಕ ಉಪನಗರದಲ್ಲಿರುವ ಕರ್ನಾಟಕ ಗೃಹ ಮಂಡಳಿ ಬಡಾವಣೆಯ ನಿವೇಶನ ಸಂಖ್ಯೆ.24ರಲ್ಲಿನ 3.34 ಎಕರೆ ವಿಸ್ತೀರ್ಣದ ಜಾಗದಲ್ಲಿ ವಾಣಿಜ್ಯ ಸಂಕೀರ್ಣವನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ ಯೋಜನೆಯಡಿಯಲ್ಲಿ ನಿರ್ಮಿಸಲು ಉದ್ದೇಶಿಲಾಗಿದ್ದು, ಈ ರೀತಿ ಯೋಜನೆಯನ್ನು ಕರ್ನಾಟಕ ಗೃಹ ಮಂಡಳಿಯು ಮೊದಲ ಬಾರಿಗೆ ಕೈಗೊಳ್ಳುತ್ತಿದ್ದು ಯೋಜನೆಯಿಂದ ಯಾವುದೇ ಆರ್ಥಿಕ ನಷ್ಟವಾಗಬಾರದೆಂಬ ಕಾರಣದಿಂದ, ಯೋಜನೆಯನ್ನು ಯಶಸಿಯಾಗಿ ನಿರ್ವಹಿಸಲು ಮೆ: ಅರ್ನೆಸ್ಟ್ ಅಂಡ್ ಯಂಗ್ ಇವರನ್ನು ತಾಂತ್ರಿಕ ಸಲಹೆಗಾರರನ್ನಾಗಿ ನೇಮಿಸಲು ದಿನಾಂಕ: 31-07-2010ರ 424ನೆ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗಿದೆ. ಸದರಿಯವರ ಸಲಹೆಯನ್ವಯ ಕ್ರಮ ಕೈಗೊಳ್ಳಲಾಗುತ್ತಿದ್ದು ಯಲಹಂಕ ಬಡಾವಣೆಯನ್ನು 20 ವರ್ಷಗಳ ಹಿಂದೆಯೇ ನಿರ್ಮಿಸುವುದರಿಂದ, ಅಲ್ಲಿ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಹಾಗೂ ಗರಿಷ್ಠ ಮಟ್ಟದಲ್ಲಿ ವಾಣಿಜ್ಯ ನಿವೇಶನವನ್ನು ಸದುಪಯೋಗಪಡಿಸಿಕೊಂಡು ಮಂಡಳಿಯು ನಿರಂತರ ಆವರ್ತ ಆದಾಯವನ್ನು ಗಳಿಸುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ.

ಆದ್ದರಿಂದ, ಯೋಜನೆಯನ್ನು ಕೈಗೊಳ್ಳಲು ಸದರಿ ಯೋಜನೆಯ ತಾಂತ್ರಿಕ ಸಲಹೆಗಾರರು ತಯಾರಿಸಿದ ಟೆಂಡರ್ ನಿಯಮಾವಳಿಗಳನ್ವಯ ಅನುಷ್ಠಾನಗೊಳಿಸಲು ಉದ್ದೇಶಿಸಿ ದಿನಾಂಕ:15-03-2011 ರಂದು ಟೆಂಡರ್ ಅಧಿಸೂಚನೆ ಪ್ರಕಟಿಸಲಾಗಿರುತ್ತದೆ. ಅದರನ್ವಯ, 10 ಗುತ್ತಿಗೆದಾರರು ಟೆಂಡರ್ ದಾಖಲೆಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಿದ್ದರು. ಆ ಪೈಕಿ, ಸದರಿ ಟೆಂಡರ್‌ಗಳನ್ನು ದಿನಾಂಕ: 19-07-2011ರ ಟೆಂಡರ್ ಪರಿಶೀಲನಾ ಸಮಿತಿ ಸಭೆಯಲ್ಲಿ ಪರಿಶೀಲಿಸಿ, ಮೆ: ಎನ್.ಸಿ.ಸಿ. ಅರ್ಬನ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್, ಇವರು ನಮೂದಿಸಿರುವ ಮೊತ್ತವು ನಿಗದಿಪಡಿಸಿರುವ ಮೊತ್ತಕ್ಕೆ ಅತಿ ಕಡಿಮೆ ಮೊತ್ತದ ಅಂತರವಿರುವುದಿಂದ, ಅವರಿಗೆ ಸದರಿ ವಾಣಿಜ್ಯ ಸಂಕೀರ್ಣವನ್ನು 30 ವರ್ಷಗಳವರೆಗೆ ಗುತ್ತಿಗೆ ಕರಾರಿನ ಆಧಾರದ ಮೇಲೆ ನೀಡಲು ಉದ್ದೇಶಿತ ಯೋಜನೆಗೆ ಹಾಗೂ ಟೆಂಡರ್ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಕರ್ನಾಟಕ ಗೃಹ ಮಂಡಳಿ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲು ನಿರ್ಣಯಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ. ವಇ 352 ಕಗೃಮಂ 2011, ಬೆಂಗಳೂರು, ದಿನಾಂಕ: 19-06-2012.

ಮೇಲಿನ ಪ್ರಸ್ತಾವನೆಗಳ ಹಿನ್ನೆಲೆಯಲ್ಲಿ, ಕರ್ನಾಟಕ ಗೃಹ ಮಂಡಳಿಯು ಯಲಹಂಕ ಉಪನಗರದಲ್ಲಿ, ಕರ್ನಾಟಕ ಗೃಹ ಮಂಡಳಿಯ ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ.24ರಲ್ಲಿನ 3.24 ಎಕರೆ ವಿಸ್ತೀರ್ಣದ ಜಾಗದಲ್ಲಿ ಬಹುಮಹಡಿ ವಾಣಿಜ್ಯ ಸಂಕೀರ್ಣವನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ ಯೋಜನೆಯಡಿ ಕೈಗೊಳ್ಳಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಸದರಿ ವಾಣಿಜ್ಯ ಸಂಕೀರ್ಣ ನಿರ್ಮಾಣ ಯೋಜನೆಯ ರೂಪುರೇಷೆಗಳನ್ನೊಳಗೊಂಡ ವಿವರವಾದ ಯೋಜನಾ ವರದಿಯನ್ನು ತಯಾರಿಸಿ, ಸರ್ಕಾರದ ಅನುಮೋದನೆ ಪಡೆಯುವಂತೆ ಕರ್ನಾಟಕ ಗೃಹ ಮಂಡಳಿಯ ಆಯುಕ್ತರಿಗೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1715

ಎನ್. ಪಾರ್ವತಿ

ಪೀಠಾಧಿಕಾರಿ-3, ವಸತಿ ಇಲಾಖೆ.

ಕಂದಾಯ ಸಚಿವಾಲಯ

ಸೇರ್ಪಡೆ

ಸಂಖ್ಯೆ: ಆರ್‌ಡಿ 20 ಎಡಿಇ 2012 ಬೆಂಗಳೂರು ದಿನಾಂಕ: 12-06-2012

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 20 ಎಡಿಇ 2008, ದಿನಾಂಕ: 26.05.2012ರ ಆದೇಶದಲ್ಲಿ ಈ ಕೆಳಕಂಡ ಕಂಡಿಕೆಯನ್ನು ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು.

" ಈ ಇಲಾಖಾ ವಿಚಾರಣೆ ಕೈ ಬಿಟ್ಟಿರುವುದಿಂದ ಶ್ರೀಮತಿ ಟಿ.ವಿಜಯ ಅವರ ಅಮಾನತ್ತಿನ ಅವಧಿ ದಿನಾಂಕ: 30-04-2008ರಿಂದ ದಿನಾಂಕ: 21-07-2008ರವರೆಗೆ ಕರ್ನಾಟಕ ನಾಗರೀಕ ಸೇವಾ ನಿಯಮ 100(1)(ಬಿ)ರನ್ವಯ ಕರ್ತವ್ಯದ ಅವಧಿ ಎಂದು ಪರಿಗಣಿಸಿದೆ ಹಾಗೂ ಈ ಪ್ರಕರಣದ ಮಟ್ಟಿಗೆ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ ಅವರು ನಿಯಮಾನುಸಾರ ಲಭ್ಯವಾಗಬಹುದಾದ ಎಲ್ಲ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ವಿ. ರಾಮಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1716

ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಆರ್‌ಡಿ 419 ಎಎಸ್‌ಡಿ 2010 ಬೆಂಗಳೂರು ದಿನಾಂಕ: 16-06-2012

ಸರ್ಕಾರದ ಆದೇಶ ಸಂಖ್ಯೆ: "ಕಂಇ 419 ಎಎಸ್‌ಡಿ 2010, ದಿನಾಂಕ: 25.05.2011" ಎಂಬುದರ ಬದಲಾಗಿ ಸರ್ಕಾರದ ಆದೇಶ ಸಂಖ್ಯೆ:ಕಂಇ 419 ಎಎಸ್‌ಡಿ 2010, ದಿನಾಂಕ: 25-05-2012 ಎಂದು ತಿದ್ದಿ ಓದಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ವಿ. ರಾಮಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1717

ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಂ. ರಾಚಪ್ಪ, ತಹಶೀಲ್ದಾರ್ ಗ್ರೇಡ್-1, ಶಹಾಪುರ ತಾಲ್ಲೂಕು ಮತ್ತು ಶ್ರೀ ಆರ್. ಲೋಕನಾಥ್, ತಹಶೀಲ್ದಾರ್ ಗ್ರೇಡ್-1, ಹುಣಸೂರು ಇವರುಗಳಿಗೆ ಪೂರ್ವಾನ್ವಯವಾಗಿ ಬಡ್ತಿ ನೀಡಿದ್ದು, ಇವರುಗಳ ಹೆಸರುಗಳನ್ನು ತಹಶೀಲ್ದಾರ್ ಗ್ರೇಡ್-1 ವೃಂದದ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆ ಮಾಡಿ ಜೇಷ್ಠತೆಯನ್ನು ನಿಗಧಿಪಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 79 ಎಎಸ್‌ಡಿ 2012, ದಿನಾಂಕ : 25-06-2012.
2. ಶ್ರೀ ಆರ್. ಲೋಕನಾಥ್, ತಹಶೀಲ್ದಾರ್ ಗ್ರೇಡ್-1, ಹುಣಸೂರು ಅವರ ಮನವಿ ದಿನಾಂಕ : 26-06-2012.
3. ಗುಲ್ಬರ್ಗಾ ವಿಭಾಗ ಪ್ರಾದೇಶಿಕ ಆಯುಕ್ತರ ಪತ್ರ ಸಂಖ್ಯೆ : ಕಂಇ/ಪ್ರಾಆಗು/ಇಎಸ್‌ಎ/28/2012-13/2087, ದಿನಾಂಕ : 23-05-2012.
4. ಸರ್ಕಾರಿ ಅಧಿಸೂಚನೆ ಸಂಖ್ಯೆ : ಕಂಇ 296 ಎಎಸ್‌ಡಿ 2011, ದಿನಾಂಕ : 22-07-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ. (1)ರ ಆದೇಶದಲ್ಲಿ, ಶ್ರೀ ಎಂ. ರಾಚಪ್ಪ ತಹಶೀಲ್ದಾರ್ ಗ್ರೇಡ್-1, ಶಹಾಪುರ ತಾಲ್ಲೂಕು, ಯಾದಗಿರಿ ಜಿಲ್ಲೆ ಮತ್ತು ಶ್ರೀ ಆರ್. ಲೋಕನಾಥ್, ತಹಶೀಲ್ದಾರ್ ಗ್ರೇಡ್-1, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರುಗಳಿಗೆ ಕರ್ನಾಟಕ ನಾಗರೀಕ ಸೇವಾ (ಬಡ್ತಿ, ವೇತನ ಮತ್ತು ನಿವೃತ್ತಿ ವೇತನದ ವಿನಿಯಮನ) ನಿಯಮಗಳು, 1978ರ ನಿಯಮ 2(1)(ಎ) ರನ್ವಯ ದಿನಾಂಕ : 18-07-2011 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ತಹಶೀಲ್ದಾರ್ ಗ್ರೇಡ್-1 ವೃಂದಕ್ಕೆ (ವೇತನ ಶ್ರೇಣಿ ರೂ. 14050-25050) ಪದೋನ್ನತಿ ನೀಡಿ ಅವರುಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಮುಂದುವರೆಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರ.ಸಂ. (2)ರಲ್ಲಿ ಶ್ರೀ ಆರ್. ಲೋಕನಾಥ್, ತಹಶೀಲ್ದಾರ್ ಗ್ರೇಡ್-1, ಹುಣಸೂರು ರವರು ಅವರಿಗೆ ಕರ್ನಾಟಕ ನಾಗರೀಕ ಸೇವಾ (ಆ.ಪಿ.ಪಿ.) ನಿಯಮಾವಳಿಗಳು 1978ರ ನಿಯಮ 2(1)(ಎ) ರನ್ವಯ ದಿನಾಂಕ : 18-07-2011 ರಿಂದ ಜಾರಿಗೆ ಬರುವಂತೆ ತಹಶೀಲ್ದಾರ್ ಗ್ರೇಡ್-1 ವೃಂದಕ್ಕೆ ಪೂರ್ವಾನ್ವಯವಾಗಿ ಕರ್ನಾಟಕ ಆಡಳಿತ ಸೇವಾ ಸಮೂಹ-ಎ (ಕಿರಿಯ ಶ್ರೇಣಿ) ವೃಂದದ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (3)ರಲ್ಲಿ ಗುಲ್ಬರ್ಗಾ ವಿಭಾಗ ಪ್ರಾದೇಶಿಕ ಆಯುಕ್ತರು ಶ್ರೀ ಎಂ. ರಾಚಪ್ಪ, ತಹಶೀಲ್ದಾರ್ ಗ್ರೇಡ್-1, ಶಹಾಪುರ ತಾಲ್ಲೂಕು ಅವರಿಗೆ ಕರ್ನಾಟಕ ನಾಗರೀಕ ಸೇವಾ (ಆರ್.ಪಿ.ಪಿ.) ನಿಯಮಾವಳಿಗಳು 1978ರ ನಿಯಮ 2(1)(ಎ) ರನ್ವಯ ದಿನಾಂಕ : 18-07-2011

ರಿಂದ ಜಾರಿಗೆ ಬರುವಂತೆ ತಹಶೀಲ್ದಾರ್ ಗ್ರೇಡ್-1 ವೃಂದಕ್ಕೆ ಪೂರ್ವಾನ್ವಯವಾಗಿ ಬಡ್ತಿ ನೀಡಿ, ಕರ್ನಾಟಕ ಆಡಳಿತ ಸೇವಾ ಸಮೂಹ-ಎ (ಕಿರಿಯ ಶ್ರೇಣಿ) ವೃಂದದ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (3)ರಲ್ಲಿ ತಹಶೀಲ್ದಾರ್ ಗ್ರೇಡ್-2 ವೃಂದದಿಂದ ತಹಶೀಲ್ದಾರ್ ಗ್ರೇಡ್-1 ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ತಹಶೀಲ್ದಾರ್ ಗ್ರೇಡ್-1 ವೃಂದದ ಜೇಷ್ಠತಾ ಪಟ್ಟಿಯಲ್ಲಿ ಶ್ರೀಯುತರ ಹೆಸರನ್ನು ಸೇರಿಸಿ ತಿದ್ದುಪಡಿ ಮಾಡಬೇಕಾಗಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 251 ಎಎಸ್‌ಡಿ 2012 ಬೆಂಗಳೂರು, ದಿನಾಂಕ: 27ನೇ ಜೂನ್ 2012

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಡಿ 296 ಎಎಸ್‌ಡಿ 2011, ದಿನಾಂಕ : 27-07-2011 ರಂದು ಪ್ರಕಟಿಸಲಾಗಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ತಹಶೀಲ್ದಾರ್ ಗ್ರೇಡ್-1 ವೃಂದದ ಕ್ರಮ ಸಂಖ್ಯೆ : 587 ರಲ್ಲಿ ಶ್ರೀ ದಯಾನಂದ ಭಂಡಾರಿ ಇವರ ನಂತರ ಕ್ರಮ ಸಂಖ್ಯೆ : 587(ಎ) ರಲ್ಲಿ ಶ್ರೀ ಎಂ. ರಾಚಪ್ಪ ಇವರ ಹೆಸರನ್ನು ಮತ್ತು ಕ್ರಮ ಸಂಖ್ಯೆ : 608 ರಲ್ಲಿ ಶ್ರೀ ನಾಗೇಂದ್ರ ಎಫ್. ಹೊನ್ನಹಳ್ಳಿ ಇವರ ನಂತರ ಕ್ರಮ ಸಂಖ್ಯೆ : 608(ಎ) ರಲ್ಲಿ ಶ್ರೀ ಆರ್. ಲೋಕನಾಥ್ ಇವರ ಹೆಸರನ್ನು ಸೇರ್ಪಡೆ ಮಾಡಿ ಈ ಕೆಳಗಿನಂತೆ ಪ್ರಕಟಿಸಲಾಗಿದೆ.

ಕ್ರ.ಸಂ.	ತಹಶೀಲ್ದಾರ್ ಗ್ರೇಡ್-1 ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು	ಎಸ್.ಸಿ/ ಎಸ್.ಟಿ	ಜನ್ಮ ದಿನಾಂಕ	ಅಧಿಕಾರಿ ಸೇವೆಗೆ ಸೇರಿದ ದಿನಾಂಕ	ಅರ್ಹತಾ ದಿನಾಂಕ	ಷರಾ
1	587(ಎ)	ಶ್ರೀ ಎಂ. ರಾಚಪ್ಪ	--	01-02-1973	17-04-2006	18-07-2011	ತಹಶೀಲ್ದಾರ್ ಗ್ರೇಡ್-1
2	608(ಎ)	ಶ್ರೀ ಆರ್. ಲೋಕನಾಥ್	--	05-04-1973	27-01-2006	18-07-2011	ತಹಶೀಲ್ದಾರ್ ಗ್ರೇಡ್-1

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ವಿ. ರಾಮಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1719 ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ವಿಷಯ : ಶ್ರೀ ಎ.ಎಚ್. ಆಲೂರು, ತಹಶೀಲ್ದಾರ್ ಗ್ರೇಡ್-1, ಅವರನ್ನು ಅಮಾನತ್ತುಗೊಳಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಅಧಿಸೂಚನೆ ಸಂಖ್ಯೆ : ಆರ್‌ಡಿ 260 ಎಎಸ್‌ಡಿ 2011, ದಿನಾಂಕ : 17-04-2012.

2. ಸರ್ಕಾರಿ ಅಧಿಸೂಚನೆ ಸಂಖ್ಯೆ : ಆರ್‌ಡಿ 27 ಎಟಿಎಸ್ 2012, ದಿನಾಂಕ : 23-04-2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಅಧಿಸೂಚನೆಯಲ್ಲಿ ಶ್ರೀ ಎ.ಎಚ್. ಆಲೂರು, ಅವರಿಗೆ ತಹಶೀಲ್ದಾರ್ ಗ್ರೇಡ್-2 ವೃಂದದಿಂದ ತಹಶೀಲ್ದಾರ್ ಗ್ರೇಡ್-1 ವೃಂದಕ್ಕೆ ಪದೋನ್ನತಿ ನೀಡಲಾಗಿತ್ತು. ಗುಲ್ಬರ್ಗಾ ಜಿಲ್ಲೆಯಲ್ಲಿ ಬರ ಪರಿಹಾರ ಕಾರ್ಯಗಳ ಉಸ್ತುವಾರಿ ವಹಿಸಲು ತಹಶೀಲ್ದಾರ್ ಹುದ್ದೆ ಅವಶ್ಯವೆಂದು ಪ್ರಾದೇಶಿಕ ಆಯುಕ್ತರು, ಗುಲ್ಬರ್ಗಾ ವಿಭಾಗ ಹಾಗೂ ಗುಲ್ಬರ್ಗಾ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಕೋರಿಕೆಯ ಮೇರೆಗೆ ಕಡ್ಡಾಯ ನಿರೀಕ್ಷಣಾ ಅವಧಿಯಲ್ಲಿದ್ದ ಶ್ರೀ ಎ.ಎಚ್. ಆಲೂರು, ಅವರನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಅಧಿಸೂಚನೆಯಲ್ಲಿ ಚಿಂಚೋಳಿ ತಾಲ್ಲೂಕಿನ ತಹಶೀಲ್ದಾರ್ ಗ್ರೇಡ್-1 ಖಾಲಿ ಹುದ್ದೆಗೆ ಸಾರ್ವಜನಿಕ/ಆಡಳಿತ ಹಿತದೃಷ್ಟಿಯಿಂದ ವರ್ಗ ಮಾಡಿ ನೇಮಿಸಲಾಗಿತ್ತು. ಸದರಿ ಅಧಿಕಾರಿ ವರ್ಗಾವಣೆಗೊಂಡ ಸ್ಥಳದಲ್ಲಿ ಹಾಜರಾಗದೇ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿ, ಕರ್ತವ್ಯ ನಿರ್ಲಕ್ಷತೆ ತೋರಿ ಕರ್ತವ್ಯ ಲೋಪ ಎಸಗಿರುತ್ತಾರೆ. ಅಲ್ಲದೇ ಬರ ಪರಿಹಾರ ಕಾರ್ಯಗಳಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 44 ಎಡಿಇ 2012, ಬೆಂಗಳೂರು, ದಿನಾಂಕ: 01ನೇ ಜೂನ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎ.ಎಚ್. ಆಲೂರು, ತಹಶೀಲ್ದಾರ್ ಗ್ರೇಡ್-1, ಚಿಂಚೋಳಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಅವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 10(1)(ಡಿ)ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿಯವರ ವಿರುದ್ಧ ಶಿಸ್ತಿನ ಕ್ರಮವನ್ನು ಬಾಕಿ ಇಟ್ಟು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅಮಾನತ್ತಿನಲ್ಲಿಟ್ಟು ಆದೇಶಿಸಲಾಗಿದೆ.

2) ಅಮಾನತ್ತಿನ ಅವಧಿಯಲ್ಲಿ ಇವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ 98ನೇ ನಿಯಮದಲ್ಲಿ ನಿಗಧಿಪಡಿಸಿರುವಂತೆ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ.

3) ಅಮಾನತ್ತಿನ ಅವಧಿಯಲ್ಲಿ ಸದರಿಯವರು ಕೇಂದ್ರಸ್ಥಾನವನ್ನು ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೆ ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ವಿ ರಾಮಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1720 ಕಂದಾಯ ಇಲಾಖೆ (ಸೇವೆಗಳು-3)

ತೋಟಗಾರಿಕೆ ಸಚಿವಾಲಯ

ವಿಷಯ : ತಾಳೆಬೆಳೆ ಅಭಿವೃದ್ಧಿ ಯೋಜನೆಯಡಿ ಅನುಮೋದಿತ ಖಾಸಗಿ ಸಂಸ್ಥೆಗಳಿಗೆ ತಾಳೆಬೆಳೆ ಪ್ರದೇಶವನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ:ಕೃತೋಇ 121 ತೋಸೇಪ 2010 ದಿನಾಂಕ:02-07-2010
2. ಮೆ. ಫುಡ್ಸ್, ಫ್ಯಾಟ್ಸ್ ಅಂಡ್‌ಫರ್ಟಿಲೈಸರ್ಸ್ ಲಿ. ಹೈದರಾಬಾದ್ ಇವರ ಪತ್ರ ದಿ.19-03-2011
3. ತೋಟಗಾರಿಕೆ ನಿರ್ದೇಶಕರ ಪತ್ರ ಸಂಖ್ಯೆ:ತೋನಿ/ತೋಅನಿ/ತಾಬೆಯೋ/ಸತೋಅ-2/14/ 2011-12 ದಿ. 27-01-2012

ಸರ್ಕಾರದ ಆದೇಶ ಸಂಖ್ಯೆ:ತೋಇ 219 ತೋಇವಿ 2011 ಬೆಂಗಳೂರು, ದಿನಾಂಕ:11-05-2012

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ.1ರ ಸರ್ಕಾರದ ಆದೇಶದಲ್ಲಿ ಮೆ. ಫುಡ್ಸ್, ಫ್ಯಾಟ್ಸ್ ಅಂಡ್ ಫರ್ಟಿಲೈಸರ್ಸ್ ಲಿಮಿಟೆಡ್. ಹೈದರಾಬಾದ್ ಇವರಿಗೆ ತಾಳೆಬೆಳೆ ಅಭಿವೃದ್ಧಿ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ತಾಳೆಬೆಳೆ ಪ್ರದೇಶಾಭಿವೃದ್ಧಿ ಯೋಜನೆಯಡಿ ಪರಿಷ್ಕೃತ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ರಾಯಚೂರು ಜಿಲ್ಲೆ, ಕೊಪ್ಪಳ ಜಿಲ್ಲೆಯ ಕೊಪ್ಪಳ, ಕುಷ್ಠಗಿ, ಯಲಬುರ್ಗಾ, ಸಿಂಧನೂರು ಮತ್ತು ಗಂಗಾವತಿ ತಾಲ್ಲೂಕು ಹಾಗೂ ಗದಗ ಜಿಲ್ಲೆಯ ಮುಂಡರಗಿ, ರೋಣ ಮತ್ತು ಶಿರಹಟ್ಟಿ ತಾಲ್ಲೂಕುಗಳನ್ನು ಹಂಚಿಕೆ ಮಾಡಲಾಗಿತ್ತು. ಮೇಲೆ ಓದಲಾದ ಕ್ರ.ಸಂ.2ರ ಪತ್ರದಲ್ಲಿ ಮೆ. ಫುಡ್ಸ್, ಫ್ಯಾಟ್ಸ್ ಅಂಡ್‌ಫರ್ಟಿಲೈಸರ್ಸ್ ಲಿಮಿಟೆಡ್, ಹೈದರಾಬಾದ್ ಸಂಸ್ಥೆಯು ತಾಳೆ ಬೆಳೆ ಉದ್ದಿಮೆ ಜೊತೆಗೆ ತಮ್ಮ ವ್ಯವಹಾರವನ್ನು ಇತರೆ ಕ್ಷೇತ್ರಗಳಲ್ಲೂ ಸಹ ವಿಸ್ತರಿಸಿದ್ದು, ಮುಂದಿನ ದಿನಗಳಲ್ಲಿ ತಾಳೆ ಬೆಳೆಗೆ ಇರುವ ಭವಿಷ್ಯವನ್ನು ಗಮನಿಸಿ ತಮ್ಮ ವ್ಯವಹಾರವನ್ನು ತಾಳೆ ಬೆಳೆಯಲ್ಲಿಯೇ ಹೆಚ್ಚಾಗಿ ಕೇಂದ್ರೀಕರಿಸಲು ತಮ್ಮ ಮೂಲ ಸಂಸ್ಥೆಯಾದ ಮೆ. ಫುಡ್ಸ್, ಫ್ಯಾಟ್ಸ್ ಅಂಡ್‌ಫರ್ಟಿಲೈಸರ್ಸ್ ಲಿಮಿಟೆಡ್ ಸಂಸ್ಥೆಯಿಂದ ಬೇರ್ಪಟ್ಟು ಒಂದು ಹೊಸ ಅಂಗಸಂಸ್ಥೆಯನ್ನು ಸ್ಥಾಪಿಸಿ ಮೆ: 3F Oil Palm Agro Tech Pvt. Ltd. ಎಂದು ನಾಮಕರಣ ಮಾಡಿ ಈ ಹೊಸ ಅಂಗಸಂಸ್ಥೆಯಿಂದ ತಾಳೆಬೆಳೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ವ್ಯವಹಾರ ಕೈಗೊಳ್ಳುವುದಾಗಿ ತಿಳಿಸುತ್ತಾ ಮೆ. ಫುಡ್ಸ್, ಫ್ಯಾಟ್ಸ್ ಅಂಡ್ ಫರ್ಟಿಲೈಸರ್ಸ್ ಲಿಮಿಟೆಡ್ ಸಂಸ್ಥೆಗೆ ಹಂಚಿಕೆ ಮಾಡಿರುವ ತಾಳೆಬೆಳೆ ಪ್ರದೇಶಗಳನ್ನು ಹೊಸ ಅಂಗಸಂಸ್ಥೆಯಾದ ಮೆ:3F Oil Palm Agro Tech Pvt. Ltd. ಸಂಸ್ಥೆಗೆ ಮರು ಹಂಚಿಕೆ ಮಾಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ:3ರ ತೋಟಗಾರಿಕೆ ನಿರ್ದೇಶಕರ ಪತ್ರದಲ್ಲಿ ಮೆ. ಫುಡ್ಸ್, ಫ್ಯಾಟ್ಸ್ ಅಂಡ್ ಫರ್ಟಿಲೈಸರ್ಸ್ ಲಿಮಿಟೆಡ್ ಸಂಸ್ಥೆಯಿಂದ ಮೆ:3F Oil Palm Agro Tech Pvt. Ltd. ಸಂಸ್ಥೆ ಪ್ರತ್ಯೇಕಿಸಿರುವ ಬಗ್ಗೆ ಆಂಧ್ರ ಪ್ರದೇಶ ಉಚ್ಚ ನ್ಯಾಯಾಲಯದ ದಿ.22-12-2010ರ ಆದೇಶದ ಪ್ರತಿ ಹಾಗೂ ಇತರೆ ದಾಖಲಾತಿಗಳನ್ನು ಸಲ್ಲಿಸಿ, ಸಂಸ್ಥೆಯ ಮನವಿಯನ್ನು ಪರಿಗಣಿಸಿ ತಾಳೆಬೆಳೆ ಅಭಿವೃದ್ಧಿಯ ದೃಷ್ಟಿಯಿಂದ ಮೆ. ಫುಡ್ಸ್, ಫ್ಯಾಟ್ಸ್ ಅಂಡ್ ಫರ್ಟಿಲೈಸರ್ಸ್ ಲಿಮಿಟೆಡ್ ಸಂಸ್ಥೆಯವರು ಹೊಸದಾಗಿ ಸ್ಥಾಪಿಸಿರುವ ಮೆ:3F Oil Palm Agro Tech Pvt. Ltd. ಸಂಸ್ಥೆಯ ಹೆಸರಿಗೆ ಮೇಲೆ ಓದಲಾದ ಕ್ರ.ಸಂ:1ರ ಆದೇಶದ ಷರತ್ತು ಮತ್ತು ನಿಬಂಧನೆಗಳನ್ವಯ ಮರುಹಂಚಿಕೆ ಮಾಡುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಆದೇಶ

ಪ್ರಸ್ತಾವನೆಯಲ್ಲಿ ತಿಳಿಸಿರುವ ವಿವರಣೆಗಳ ಹಿನ್ನಲೆಯಲ್ಲಿ ಕೇಂದ್ರ ಪುರಸ್ಕೃತ ತಾಳೆಬೆಳೆ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಹಿಂದೆ ಆದೇಶ ಸಂಖ್ಯೆ:ಕೃತೋಇ 121 ತೋಸೇಪ 2010 ದಿ.02-07-2010ರಲ್ಲಿ ಮೆ. ಫುಡ್ಸ್, ಫ್ಯಾಟ್ಸ್ ಅಂಡ್ ಫರ್ಟಿಲೈಸರ್ಸ್ ಲಿಮಿಟೆಡ್, ಹೈದರಾಬಾದ್ ಸಂಸ್ಥೆಗೆ ಹಂಚಿಕೆ ಮಾಡಿದ್ದ ರಾಯಚೂರು ಜಿಲ್ಲೆ, ಕೊಪ್ಪಳ ಜಿಲ್ಲೆಯ ಕೊಪ್ಪಳ, ಕುಷ್ಠಗಿ, ಯಲಬುರ್ಗಾ, ಸಿಂಧನೂರು ಮತ್ತು ಗಂಗಾವತಿ ತಾಲ್ಲೂಕು ಹಾಗೂ ಗದಗ ಜಿಲ್ಲೆಯ ಮುಂಡರಗಿ, ರೋಣ ಮತ್ತು ಶಿರಹಟ್ಟಿ ತಾಲ್ಲೂಕುಗಳನ್ನು ಮೆ:3F Oil Palm Agro Tech Pvt. Ltd. ಹೈದರಾಬಾದ್ ಸಂಸ್ಥೆಗೆ ರೂ. 1.00ಲಕ್ಷ ವರ್ಗಾವಣೆ ಫೀಯನ್ನು ಸರ್ಕಾರಕ್ಕೆ ಪಾವತಿಸಲು ಮತ್ತು ಕೂಡಲೇ ಸಂಸ್ಕರಣಾ ಘಟಕ ಪ್ರಾರಂಭಿಸಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಹಾಗೂ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳೊಂದಿಗೆ ಮರುಹಂಚಿಕೆ/ವರ್ಗಾವಣೆ ಮಾಡಿ ಆದೇಶಿಸಲಾಗಿದೆ.

TERMS AND CONDITIONS

1. The company and the Nodal Departmental Officers jointly shall be responsible for planning and systematic implementation of the program. They will be responsible for planning of area expansion, production of requisite number of seedlings (indigenous and exotic), On-farm-investment (OFI) subsidy to be distributed in advance (at least one year in advance).
2. The company shall have their own extension support staff including technical and field personnel and will be accountable for area expansion program, nursery development, timely distribution of input subsidy, planting material production, procurement of FFBs etc., and the Nodal Departmental Officers will over see proper positions the appointment of staff and effective implementation of the program.

3. The company will be responsible for taking up nursery activities for raising oil palm seedlings, distribute seedlings to the farmers for undertaking area expansion, distribute inputs to the farmers in the form of fertilizers and plant protection chemicals and render accurate documents, to ensure certification process related to distribution of inputs.

4. The cost of seedlings is Rs.70/- for indigenous and Rs.85/- for exotic. The subsidy per seedling is Rs.50/-. The company will collect Rs.20/- per seedling for indigenous and Rs.35/- per seedling for exotic seedlings as differential cost of seedling from the farmer at the time of supply of seedlings. In case the farmers donot agree to pay the differential cost of seedling, it will be adjusted by the company against the farmer's eligible OFI subsidy.

5. The company will adjust a sum of Rs.12/- per seedling as transportation cost against the eligible OFI subsidy of the farmers, in case the farmers do not pay the transportation cost of the seedlings.

6. The company will be eligible for advance planting material subsidy for raising nursery. The seedling subsidy @ 80% of the seedling subsidy for 80% of the actual number of sprouts imported / procured will be considered. This will be released on production of documents showing the procurement / import of sprouts and sowing, duly certified by Nodal Project officers. Before release of advance subsidy, the entrepreneur should give a bank guarantee as security for the amount being paid to them. The bank guarantee should be for the period adequately sufficient for which the subsidy is proposed to be utilized. The balance would be released only after certified quality seedlings are distributed to the farmers and the company renders proper utilization certificate duly certified by the RSK officers (AHO's) and Nodal Departmental Officers after fully satisfying the distribution of seedlings.

7. The company will be eligible for advance first year On-farm-Investment (OFI) subsidy. At a time, for releasing advance first year OFI subsidy, 500 ha. can be considered. Against this, 75% (for 375 ha.) can be considered as an advance subsidy, again against security by Bank guarantee. Remaining 25% (125 ha.) of the advance subsidy can be released after atleast 375 ha. of area development has been covered. This is also against security by Bank guarantee.

8. The company cannot distribute seedlings / OFI subsidy to farmers without the knowledge of the Nodal Departmental Officers and RSK official (AHO's).

9. The company will also be fully responsible for any loss of area on the part of negligence of the farmer, due to improper selection criteria adopted for selecting farmers and site. Company should evolve all plans and strategies with farmers to ensure total retention and survivability of plant population and crop area with farmers and should seek timely advisory input from Government as and when required.

10. The company should ensure distribution and maintenance of Pass Book and duly updated with all the information. The District Officer, Taluk Officer, RSK official (AHO's) and the Nodal Officers should invariably verify and attest the Pass Book. The farmers must be aware of the eligible subsidy (both type of fertilizers and amount) and balance subsidy available against their account at any point of time.

11. The company shall provide required technical guidance to the farmers to achieve a minimum production levels of 20 tons/ha. (FFBs)

12. The company shall open collection centers within 5 - 10 kms radius in the oil palm growing regions. The FFBs shall be purchased by the company from the farmers within their allotted area only. If the company fails to procure the FFBs, they shall compensate for the loss to the farmers. The farmers cannot sell their FFBs to the companies other than the company specified / allotted in that particular zone. State shall protect the interest of the Company if any third person tries to influence the oil palm farmers for selling the FFBs to them.

13. The company shall pay the adhoc price for the FFBs, till such time the price of FFBs are fixed by the Price Fixation Committee. The company shall abide and accept the FFB (Fresh Fruits Bunches) price as approved in the Price Fixation Committee meeting and make payment to the farmers within one month of procurement of fruits.

14. The Nodal Departmental Officers should report to the Directorate regarding payment of difference amount between adhoc and actual price within one month.

15. The authorized company shall establish their oil processing unit within three years of allotment of the area **a**nd will keep the Govt. informed about the action being taken in setting up of the mill.

16. The company shall be fully responsible for setting up of processing plants with all infrastructural facilities and obtain required clearance from KEB, Pollution Control Board and other concerned agencies. The processing unit so established in the state shall abide the government directions for processing the fruits suiting to its capacity.

17. In case the company does not commence the processing of oil extraction unit, within the time limit, they are supposed to purchase Fresh Fruit Bunches in their allotted area as per the rates fixed by the Government through their collection centres and arrange processing without suffering the farmers produce i.e. loss in weight age of FFBs.

18. The company shall supply FFBs to any nearby mill within the State, in case of any company failing to open their own processing mill and both the companies should come to an amicable understanding (under the supervision of the Directorate) in favour of the project.

19. The company can enhance the capacity of the processing unit with the due approval of the State.

20. The companies shall adhere to the existing state taxation and levy provisions pertaining to oil industry, which is in operation from time to time. Any interstate or interregional inter movement of FFB's shall follow prior permission of the Government.

21. The company shall enter into a tripartite agreement involving financial institutions / Banks, farmers and the company for extending credit facilities and recovery of loan by way of deductions from out of the amount payable to farmers for their sale of FFBs.

22. The Company will nominate and inform the details regarding appointment of an authorized person for signing the proposals / correspondences on behalf of the company.

23. The company will render utilization statement for distributing inputs and seedlings in the proper prescribed format as communicated by Director of Horticulture for totally satisfying the purpose of its release.

24. The company and the Nodal officer shall be responsible to furnish explanation, relevant support documents for the audit objections.

25. The company should give a Bank guarantee worth Rs.5.0 lakhs drawn in favour of Additional Director of Horticulture, (Oil Palm) as a Earnest Money deposit (EMD), which has to be renewed every year.

26. The company will adhere to the technical circulars issued every time and now regarding distribution of inputs to the farmers.

27. The companies will assist the farmers in availing Crop and Development loan from the Commercial Banks / NABARD.

28. The company and the respective RSK official and Nodal officers will be liable for penalties, recoveries as decided by the Director of Horticulture in case of default as observed during field inspection, audit etc.

29. The company shall abide by the provisions of the Oil Palm Act / Rules in force and to be enforced, if any, in future related to oil palm development and processing.

30. The company shall furnish compliance to meeting proceedings communicated by the Directorate of Horticulture.

31. The company shall not withdraw from the project for any reason whatsoever unilaterally.

32. The company shall inform the Government well in advance about any change in their Management. In case the company has to change the name or Transfer the company, they shall pay a transfer fee of Rs.1,00,000/- (Rupees One lakh only) which is non-refundable and it needs prior permission from the State. Failure to comply with this leads to forfeiture of EMD and cancellation of area allotted.

33. Lapses in area expansion activities, untimely payment of subsidies to farmers, derelictions in activities as per MPIC, delay in renewal of Bank Guarantee and non-adherence to the above terms and conditions will invite penalty and the quantum of penalty will be decided by the Project Management Committee.

34. If the company doesn't comply to any of the terms & conditions listed above, the Directorate can take suitable action against the company including forfeiture of the EMD and can cancel the area allotted and re allot the area to other suitable company.

35. The company shall adhere to the guidelines, circulars issued by Directorate of Horticulture, decisions of Project Management Committee (PMC) and Price Fixation Committee (PFC) as communicated. Time to time the PMC and Government will review the terms and conditions and improvise as and when required for smooth and efficient implementation of oil palm project in the state.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಸಿ.ಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ.

ಪಿ.ಆರ್. 1406

ಒಳಾಡಳಿತ ಸಚಿವಾಲಯ

ವಿಷಯ : ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಸಲಹಾ ಮಂಡಳಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ : ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರವರ ಪತ್ರ ಸಂಖ್ಯೆ: ಜೆ2/ಸಿಆರ್–63/2008 ದಿನಾಂಕ: 01.10.2008

ಪ್ರಸ್ತಾವನೆ:–

ಕರ್ನಾಟಕ ಕಾರಾಗೃಹಗಳ ನಿಯಮಾವಳಿಗಳ 1974ರ, ನಿಯಮ 192ರ ನಿಯಮದಲ್ಲಿ ಪ್ರತಿ ಕೇಂದ್ರ ಕಾರಾಗೃಹ / ಜಿಲ್ಲಾ ಕಾರಾಗೃಹಕ್ಕಾಗಿ ಸಲಹಾ ಮಂಡಳಿಯನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರುತ್ತದೆ. ದೀರ್ಘಾವಧಿ ಶಿಕ್ಷೆಗೊಳಪಟ್ಟ ಅಪರಾಧಿಗಳನ್ನು ವಿಮರ್ಶಿಸುವುದು ಈ ಮಂಡಳಿಯ ಉದ್ದೇಶವಾಗಿರುತ್ತದೆ.

ಕೇಂದ್ರ ಕಾರಾಗೃಹದಲ್ಲಿರುವ ಸಲಹಾ ಮಂಡಳಿಯು ಈ ಕೆಳಕಂಡವರನ್ನು ಒಳಗೊಂಡಿರುತ್ತದೆ:–

1] ಕಾರಾಗೃಹಗಳ ಮಹಾನಿರೀಕ್ಷಕರು	– ಅಧ್ಯಕ್ಷರು
2] ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು	– ಸದಸ್ಯರು
3] ಪೊಲೀಸ್ ಆಯುಕ್ತರು	– ಸದಸ್ಯರು
4] ಜಿಲ್ಲಾ ಶಸ್ತ್ರ ಚಿಕಿತ್ಸಕರು	– ಸದಸ್ಯರು
5] ಮೂರು ಜನ ಸ್ಥಳೀಯ ಅಧಿಕಾರೇತರರು	– ಸದಸ್ಯರು
6] ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರು	– ಕಾರ್ಯದರ್ಶಿ

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರು ಮೇಲೆ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯಲ್ಲಿ ಮೇಲೆ ಹೇಳಲಾದ ನಿಯಮವನ್ನು ಪ್ರಸ್ತಾಪಿಸಿ, 3 ಜನ ಸ್ಥಳೀಯ ಅಧಿಕಾರೇತರ ಸದಸ್ಯರನ್ನು ತಿಳಿಸುತ್ತಾ, ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಸಲಹಾ ಮಂಡಳಿಯನ್ನು ರಚಿಸುವಂತೆ ಕೋರಿರುತ್ತಾರೆ. ಅಧಿಕಾರೇತರ ಸದಸ್ಯರ ನಾಮನಿರ್ದೇಶನದ ಬಗ್ಗೆ ಇತರೆ ಮೂಲಗಳಿಂದ ಬಂದ ಪ್ರಸ್ತಾವನೆಗಳನ್ನು ಸಹ ಪರಿಶೀಲಿಸಲಾಗಿದೆ.

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 239 ಪಿಆರ್‌ಎ 2008, ಬೆಂಗಳೂರು, ದಿನಾಂಕ: 18–05–2012

ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ದೀರ್ಘಾವಧಿ ಶಿಕ್ಷೆ ಅನುಭವಿಸುತ್ತಿರುವ ಅಪರಾಧಿಗಳನ್ನು ವಿಮರ್ಶಿಸುವ ಸಲುವಾಗಿ, ಕರ್ನಾಟಕ ಕಾರಾಗೃಹಗಳ ನಿಯಮಾವಳಿಗಳ 1974ರ ನಿಯಮ 192ರ ಅನ್ವಯ ಸರ್ಕಾರವು ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಈ ಕೆಳಕಂಡಂತೆ ಸಲಹಾ ಮಂಡಳಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಚಿಸಿದೆ:–

1)	ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರು, ಬೆಂಗಳೂರು	– ಅಧ್ಯಕ್ಷರು
2)	ಬೆಂಗಳೂರು ನಗರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು, ಬೆಂಗಳೂರು.	– ಸದಸ್ಯರು
3)	ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಬೆಂಗಳೂರು.	– ಸದಸ್ಯರು
4)	ಜಿಲ್ಲಾ ಶಸ್ತ್ರ ಚಿಕಿತ್ಸಕರು, ಬೆಂಗಳೂರು ನಗರ, ಬೆಂಗಳೂರು.	– ಸದಸ್ಯರು
5)	ಶ್ರೀಮತಿ ಸಂತೋಷ ವಾಸ್, ಜನೋದಯ, ನಂ. 5423, 9ನೇ ಅಡ್ಡ ರಸ್ತೆ, 5ನೇ ಮುಖ್ಯ ರಸ್ತೆ, ಜಯಮಹಲ್, ಬೆಂಗಳೂರು–46.	– ಸದಸ್ಯರು *
6)	ಶ್ರೀ ರೆನಿ ಜಾರ್ಜ್, ಪ್ರಿಸನ್ ಫೆಲೋಶಿಫ್ ಆಫ್ ಇಂಡಿಯಾ, ದೊಡ್ಡ ಗುಬ್ಬಿ ಅಂಚೆ, ಬೆಂಗಳೂರು –149.	– ಸದಸ್ಯರು *
7)	ಶ್ರೀ ಬಿ. ಚಂದ್ರಶೇಖರ್ ರೆಡ್ಡಿ, ಶೆಟ್ಟಿಹಳ್ಳಿ, ಮರಸೂರು ಅಂಚೆ, ಆನೇಕಲ್ ತಾಲ್ಲೂಕು, ಬೆಂಗಳೂರು.	– ಸದಸ್ಯರು *
8)	ಬೆಂಗಳೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರು.	– ಕಾರ್ಯದರ್ಶಿ

ಅಧಿಕಾರೇತರ ಸದಸ್ಯರ * ಅವಧಿಯು ಮೂರು ವರ್ಷಗಳಿಗೆ ಅಥವಾ ತತ್ಸಂಬಂಧ ಸರ್ಕಾರವು ಮುಂದೆ ನೀಡಬಹುದಾದ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇರುತ್ತದೆ.

ಈ ಸಲಹಾ ಮಂಡಳಿಯು ಕರ್ನಾಟಕ ಕಾರಾಗೃಹಗಳ ನಿಯಮಾವಳಿಗಳ 1974ರ ನಿಯಮ 193ರಲ್ಲಿ ತಿಳಿಸಿರುವಂತೆ ನಿಗಧಿತ ಕಾರ್ಯವನ್ನು ನಿರ್ವಹಿಸತಕ್ಕದ್ದಾಗಿರುತ್ತದೆ.

ಈ ಸಲಹಾ ಮಂಡಳಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆಃ ಎಫ್‌ಡಿ 2 ಎಸ್‌ಆರ್‌ಎ 2000 ದಿನಾಂಕಃ03.02.2001ರಲ್ಲಿ ಹೊರಡಿಸಿದ ನಿಯಮಗಳನ್ವಯ ಹಾಗೂ ಸದರಿ ನಿಯಮಗಳಲ್ಲಿ ತಿಳಿಸಲಾಗಿರುವ ಷರತ್ತುಗಳಿಗೆ ಬದ್ಧವಾಗಿ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.1452

ಈ. ಪಾಪಣ್ಣ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಸಾದಿಕ್ ಪಾಷ ಪಿ.ಎಸ್.ಐ, ಪಾತಪಾಳ್ಯ ಪೊಲೀಸ್ ಠಾಣೆ, ಚಿಕ್ಕಬಳ್ಳಾಪುರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಆದೇಶ ಸಂಖ್ಯೆ: ಫನ್ನಿ/35/ಡಿಇ/2010–11 (ಓ.ಬಿ. ಸಂಖ್ಯೆ: 30/2011–12) ದಿನಾಂಕ: 02–5–2011
2) ಮೇಲ್ಮನವಿ ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಸಂಖ್ಯೆ: ಅಪೀಲು(4)/28/2011–12 (ಓ.ಬಿ. ಸಂಖ್ಯೆ: 33/2011–12) ದಿನಾಂಕ: 12–12–2011
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 21–12–2011
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)61/2011–12 ದಿನಾಂಕ: 16–02–2012

ಪ್ರಸ್ತಾವನೆ:

ಶ್ರೀ ಸಾದಿಕ್ ಪಾಷ, ಇವರು ಶಿಡ್ಲಘಟ್ಟ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ನಿರ್ಲಕ್ಷತೆ, ತೋರಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

> " ಶ್ರೀ ಸಾದಿಕ್ ಪಾಷ ಪಿ.ಎಸ್.ಐ. ಪಾತಪಾಳ್ಯ ಠಾಣೆ ಆದ ನೀವು ಈ ಹಿಂದೆ ಶಿಡ್ಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ: 21–06–2010 ರಂದು ರಾತ್ರಿ ಸುಮಾರು 21–45 ಗಂಟೆಗೆ ಶಿಡ್ಲಘಟ್ಟಪುರದ ಪಕ್ಕದಲ್ಲಿರುವ ಸೀತಹಳ್ಳಿ ಮಿಲ್ಟ್ರಿ ವೆಂಕಟರವಣಪ್ಪರವರ ಗೆಸ್ಟ್‌ಹೌಸ್‌ನಲ್ಲಿ ಜೂಜಾಟವಾಡುತ್ತಿರುವ ಬಗ್ಗೆ ಮಾಹಿತಿ ಮೇರೆಗೆ ಠಾಣೆಯ ಸಿಬ್ಬಂದಿಯವರೊಂದಿಗೆ ಅಲ್ಲಿಗೆ ಹೋಗಿ ಧಾಳಿ ಮಾಡಿದಾಗ ಯಾವುದೇ ಪಂಚರನ್ನು ಕರೆದುಕೊಂಡು ಹೋಗದಿರುವುದು, ಧಾಳಿ ಮಾಡುವ ಮುಂಚಿತವಾಗಿ ಮೇಲಾಧಿಕಾರಿಗಳಿಗೆ ಮಾಹಿತಿಯನ್ನು ನೀಡದೆ ಅನುಮತಿ–ಯನ್ನು ಪಡೆಯದೆ ಸದರಿ ಸ್ಥಳದಲ್ಲಿ ಧಾಳಿ ಮಾಡಿದ ನಂತರ ಜೂಜಾಟವಾಡುತ್ತಿದ್ದ 1) ರಾಮಲಿಂಗಾರೆಡ್ಡಿ 2) ಕೆ.ಟಿ. ಮಂಜುನಾಥ, 3) ನಾರಾಯಣಸ್ವಾಮಿ, 4) ಬಿ. ವೆಂಕಟರವಣಪ್ಪ, 5) ಆನೂರು ಮಂಜುನಾಥ ರವರನ್ನು ಠಾಣೆಗೆ ಕರೆದುಕೊಂಡು ಬಂದು ಅವರ ಬಳಿಯಿದ್ದ 55700–00 ರೂಪಾಯಿಗಳು, 4 ಮೊಬೈಲ್ ಪೋನ್, 3 ದ್ವಿಚಕ್ರವಾಹನಗಳನ್ನು ಜಪ್ತಿ ಮಾಡಿದ್ದು ಠಾಣೆಗೆ ತೆಗೆದುಕೊಂಡು ಬಂದಿದ್ದು, ಈ ಬಗ್ಗೆ ಮಹಜರ್ ಕ್ರಮವನ್ನು ಜರುಗಿಸಿರುವುದಿಲ್ಲ ಠಾಣಾ ಮಾಲುಪಟ್ಟಿಗೆ ತಂದಿರುವುದಿಲ್ಲ, ಧಾಳಿ ಮಾಡಲು ಪಂಚರನ್ನು ಕರೆದುಕೊಂಡು ಹೋಗಿರುವುದಿಲ್ಲ ಜೂಜಾಟ ನಡೆಯುತ್ತಿದ್ದ ಸ್ಥಳವು ಮನೆಯಾಗಿದ್ದು ಧಾಳಿ ಮಾಡಲು ಹಿರಿಯ ಅಧಿಕಾರಿಗಳಿಂದ ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ ಧಾಳಿ ಮಾಡಿದ ಸಮಯದಲ್ಲಿ ಜೂಜಾಟವಾಡುತ್ತಿದ್ದರೇ? ಅಥವಾ ಮನರಂಜನೆಗಾಗಿ ರಮ್ಮಿ ಆಡುತ್ತಿದ್ದರೇ? ಎಂಬುದನ್ನು ಖಚಿತಪಡಿಸಿಕೊಂಡಿರುವುದಿಲ್ಲ. ಒಂದು ಪಕ್ಷ ಮನರಂಜನೆಗಾಗಿ ರಮ್ಮಿ ಆಡುತ್ತಿದ್ದರೆ, ಅವರನ್ನು ಠಾಣೆಗೆ ಕರೆತರುವ ಅವಶ್ಯಕತೆಯಿರಲಿಲ್ಲ ಅವರು ಜೂಜಾಟವಾಡುತ್ತಿದ್ದರೇ ಅವರಿಗೆ ಲಘು ಪ್ರಕರಣ ಕಲಂ 92(ಪಿ) ಪ್ರಕಾರ ಕ್ರಮ ಕೈಗೊಳ್ಳುವುದು ಸಮಂಜಸವಲ್ಲ, ನೋಟೀಸ್‌ನಲ್ಲಿ ಕಲಂ 92(ಪಿ) ಕೆಪಿ ಆಕ್ಟ್ ಪ್ರಕರಣ ಕ್ರಮ ಕೈಗೊಂಡಿರುವುದಾಗಿ ನಮೂದಿಸಿದ್ದು, ಠಾಣಾ ದಿನಚರಿಯಲ್ಲಿ 92(ಒ) ಎಂತ ನಮೂದಿಸಿರುತ್ತೀರಿ. ಮಿಲ್ಟ್ರಿ ವೆಂಕರವಣಪ್ಪರವರು ಠಾಣೆಗೆ ಬಂದು ನಿಮ್ಮ ಬಳಿ ಮಾತನಾಡಿದ ನಂತರ ಅವರವರ ಹಣ ಮತ್ತು ಮೊಬೈಲ್ ಪೋನುಗಳನ್ನು ದ್ವಿಚಕ್ರ ವಾಹನಗಳನ್ನು ವಾಪಸ್ ನೀಡಿರುತ್ತೀರಿ. ನೀವು ಪೊಲೀಸ್ ಇಲಾಖೆಯಲ್ಲಿದ್ದು ಒಬ್ಬ ಜವಾಬ್ದಾರಿಯುತ ಠಾಣಾಧಿಕಾರಿಯಾಗಿದ್ದು ಜೂಜಾಟವಾಡುವ ಅಖಾಡದ ಮೇಲೆ ಧಾಳಿ ಮಾಡಲು ಮೇಲಾಧಿಕಾರಿಗಳ ಆದೇಶ ಪಡೆಯದೇ, ಪಂಚರನ್ನು ಕರೆದುಕೊಳ್ಳದೆ ಧಾಳಿ ಮಾಡಿ ಧಾಳಿಯ ಕಾಲಕ್ಕೆ ಮಹಜರ್ ಬರೆಯದೇ ಜೂಜಾಟವಾಡುತ್ತಿದ್ದಾರೆಂದು 5 ಜನರನ್ನು ಠಾಣೆಗೆ ಕರೆತಂದು, ಅವರಿಂದ 55700–00 ರೂಪಾಯಿಗಳು, 4 ಮೊಬೈಲ್ ಪೋನ್, 3 ದ್ವಿಚಕ್ರವಾಹನಗಳನ್ನು ಜಪ್ತಿ ಮಾಡಿದ್ದು, ಕಾನೂನು ರೀತ್ಯ ಕ್ರಮ ಕೈಗೊಳ್ಳದೇ ಮಿಲ್ಟ್ರಿ ವೆಂಕರವಣಪ್ಪರವರು ಠಾಣೆಗೆ ಬಂದು ನಿಮ್ಮ ಬಳಿ ಮಾತನಾಡಿದ ನಂತರ ಹಣವನ್ನು ದ್ವಿಚಕ್ರವಾಹನಗಳನ್ನು ಮೊಬೈಲ್ ಪೋನುಗಳನ್ನು ವಾಪಸ್ ನೀಡಿರುತ್ತೀರಿ ನೀವು ಕರ್ತವ್ಯ ಲೋಪವೆಸಗಿರುತ್ತೀರಿ. ಯಾವುದೇ ಸಂಗತಿಯನ್ನು ಮೇಲಾಧಿಕಾರಿಗಳಿಗೆ ತಿಳಿಸದೆ ಮಾಹಿತಿಯನ್ನು ತಿಳಿಸದೆ ಕರ್ತವ್ಯದಲ್ಲಿ ನಿರ್ಲಕ್ಷತೆಯನ್ನು ತೋರ್ಪಡಿಸಿರುವುದಾಗಿರುತ್ತೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ಆ.ಪೊ.ಅ. ರವರ ವಿರುದ್ದದ ಆರೋಪಗಳು ಭಾಗಶ: ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 02–5–2011ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗುವಂತೆ ಒಂದು ವರ್ಷ ಕಾಲ ಮುಂದೂಡಲಾಗಿದೆ, ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತೆಂದು ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 12–12–2011ರ ಆದೇಶದಲ್ಲಿ ಭಾಗಶಃ ಮಾರ್ಪಡಿಸಿ ಇವರ ವಾರ್ಷಿಕ ವೇತನ ಬಡ್ತಿಯನ್ನು ಭವಿಷ್ಯದ ವಾರ್ಷಿಕ ವೇತನ ಬಡ್ತಿಗಳಿಗೆ ಪರಿಣಾಮ ಬೀರದಂತೆ ಒಂದು ವರ್ಷದ ಅವಧಿಗೆ ಮುಂದೂಡಲಾಗಿದೆ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕರ್ತವ್ಯದಲ್ಲಿ ನಿರ್ಲಕ್ಷತೆ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ, ಆದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 141 ಪೊಸಿಅ 2011 ಬೆಂಗಳೂರು, ದಿನಾಂಕ: 22–5–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಸಾಧಿಕ್‌ಪಾಷ ಪಿ.ಎಸ್.ಐ., ಪಾತಪಾಳ್ಯ ಪೊಲೀಸ್ ಠಾಣೆ, ಚಿಕ್ಕಬಳ್ಳಾಪುರ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ. ನಿಂಗಪ್ಪ,

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ(ಪೊಲೀಸ್ ಸೇವೆಗಳು–ಬಿ)

ಪಿ.ಆರ್. 1495

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ವಿ. ತಿಮ್ಮೇಗೌಡ, ಸಿ.ಹೆಚ್.ಸಿ.–240, ಮದ್ದೂರು ಪೊಲೀಸ್ ಠಾಣೆ, ಮದ್ದೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1) ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ, ಇವರ ಆದೇಶ ಸಂಖ್ಯೆ: ಸಿಬ್ಬಂದಿ(2)/ಡಿಇ/01/2010–11 (ಓ.ಬಿ. ಸಂಖ್ಯೆ: 27/2011–12) ದಿನಾಂಕ: 07–5–2011
2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಸಂಖ್ಯೆ: ಅಪೀಲು/20/2011–12 (ಓ.ಬಿ. ಸಂಖ್ಯೆ: 37/2011–12) ದಿನಾಂಕ: 30–9–2011
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 09–12–2011
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)59/2011–12 ದಿನಾಂಕ: 08–3–2012

ಪ್ರಸ್ತಾವನೆ:

ಶ್ರೀ ವಿ. ತಿಮ್ಮೇಗೌಡ, ಸಿ.ಹೆಚ್.ಸಿ., ಇವರು ಶಿವಳ್ಳಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ದುರ್ನಡತೆ ಮತ್ತು ಅಶಿಸ್ತು ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

"ಶ್ರೀ ವಿ. ತಿಮ್ಮೇಗೌಡ, ಸಿ.ಹೆಚ್.ಸಿ.–240 ಆದ ನೀವು ಶಿವಳ್ಳಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ: 24–3–2010 ರಂದು ಸಂಜೆ 04–00 ಗಂಟೆ ಸಮಯದಲ್ಲಿ ಶ್ರೀಮತಿ ಬಿ. ಮಂಗಳ ಕೋಂ ಶ್ರೀನಿವಾಸಚಾರಿ ಚಾಮುಂಡೇಶ್ವರಿ ನಗರ ಕೆ.ಇ.ಬಿ. ಕಾಲೋನಿ 13ನೇ ಕ್ರಾಸ್ ಮಂಡ್ಯ ನಗರ ರವರ ಮನೆಯ ಹತ್ತಿರ ಸಮವಸ್ತ್ರ ಧರಿಸಿ ಪಾನಮತ್ತರಾಗಿ ಹೋಗಿ, ನಾನು ಶಿವಳ್ಳಿ ಪೊಲೀಸ್ ಠಾಣೆಯಿಂದ ಬಂದಿದ್ದೇನೆ ನಿಮ್ಮ ವಿರುದ್ಧ ಚೆಕ್ ಕೇಸ್ ಅನ್ನು ರವಿಗೌಡ ಎಂಬುವರು ನೀಡಿರುತ್ತಾರೆಂದು ಜೊತೆಯಲ್ಲಿದ್ದವರನ್ನು ಹಾಗೂ ಈ ಕೇಸಿನ ಲಾಯರ್ ರಾಜಕುಮಾರ್ ಎಂದು ಹೇಳಿ ಪರಿಚಯಿಸಿಕೊಂಡು ಮೂರು ಜನ ಹೋಗಿ ಶ್ರೀಮತಿ ಬಿ. ಮಂಗಳ ರವರ ಮನೆಯ ಹತ್ತಿರ ನಿಮ್ಮ ವಿರುದ್ಧ ಅರೆಸ್ಟ್ ವಾರೆಂಟ್ ಇದೆ ಎಂದು, ನೀವು ಕೂಡಲೇ ನನ್ನ ಜೊತೆ ಬರಬೇಕು ಎಂದು ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಅನುಚಿತವಾಗಿ ವರ್ತಿಸಿ, ಶ್ರೀಮತಿ ಮಂಗಳ ರವರು ಒಬ್ಬಂಟಿಗಳಾಗಿ ಮನೆಯಲ್ಲಿ ಇರುವಾಗ ಅಕ್ರಮವಾಗಿ ಮನೆಗೆ ನುಗ್ಗಿ ಗಲಾಟೆ ಮಾಡಿ ಅಕ್ರಮ ಹಣ ವಸೂಲಿಗೆ ಪ್ರಯತ್ನಿಸಿದ್ದು, ಸಮವಸ್ತ್ರ ಧರಿಸಿ ಅರೆಸ್ಟ್ ವಾರೆಂಟ್ ನೆಪ ಒಡ್ಡಿ ಶ್ರೀಮತಿ ಮಂಗಳ ರವರಿಗೆ ಮಾನಸಿಕವಾಗಿ, ಸಾಮಾಜಿಕವಾಗಿ, ವೈಯುಕ್ತಿಕವಾಗಿ ಹಿಂಸೆ ನೀಡಿರುವುದಲ್ಲದೆ ಒಬ್ಬ ಮಹಿಳೆ ಎನ್ನುವ ದೃಷ್ಟಿಯಿಲ್ಲದೆ ಹಾಗೂ ಶಿವಳ್ಳಿ ಪೊಲೀಸ್ ಠಾಣೆಯಿಂದ ಯಾವುದೇ ಆದೇಶ ಇಲ್ಲದೆ ಶ್ರೀಮತಿ ಮಂಗಳ ರವರ ಮನೆಯ ಹತ್ತಿರ ಹೋಗಿ ಅಧಿಕಾರ ದುರುಪಯೋಗಪಡಿಸಿಕೊಂಡು ಇಲಾಖೆಗೆ ಕಳಂಕ ಬರುವ ರೀತಿಯಲ್ಲಿ ದುರ್ನಡತೆ ಮತ್ತು ಅಶಿಸ್ತು ಪ್ರದರ್ಶಿಸಿ ಇಲಾಖೆಯ ಪ್ರತಿಷ್ಠೆಗೆ ಕಳಂಕ ಹಚ್ಚಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 07–5–2011ರ ಆದೇಶದಲ್ಲಿ ಅರ್ಜಿದಾರರ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಯನ್ನು

ನಂತರದ ವಾರ್ಷಿಕ ವೇತನ ಬಡ್ತಿಯ ಮೇಲೆ ಪರಿಣಾಮ ಬೀರುವಂತೆ ಮುಂದೂಡಲಾಗಿದೆ, ದಿನಾಂಕ: 30–3–10 ರಿಂದ 07–5–10ರ ವರೆಗಿನ ಒಟ್ಟು 39 ದಿನಗಳ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 30–9–2011ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕರ್ತವ್ಯದಲ್ಲಿ ದುರ್ನಡತೆ ಮತ್ತು ಅಶಿಸ್ತು ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 137 ಪೊಸಿಅ 2011 ಬೆಂಗಳೂರು, ದಿನಾಂಕ: 22–5–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ವಿ. ತಿಮ್ಮೇಗೌಡ, ಸಿ.ಹೆಚ್.ಸಿ.–240, ಮದ್ದೂರು ಪೊಲೀಸ್ ಠಾಣೆ, ಮದ್ದೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ. ನಿಂಗಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಪೊಲೀಸ್ ಸೇವೆಗಳು–ಬಿ)

ಪಿ.ಆರ್. 1496

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಬಿ. ನಿಂಗಪ್ಪ, ಸಿ.ಹೆಚ್.ಸಿ. ಸೊರಬ ಪೊಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ ಮತ್ತು ಶ್ರೀ ಆರ್. ದೂದ್ಯಾನಾಯ್ಕ, ಸಿ.ಪಿ.ಸಿ., ಶಿಕಾರಿಪುರ ಟೌನ್ ಪೊಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ, ಇವರುಗಳು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1) ಶಿಸ್ತು ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ: ಅಪೀಲು(1)14/2007–08 (ಓ.ಬಿ. ಸಂಖ್ಯೆ: 27/2010–11) ದಿನಾಂಕ: 14–10–2010
2) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 07–01–2011 ಮತ್ತು 20–01–2011
3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(1)14/2007–08 ದಿನಾಂಕ: 16–8–2011

ಪ್ರಸ್ತಾವನೆ:

ಶ್ರೀ ನಿಂಗಪ್ಪ, ಸಿ.ಹೆಚ್.ಸಿ. ಮತ್ತು ಶ್ರೀ ದೂದ್ಯಾನಾಯ್ಕ, ಸಿ.ಪಿ.ಸಿ. ಇವರುಗಳು ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಅಕ್ರಮ ಸಂಭಾವನೆಯನ್ನು ಪಡೆಯಲು ಸಹಕರಿಸಿ, ಅಧಿಕಾರವನ್ನು ದುರುಪಯೋಗ–ಪಡಿಸಿಕೊಂಡು ಕರ್ತವ್ಯದಲ್ಲಿ ಅತೀವ ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಇನ್ಕ್ವೋರ್ವ ಅಧಿಕಾರಿಯೊಂದಿಗೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 6 ರಡಿ 8 ರೊಂದಿಗೆ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

ಶ್ರೀ ನಿಂಗಪ್ಪ, ಸಿ.ಹೆಚ್.ಸಿ.–669, ಶಿರಾಳಕೊಪ್ಪ ಪೊಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ, ಇವರ ವಿರುದ್ಧ:–

"ಶ್ರೀ ನಿಂಗಪ್ಪ, ಸಿ.ಹೆಚ್.ಸಿ.–669, ಆದ ನೀವು ಈ ಹಿಂದೆ ಶಿರಾಳಕೊಪ್ಪ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೀರಿ. ದಿನಾಂಕ: 24–7–06 ರಂದು ಶ್ರೀಮತಿ ಕುಸುಮಾಬಾಯಿ, ತಂದೆ ಸೋಮ್ಲನಾಯ್ಕ ರಾಗಿಕೊಪ್ಪ ತಾಂಡ, ಶಿಕಾರಿಪುರ ತಾಲ್ಲೂಕು ಇವರು ಶ್ರೀ ಬಿ. ಗಂಗಾನಾಯ್ಕ ಯಾನೆ ಗಂಗಾಧರ ತಂದೆ ಗೋವಿಂದನಾಯ್ಕ,

ರಾಗಿಕೊಪ್ಪ ತಾಂಡ ಶಿಕಾರಿಪುರ ತಾಲ್ಲೂಕು ಇವರ ವಿರುದ್ಧ ನೀಡಿದ ದೂರು ಅರ್ಜಿಗೆ ಸಂಬಂಧಿಸಿದಂತೆ, ಶ್ರೀ ಬಿ. ಗಂಗಾನಾಯ್ಕ ಇವರಿಗೆ ಸಹಾಯ ಮಾಡಲು ಮತ್ತು ಕೇಸು ಇಲ್ಲದಂತೆ ಮಾಡಲು ನೀವು ಠಾಣೆಯ ಪಿ.ಎಸ್.ಐ. ಶ್ರೀ ಬಿ.ಎಸ್. ಚಂದ್ರಶೇಖರ್ ಮತ್ತು ಸಿ.ಪಿ.ಸಿ.–1151, ದೂದ್ಯಾನಾಯ್ಕ ಇವರೊಂದಿಗೆ ಸೇರಿ ಸದರಿಯವರಿಂದ ರೂ. 5,000/–ಗಳ ಅಕ್ರಮ ಸಂಭಾವನೆಗೆ ಒತ್ತಾಯಿಸಿ ನಂತರ ನಿಮಗೆ ರೂ. 300/– ಪಿ.ಎಸ್.ಐ. ರವರಿಗೆ ರೂ. 1000/– ಮತ್ತು ಸಿ.ಪಿ.ಸಿ. 1511, ದೂದ್ಯಾನಾಯ್ಕರವರಿಗೆ ರೂ. 200/–ರ ಅಕ್ರಮ ಸಂಭಾವನೆಯನ್ನು ದಿನಾಂಕ: 27–7–2006 ರಂದು ಬೆಳಿಗ್ಗೆ ತೆಗೆದುಕೊಡುವಂತೆ ಒತ್ತಾಯಿಸಿದ್ದು, ದಿನಾಂಕ: 27–7–2006 ರಂದು ಶ್ರೀ ಬಿ. ಗಂಗಾನಾಯ್ಕ ಇವರಿಂದ ರೂ. 1000/–ಗಳ ಅಕ್ರಮ ಸಂಭಾವನೆಯನ್ನು ಪಿ.ಎಸ್.ಐ. ರವರು ಅವರ ವಾಸದ ಮನೆಯಲ್ಲಿ ಕೇಳಿ ಪಡೆದಿದ್ದು, ಈ ಆರೋಪದ ಮೇಲೆ ಶಿವಮೊಗ್ಗ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದಾಖಲಾದ ಗುನ್ನೆ ನಂ.6/06 ಕಲಂ 7, 13, (1)(ಡಿ)ರೆ.ವಿ. 13(2) ಲಂಚ ನಿರೋಧಕ ಕಾಯ್ದೆ 1988ರ ಪ್ರಕರಣದಲ್ಲಿ ಪಿ.ಎಸ್.ಐ. ರವರು ಅಕ್ರಮ ಸಂಭಾವನೆಯನ್ನು ಪಡೆಯಲು ಸಹಕರಿಸಿರುವುದಲ್ಲದೇ, ನೀವು ಈ ಪ್ರಕರಣದಲ್ಲಿ ಆರೋಪಿಯಾಗಿರುತ್ತೀರಿ. ಸರ್ಕಾರಿ ನೌಕರರಾದ ನೀವು ದೂರು ಅರ್ಜಿಗೆ ಸಂಬಂಧಿಸಿದಂತೆ ಶ್ರೀ ಗಂಗಾನಾಯ್ಕ ಇವರಿಗೆ ಸರ್ಕಾರಿ ಕೆಲಸದಲ್ಲಿ ನಿಮ್ಮ ಅಧಿಕಾರದ ಪ್ರಭಾವವನ್ನು ಬೀರಿ ಸಹಾಯ ಮಾಡುವ ಸಲುವಾಗಿ ಅಕ್ರಮ ಸಂಭಾವನೆಗೆ ಒತ್ತಾಯಿಸಿ ಅಕ್ರಮ ಸಂಭಾವನೆಯನ್ನು ಪಡೆಯಲು ಸಹಕರಿಸಿ, ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಕರ್ತವ್ಯದಲ್ಲಿ ಅತೀವ ದುರ್ನಡತೆಯನ್ನು ಎಸಗಿರುತ್ತೀರಿ."

ಶ್ರೀ ದೂದ್ಯಾನಾಯ್ಕ, ಸಿ.ಪಿ.ಸಿ.–1511, ಶಿರಾಳಕೊಪ್ಪ ಪೊಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ, ಇವರ ವಿರುದ್ಧ:

"ಶ್ರೀ ದೂದ್ಯಾನಾಯ್ಕ, ಸಿ.ಪಿ.ಸಿ.–1511 ಆದ ನೀವು ಈ ಹಿಂದೆ ಶಿರಾಳಕೊಪ್ಪ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೀರಿ. ದಿನಾಂಕ: 24–7–06 ರಂದು ಶ್ರೀಮತಿ ಕುಸುಮಾಬಾಯಿ, ತಂದೆ ಸೋಮ್ಲಾನಾಯ್ಕ ರಾಗಿಕೊಪ್ಪ ತಾಂಡ, ಶಿಕಾರಿಪುರ ತಾಲ್ಲೂಕು, ಇವರು ಶ್ರೀ ಬಿ. ಗಂಗಾನಾಯ್ಕ ಯಾನೆ ಗಂಗಾಧರ ತಂದೆ ಗೋವಿಂದನಾಯ್ಕ, ರಾಗಿಕೊಪ್ಪ ತಾಂಡ ಶಿಕಾರಿಪುರ ತಾಲ್ಲೂಕು ಇವರ ವಿರುದ್ಧ ನೀಡಿದ ದೂರು ಅರ್ಜಿಗೆ ಸಂಬಂಧಿಸಿದಂತೆ ಶ್ರೀ ಬಿ. ಗಂಗಾನಾಯ್ಕ ಇವರಿಗೆ ಸಹಾಯ ಮಾಡಲು ಮತ್ತು ಕೇಸು ಇಲ್ಲದಂತೆ ಮಾಡಲು ನೀವು ಠಾಣೆಯ ಪಿ.ಎಸ್.ಐ. ಶ್ರೀ ಬಿ.ಎಸ್. ಚಂದ್ರಶೇಖರ್ ಮತ್ತು ಸಿ.ಹೆಚ್.ಸಿ.–669, ಶ್ರೀ ನಿಂಗಪ್ಪ ಇವರೊಂದಿಗೆ ಸೇರಿ ಸದರಿಯವರಿಂದ ರೂ. 5,000/–ಗಳ ಅಕ್ರಮ ಸಂಭಾವನೆಗೆ ಒತ್ತಾಯಿಸಿ ನಂತರ ನಿಮಗೆ ರೂ. 200/– ಪಿ.ಎಸ್.ಐ. ರವರಿಗೆ ರೂ. 1000/– ಮತ್ತು ಸಿ.ಹೆಚ್.ಸಿ. ರವರಿಗೆ ರೂ. 300/–ರ ಅಕ್ರಮ ಸಂಭಾವನೆಯನ್ನು ದಿನಾಂಕ: 27–7–2006 ರಂದು ಬೆಳಿಗ್ಗೆ ತಂದುಕೊಡುವಂತೆ ಒತ್ತಾಯಿಸಿದ್ದು ದಿನಾಂಕ: 27–7–2006 ರಂದು ಶ್ರೀ ಬಿ. ಗಂಗಾನಾಯ್ಕ ಇವರಿಂದ ರೂ. 1000/–ಗಳ ಅಕ್ರಮ ಸಂಭಾವನೆಯನ್ನು ಪಿ.ಎಸ್.ಐ. ರವರು ಅವರ ವಾಸದ ಮನೆಯಲ್ಲಿ ಕೇಳಿ ಪಡೆದಿದ್ದು, ಈ ಆರೋಪದ ಮೇಲೆ ಶಿವಮೊಗ್ಗ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದಾಖಲಾದ ಗುನ್ನೆ ನಂ.6/06 ಕಲಂ 7, 13, (1)(ಡಿ) ರೆ.ವಿ. 13(2) ಲಂಚ ನಿರೋಧಕ ಕಾಯ್ದೆ 1988ರ ಪ್ರಕರಣದಲ್ಲಿ ಪಿ.ಎಸ್.ಐ. ರವರು ಅಕ್ರಮ ಸಂಭಾವನೆಯನ್ನು ಪಡೆಯಲು ಸಹಕರಿಸಿರುವುದಲ್ಲದೇ, ನೀವು ಈ ಪ್ರಕರಣದಲ್ಲಿ ಆರೋಪಿಯಾಗಿರುತ್ತೀರಿ. ಸರ್ಕಾರಿ ನೌಕರರಾದ ನೀವು ದೂರು ಅರ್ಜಿಗೆ ಸಂಬಂಧಿಸಿದಂತೆ ಶ್ರೀ ಗಂಗಾನಾಯ್ಕ, ಇವರಿಗೆ ಸರ್ಕಾರಿ ಕೆಲಸದಲ್ಲಿ ನಿಮ್ಮ ಅಧಿಕಾರದ ಪ್ರಭಾವವನ್ನು ಬೀರಿ ಸಹಾಯ ಮಾಡುವ ಸಲುವಾಗಿ ಅಕ್ರಮ ಸಂಭಾವನೆಗೆ ಒತ್ತಾಯಿಸಿ ಅಕ್ರಮ ಸಂಭಾವನೆಯನ್ನು ಪಡೆಯಲು ಸಹಕರಿಸಿ, ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಕರ್ತವ್ಯದಲ್ಲಿ ಅತೀವ ದುರ್ನಡತೆಯನ್ನು ಎಸಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಇವರುಗಳ ವಿರುದ್ಧದ ಆರೋಪವು ಸಾಬೀತಾಗಿರುವುದಿಲ್ಲವೆಂದು ಸಲ್ಲಿಸಿದ ವರದಿಯನ್ನು ಒಪ್ಪದ ಶಿಸ್ತು ಪ್ರಾಧಿಕಾರವು ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 14–10–2010ರ ಆದೇಶದಲ್ಲಿ ಅರ್ಜಿದಾರರುಗಳ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ ಮುಂದೂಡಲಾಗಿದೆ ಹಾಗೂ ದಿನಾಂಕ: 27–7–2006 ರಿಂದ 01–3–2007ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ಕರ್ತವ್ಯ ನಿರ್ವಹಿಸುತ್ತಿದ್ದಾಗ ಅಕ್ರಮ ಸಂಭಾವನೆಯನ್ನು ಪಡೆಯಲು ಸಹಕರಿಸಿ, ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಕರ್ತವ್ಯದಲ್ಲಿ ಅತೀವ ದುರ್ನಡತೆ ಪ್ರದರ್ಶಿಸಿರುವುದನ್ನು

ಗಮನಿಸಲಾಗಿದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 17 ಪೊಸಿಅ 2011 ಬೆಂಗಳೂರು, ದಿನಾಂಕ: 22–5–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ನಿಂಗಪ್ಪ, ಸಿ.ಹೆಚ್.ಸಿ. ಸೊರಬ ಪೊಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ ಮತ್ತು ಶ್ರೀ ದೂದ್ಯಾನಾಯ್ಕ, ಸಿ.ಪಿ.ಸಿ., ಶಿಕಾರಿಪುರ ಟೌನ್ ಪೊಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ, ಇವರುಗಳು ಸರ್ಕಾರಕ್ಕೆ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ. ನಿಂಗಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಪೊಲೀಸ್ ಸೇವೆಗಳು–ಬಿ)

ಪಿ.ಆರ್. 1493

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಎ. ಗಂಗಯ್ಯ ಎ.ಎಸ್.ಐ., ದೊಡ್ಡಬಳ್ಳಾಪುರ ಟೌನ್ ಪೊಲೀಸ್ ಠಾಣೆ, ಬೆಂಗಳೂರು ಜಿಲ್ಲೆ, ಮತ್ತು ಶ್ರೀ ಸಿ. ಶಂಕರಲಿಂಗಯ್ಯ ಹೆಚ್.ಸಿ., ಚನ್ನಪಟ್ಟಣ ಟೌನ್ ಪೊಲೀಸ್ ಠಾಣೆ, ರಾಮನಗರ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ರಾಮನಗರ ಜಿಲ್ಲೆ, ಇವರ ಆದೇಶ ಸಂಖ್ಯೆ: ಸಿಬ್ಬಂದಿ(2)ಶಿಕ್ಷೆ/45/2008 (ಓ.ಬಿ. ಸಂಖ್ಯೆ: 258/2010) ದಿನಾಂಕ: 20–12–2010

2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು,
(i) ಸಂಖ್ಯೆ: ಅಪೀಲು66/ಶಿಕ್ಷೆ/2010–11 (ಓ.ಬಿ. ಸಂಖ್ಯೆ: 47/2011–12) ದಿನಾಂಕ: 03–10–2011
(ii) ಸಂಖ್ಯೆ: ಅಪೀಲು67/ಶಿಕ್ಷೆ/2010–11 (ಓ.ಬಿ. ಸಂಖ್ಯೆ: 66/2011–12) ದಿನಾಂಕ: 12–10–2011

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 20–10–2011

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)52/2011–12 ದಿನಾಂಕ: 24–3–2012

ಪ್ರಸ್ತಾವನೆ:

ಶ್ರೀ ಎ. ಗಂಗಯ್ಯ ಎ.ಎಸ್.ಐ ಮತ್ತು ಶ್ರೀ ಸಿ. ಶಂಕರಲಿಂಗಯ್ಯ ಹೆಚ್.ಸಿ. ಇವರು ರಾಮನಗರ ಜಿಲ್ಲೆಯ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ಮತ್ತು 8 ರಡಿ ಜಂಟಿ ಇಲಾಖಾ ವಿಚಾರಣೆ ಆದೇಶಿಸಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

> "ಶ್ರೀ ಗಂಗಯ್ಯ ಎ.ಎಸ್.ಐ. ಹಾಲಿ ರಾಮನಗರ ಟೌನ್ ಪೊಲೀಸ್ ಠಾಣೆ ಆದ ನೀವು ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವಾಗ್ಗೆ ಗುರುವಾಬೋವಿ ಪಾಳ್ಯದ ಕೃಷ್ಣಪ್ಪ ಬಿನ್ ಗುರುವಾಬೋವಿ ಎಂಬವರ ಎನ್.ಸಿ.ಆರ್. 120/07ರ ದೂರನ್ನು ಪ್ರಕರಣ ದಾಖಲಿಸಿ ಪ್ರ.ವ. ವರದಿ ನೀಡಲು 500 ರೂ. ಲಂಚದ ಹಣಕ್ಕಾಗಿ ಕೃಷ್ಣಪ್ಪರವರಿಗೆ ಒತ್ತಾಯ ಮಾಡಿದ್ದು, ಈ ಬಗ್ಗೆ ಲಂಚ ಕೊಡಲು ಮನಸ್ಸಿಲ್ಲದ ಕಾರಣ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿ ದಿನಾಂಕ: 21–05–2007 ರಂದು ಸಂಜೆ 6–30 ಗಂಟೆಯಲ್ಲಿ ಕೃಷ್ಣಪ್ಪನ ಕಡೆಯಿಂದ ಲಂಚದ ಹಣ ಪಡೆಯುವಾಗ್ಗೆ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದು, ಈ ಬಗ್ಗೆ ಲೋಕಾಯುಕ್ತ ಪೊಲೀಸ್ ಠಾಣೆ ಮೊ.ಸಂ. 08/07 ಕಲಂ 7, 13(1)(ಡಿ) ಜೊತೆಗೆ 13(2) ಲಂಚ ನಿರ್ಮೂಲನ ಕಾಯ್ದೆ 1988 ರೀತ್ಯಾ ಪ್ರಕರಣ ದಾಖಲಿಸಿರುತ್ತಾರೆ. ಈ ಬಗ್ಗೆ ನೀವು ಸಾರ್ವಜನಿಕ ಕರ್ತವ್ಯದಲ್ಲಿ ದುರ್ನಡತೆ ತೋರ್ಪಡಿಸಿರುತ್ತಾರೆಂತ ನಿಮ್ಮ ವಿರುದ್ಧ ಆರೋಪವಾಗಿರುತ್ತದೆ.

ಶ್ರೀ ಶಂಕರಲಿಂಗಯ್ಯ, ಹೆಚ್.ಸಿ. 679, ಹಾಲಿ ಎಂ.ಕೆ. ದೊಡ್ಡಿ ಪೊಲೀಸ್ ಠಾಣೆ ಆದ ನೀವು ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವಾಗ್ಗ ಗುರುವಾಬೋವಿ ಪಾಳ್ಯದ ಕೃಷ್ಣಪ್ಪ ಬಿನ್ ಗುರುವಬೋವಿ ಎಂಬವರ ಎನ್.ಸಿ.ಆರ್. 120/07ರ ದೂರನ್ನು ಕೇಸು ದಾಖಲಿಸಿ ಪ್ರ.ವ. ವರದಿ ನೀಡಲು 300 ರೂ. ಲಂಚದ ಹಣಕ್ಕಾಗಿ ಕೃಷ್ಣಪ್ಪರವರಿಗೆ ಒತ್ತಾಯ ಮಾಡಿದ್ದು, ಈ ಬಗ್ಗೆ ಲಂಚಕೊಡಲು ಮನಸ್ಸಿಲ್ಲದ ಕಾರಣ ಲೋಕಾಯುಕ್ತ ಪೊಲೀಸರಿಗೆ ಕೃಷ್ಣಪ್ಪ ದೂರು ನೀಡಿದ್ದು, ದಿ: 21-05-2007 ರಂದು ಸಂಜೆ 6-30 ಗಂಟೆಯಲ್ಲಿ ಕೃಷ್ಣಪ್ಪನ ಕಡೆಯಿಂದ ಲಂಚದ ಹಣ ಪಡೆಯುವಾಗ್ಗೆ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದು ಈ ಬಗ್ಗೆ ಲೋಕಾಯುಕ್ತ ಪೊಲೀಸ್ ಠಾಣೆ ಮೊ.ಸಂ 08/07 ಕಲಂ 7, 13(1)(ಡಿ) ಜೊತೆಗೆ 13(2) ಲಂಚ ನಿರ್ಮೂಲನ ಕಾಯ್ದೆ 1988 ರೀತ್ಯಾ ಪ್ರಕರಣ ದಾಖಲಿಸಿರುತ್ತಾರೆ. ಈ ಬಗ್ಗೆ ನೀವು ಸಾರ್ವಜನಿಕ ಕರ್ತವ್ಯದಲ್ಲಿ ದುರ್ನಡತೆ ತೋರ್ಪಡಿಸಿರುತ್ತಾರೆಂತ ನಿಮ್ಮ ವಿರುದ್ಧ ಆರೋಪವಾಗಿರುತ್ತದೆ."

ಮೇಲ್ಕಂಡ ಆರೋಪದ ಮೇಲೆ ಜಂಟಿ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ರಾಮನಗರ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 20-12-2010ರ ಆದೇಶದಲ್ಲಿ ಶ್ರೀ ಎ. ಗಂಗಯ್ಯ ಎ.ಎಸ್.ಐ. ಇವರನ್ನು ಎ.ಎಸ್.ಐ. ಹುದ್ದೆಯಿಂದ ಸಿ.ಹೆಚ್.ಸಿ. ಹುದ್ದೆಗೆ ಹಾಗೂ ಶ್ರೀ ಸಿ. ಶಂಕರಲಿಂಗಯ್ಯ ಸಿ.ಹೆಚ್.ಸಿ. ಇವರನ್ನು ಸಿ.ಹೆಚ್.ಸಿ. ಹುದ್ದೆಯಿಂದ ಸಿ.ಪಿ.ಸಿ. ಹುದ್ದೆಗೆ ಒಂದು ವರ್ಷಕಾಲ ಹಿಂಬಡ್ತಿಗೊಳಿಸಲಾಗಿದೆ ದಿನಾಂಕ: 07-06-07 ರಿಂದ 04-10-07 ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 03-10-2011 ಹಾಗೂ 12-10-2011ರ ಆದೇಶಗಳಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕರ್ತವ್ಯದಲ್ಲಿ ದುರ್ನಡತೆ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 117 ಪೊಸಿಅ 2011 ಬೆಂಗಳೂರು, ದಿನಾಂಕ: 22-5-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎ. ಗಂಗಯ್ಯ ಎ.ಎಸ್.ಐ., ದೊಡ್ಡಬಳ್ಳಾಪುರ ಟೌನ್ ಪೊಲೀಸ್ ಠಾಣೆ, ಬೆಂಗಳೂರು ಜಿಲ್ಲೆ, ಮತ್ತು ಶ್ರೀ ಸಿ. ಶಂಕರಲಿಂಗಯ್ಯ ಹೆಚ್.ಸಿ., ಚನ್ನಪಟ್ಟಣ ಟೌನ್ ಪೊಲೀಸ್ ಠಾಣೆ, ರಾಮನಗರ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ. ನಿಂಗಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು-ಬಿ)

ಪಿ.ಆರ್. 1494

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ:- ಶ್ರೀ ಜಿ.ವಿ.ನಾಯಕ್, ನಿರ್ದೇಶಕರು, (ನಿವೃತ್ತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ವಿರುದ್ಧ ಇಲಾಖಾ ವಿಚಾರಣೆ - ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ:-
1) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 34 ಎಸ್‌ಇಎನ್ 2004, ದಿನಾಂಕ: 25-11-2005.
2) ವಿಚಾರಣಾ ವರದಿ ಸಂಖ್ಯೆ:7/2005, ದಿ:2-5-2006.
3) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 34 ಎಸ್‌ಇಎನ್ 2004, ದಿನಾಂಕ: 3-3-2009.
4) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 34 ಎಸ್‌ಇಎನ್ 2004, ದಿನಾಂಕ: 26-11-2009.
5) ವಿಚಾರಣಾಧಿಕಾರಿಗಳು ಸಲ್ಲಿಸಿದ ವರದಿ ಪತ್ರ ಸಂಖ್ಯೆ: ಪ್ರಾಆಬೆ/ಸಿಬ್ಬಂದಿ-1/ಇ:ವಿವ/01/2010, ದಿನಾಂಕ:29-5-2011.

ಪ್ರಸ್ತಾವನೆ:

ಶ್ರೀ ಜಿ.ವಿ.ನಾಯಕ್, ನಿವೃತ್ತ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು 1998-99ರ ಅವಧಿಯಲ್ಲಿ ಬೆಳಗಾವಿಯಲ್ಲಿ ಉಪ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ, (1) 1998-99ನೇ ಸಾಲಿನ ವಿಶೇಷ ಶಿಕ್ಷಕರುಗಳ ನೇಮಕಾತಿಗಾಗಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆಯಾದ ನಂತರ ಪಟ್ಟಿಯಲ್ಲಿ ಆಯ್ಕೆಯಾಗದ 5 ಮಂದಿ ಅಭ್ಯರ್ಥಿಗಳಿಂದ ಮೂಲ ಅರ್ಜಿಯೊಡನೆ ಸಲ್ಲಿಸದಿದ್ದ ಅಂಕಪಟ್ಟಿ ಹಾಗೂ ಮೀಸಲಾತಿ ಪ್ರಮಾಣ ಪತ್ರಗಳನ್ನು ಪಡೆದು ನಿಯಮಗಳಿಗೆ ವಿರುದ್ದವಾಗಿ ಅಂತಿಮ ಆಯ್ಕೆ ಪಟ್ಟಿಯಲ್ಲಿ ನೇಮಕ ಮಾಡಿದ, (2)ನಿಗಧಿಪಡಿಸಿದ ವಿಶ್ವವಿದ್ಯಾಲಯಗಳ ಪದವಿಯನ್ನು ಹೊಂದದಿರುವ ಇಬ್ಬರು ಅಭ್ಯರ್ಥಿಗಳನ್ನು ಮೀಸಲಾತಿ ಗುಂಪಿನಲ್ಲಿ ಸಂಗೀತ ಶಿಕ್ಷಕರನ್ನಾಗಿ ನೇಮಕ ಮಾಡಿದ ಹಾಗೂ (3) ವಿಶೇಷ ಶಿಕ್ಷಕರುಗಳಾಗಿ ನೇಮಕಾತಿ ಅಗದ 6 ಮಂದಿ ಅಭ್ಯರ್ಥಿಗಳಿಗೆ ಕೌನ್ಸೆಲಿಂಗ್ ಮೂಲಕ ಈಗಾಗಲೇ ನೀಡಲಾಗಿದ್ದ ಸ್ಥಳ ನಿಯುಕ್ತಿ ಆದೇಶವನ್ನು ಬೇಕಾಬಿಟ್ಟಿ ಮಾರ್ಪಾಡು ಮಾಡಿದ ಮೂರು ಆರೋಪಗಳಿಗಾಗಿ ಅವರ ವಿರುದ್ದ ಮೇಲೆ ಓದಲಾದ ಕ್ರ.ಸಂ.-1ರ ಆದೇಶದನ್ವಯ ವಿಚಾರಣೆ ನಡೆಸಿದ ವಿಚಾರಣಾಧಿಕಾರಿಯವರಾದ ಶ್ರೀ ಎಂ.ಡಿ.ಶೀಲವಂತ, ನಿವೃತ್ತ ನ್ಯಾಯಾಧೀಶರು ಆರೋಪಗಳು ಸಾಬೀತಾಗಿಲ್ಲವೆಂದು ತಿಳಿಸಿ ಸಲ್ಲಿಸಿದ ಓದಲಾದ ಕ್ರ.ಸಂ.(2)ರ ವಿಚಾರಣಾ ವರದಿಯನ್ನು ಪರಿಶೀಲಿಸಿದ ನಂತರ ವಿಚಾರಣಾ ವರದಿಯಲ್ಲಿನ ನಿರ್ಣಯವನ್ನು ಒಪ್ಪಿಕೊಳ್ಳದೇ ಕ್ರ.ಸಂ.(3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಪ್ರಕರಣವನ್ನು ಮರು ವಿಚಾರಣೆಗಾಗಿ ವಿಚಾರಣಾಧಿಕಾರಿಗಳಿಗೆ ಹಿಂದಿರುಗಿಸಲಾಗಿತ್ತು.

ಶ್ರೀ ಎಂ.ಡಿ ಶೀಲವಂತ ನಿವೃತ್ತ ನ್ಯಾಯದೀಶರು, ದಿನಾಂಕ:02-07-2009ರಲ್ಲಿ ಪತ್ರ ಬರೆದು ವೃದ್ಯಾಪ್ಯ ಮತ್ತು ಹದಗೆಟ್ಟ ಆರೋಗ್ಯ ಪರಿಸ್ಥಿತಿಯಿಂದಾಗಿ ಈ ವಿಚಾರಣೆಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿದ ಹಿನ್ನೆಲೆಯಲ್ಲಿ ಪ್ರಕರಣದ ಮರು ವಿಚಾರಣೆ ನಡೆಸಲು ಮೇಲೆ ಓದಲಾದ ಕ್ರ.ಸಂ.(4)ರ ಸರ್ಕಾರಿ ಆದೇಶದಲ್ಲಿ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು

ಮೇಲೆ ಕ್ರ.ಸಂ.(5)ರಲ್ಲಿ ಓದಲಾದ ದಿನಾಂಕ:29-5-2011ರಂದು ಸಲ್ಲಿಸಿದ ವಿಚಾರಣಾ ವರದಿಯಲ್ಲಿ ಶ್ರೀ ಜಿ.ವಿ.ನಾಯಕ್, ನಿವೃತ್ತ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ವಿರುದ್ದದ 3 ಅರೋಪಗಳಲ್ಲಿ 1ನೇ ಆರೋಪವು ಪೂರ್ಣ ಸಾಬೀತಾಗಿರುತ್ತದೆ ಹಾಗೂ 3ನೇ ಆರೋಪವು ಭಾಗಶ: ಸಾಭೀತಾಗಿರುತ್ತದೆ ಮತ್ತು 2ನೇ ಆರೋಪವು ಸಾಬೀತಾಗಿರುವುದಿಲ್ಲ ಎಂದು ತಿಳಿಸಿದ್ದು ಸಾಬೀತಾಗಿರುವ ಆರೋಪಗಳ ಬಗ್ಗೆ ಈ ಕೆಳಕಂಡ ನಿರ್ಣಯ ನೀಡಿದ್ದಾರೆ.

ಆರೋಪ-(1) : 1998-99ನೇ ಸಾಲಿನ ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ ವಿಭಾಗದ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ವಿಶೇಷ ಶಿಕ್ಷಕರ ನೇಮಕಾತಿಯನ್ನು ವಿಭಾಗ ಮಟ್ಟದಲ್ಲಿ ಮಾಡುವ ಸಂಬಂಧ ಸರ್ಕಾರದ ಆದೇಶ ದಿ:13-6-2001ರನ್ವಯ 26-11-99ಕ್ಕಿಂತ ಮುಂಚಿತವಾಗಿಯೇ ನೇರ ನೇಮಕಾತಿ ಆಯ್ಕೆ ಪ್ರಕ್ರಿಯೆಯನ್ನು ಆರಂಭಿಸಿದ್ದು, ಅದನ್ನು ಪೂರ್ಣಗೊಳಿಸದೇ ಇದ್ದಲ್ಲಿ ಅದನ್ನು ಯಾವ ಹಂತದಲ್ಲಿ ನಿಲ್ಲಿಸಲಾಗಿತ್ತೋ **ಆ ಹಂತದಿಂದ ಮುಂದುವರಿಸಿ ಪೂರ್ಣಗೊಳಿಸ ತಕ್ಕದ್ದು ಅಂಥಾ ಇರುತ್ತದೆ.** ಅಂದರೆ 26-3-99ರ ಅಧಿಸೂಚನೆಯಂತೆ ಪಡೆದ ಅರ್ಜಿಗಳನ್ನು ಪರಿಶೀಲಿಸಲು ಕ್ರಮ ಜರುಗಿಸಬೇಕೆ ಹೊರತು ಹೊಸ ಅರ್ಜಿಗಳನ್ನು ಪರಿಶೀಲಿಸಲು ಅವಕಾಶವಿರುವುದಿಲ್ಲ ಹಾಗೂ ಈ ಹಿಂದೆ ಸಲ್ಲಿಸಿದ ದಾಖಲೆಗಳನ್ನು ಮಾತ್ರ ಪರಿಶೀಲಿಸಬೇಕಾಗುತ್ತದೆ. ಹೊಸ ದಾಖಲೆಗಳನ್ನು ಪಡೆದು ಪರಿಶೀಲಿಸಲು ಅವಕಾಶವಿರುವುದಿಲ್ಲ, ಪ್ರಸ್ತುತ 5 ಜನ ಶಿಕ್ಷಕರ ನೇಮಕಾತಿಯಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಹಿಂದಿನ ಅಧಿಕಾರಿಗಳು ತಪ್ಪು ದಾಖಲೆ ನಮೂದಿಸಿದ್ದಾಗ್ಯೂ ಕೂಡ ಅದನ್ನು ಸರಿಪಡಿಸಲು ಕ್ರಮ ಜರುಗಿಸಬಾರದಾಗಿತ್ತು ಏಕೆಂದರೆ ಹಿಂದಿನ ಅಧಿಕಾರಿಗಳು ತಯಾರಿಸಿ ಪ್ರಸಿದ್ದಿಸಿದ ಪಟ್ಟಿಗೆ ಸಲ್ಲಿಸಲಾದ ಆಕ್ಷೇಪಣೆಗಳ ಬಗ್ಗೆ ಮಾತ್ರ ಈಗ ಕ್ರಮ ಜರುಗಿಸಬೇಕಾಗಿದ್ದು, **ಆಯ್ಕೆ ಪಟ್ಟಿ ಸರಿಪಡಿಸಲು ಕ್ರಮ ಜರುಗಿಸಲು ಅವಕಾಶವಿರುವುದಿಲ್ಲ.** ಆಯ್ಕೆಯಾದ ಪಟ್ಟಿಯಲ್ಲಿನ ಅಭ್ಯರ್ಥಿ ಮೃತರಾದಲ್ಲಿ ಸದರಿ ಹುದ್ದೆಯನ್ನು ಪುನ: ಅಧಿಸೂಚಿಸಿ ಹುದ್ದೆ ಭರ್ತಿ ಮಾಡಲು ಕ್ರಮ ಜರುಗಿಸಬೇಕಾಗುತ್ತದೆಯೇ ವಿನ: ನಂತರದ ಅಭ್ಯರ್ಥಿಯನ್ನು ಆಯ್ಕೆ ಮಾಡಿ ನೇಮಕಾತಿ ಮಾಡುವಂತಿಲ್ಲ. ಆದರೆ ಆಪಾಧಿತ ಅಧಿಕಾರಿ ಆಯ್ಕೆ ಪಟ್ಟಿಯನ್ನೆ ಸರಿಪಡಿಸಲು ಕ್ರಮ ಜರುಗಿಸಿರುವುದು ಕಂಡುಬಂದಿದ್ದು ಇದು ಸರಿಯಾದ ಕ್ರಮವಾಗಿರುವುದಿಲ್ಲ. ಈಗಾಗಲೇ ಸಿದ್ದಪಡಿಸಿದ ಆಯ್ಕೆ ಪಟ್ಟಿಗೆ ಸಲ್ಲಿಸಿದ **ಆಕ್ಷೇಪಣೆಗಳನ್ನು ಮಾತ್ರ ಪರಿಶೀಲಿಸಲು ನಿರ್ದೇಶನ ನೀಡಿದ್ದು,** ಆಯ್ಕೆ ಪಟ್ಟಿಯಲ್ಲಿನ ನ್ಯೂನತೆಗಳನ್ನು ಸರಿಪಡಿಸಲು ಆಪಾದಿತ ಅಧಿಕಾರಿ ನಿರ್ದೇಶನ ನೀಡಿದ್ದರಿಂದ ಆಪಾದಿತ ಸರ್ಕಾರಿ ಅಧಿಕಾರಿಯ ಈ ಕ್ರಮ ಸರಕಾರದ ನಿರ್ದೇಶನಕ್ಕೆ ವ್ಯತಿರಿಕ್ತವಾದ ಕ್ರಮವಾಗಿರುವುದರಿಂದ ಈ ಆಪಾದನೆಯು ಸಿದ್ದವಾಗಿದೆ ಎಂದು ಪರಿಗಣಿಸಬಹುದಾಗಿದೆ.

ಆರೋಪ-(3) : ಕೌನ್ಸೆಲಿಂಗ್ ಮಾಡುವಾಗ ಹಿಂದೆ ಪಡೆದ ಮಾಹಿತಿ ಆಧಾರದ ಮೇಲೆ ವರ್ಗಾವಣೆ ಮಾಡಿರುವುದಾಗಿ ಕಂಡುಬರುತ್ತದೆ. ಸದರಿ ಹುದ್ದೆಗಳು ಬೇರೆ ಬೇರೆ ಕಾರಣಗಳಿಂದಾಗಿ ಭರ್ತಿ ಮಾಡಿದ್ದಲ್ಲಿ ಕಾರ್ಯಾಲಯದ ಸಿಬ್ಬಂದಿ/ ಅಧೀಕ್ಷಕರು/ ಮೇಲ್ವಿಚಾರಕರು ವಿವರಗಳನ್ನು ಸರಿಪಡಿಸಿ, ಮೇಲಧಿಕಾರಿಗೆ ಅಂತಿಮ ಆದೇಶ ಕುರಿತು ಮಂಡಿಸಬೇಕಾಗಿದ್ದು, ಸದರಿಯವರ ಕರ್ತವ್ಯವಾಗಿರುತ್ತದೆ. ಈ ಪ್ರಕರಣದಲ್ಲಿ ಆಪಾದಿತ ಸರ್ಕಾರಿ ಅಧಿಕಾರಿಯವರೊಬ್ಬರನ್ನೇ ತಪ್ಪುಮಾಡಿರುತ್ತಾರೆಂದು ಪರಿಗಣಿಸಿರುವುದು ಸಮಂಜಸವಾಗಿರುವುದಿಲ್ಲ. ಕೌನ್ಸೆಲಿಂಗ್ ಸಂದರ್ಭದಲ್ಲಿ ಖಾಲಿ ಹುದ್ದೆಗಳ ವಿವರಗಳನ್ನು ಸರಿಯಾಗಿ ಪಡೆದು ಸಲ್ಲಿಸುವುದು ಕಾರ್ಯಾಲಯದ ಸಿಬ್ಬಂದಿ ಕಾರ್ಯವಾಗಿದ್ದು, ಖಾಲಿ ಹುದ್ದೆಗಳ ಸಮಕ್ಷಮ ಕೋರಿಕೆಯನ್ವಯ ವರ್ಗಾವಣೆಗೆ ಆದೇಶ ನೀಡುವುದು ಮುಖ್ಯಸ್ಥರ ಕಾರ್ಯವಾಗಿರುತ್ತದೆ. ಪ್ರಸ್ತುತ ಆಪಾದಿತ ಅಧಿಕಾರಿ ಕೌನ್ಸೆಲಿಂಗ್ ಮಾಡುವಾಗ ಕಾರ್ಯಾಲಯದಲ್ಲಿ ಸಿದ್ಧಪಡಿಸಿದ ಯಾದಿ ಸಮಂಜಸವೋ ಹೇಗೆ? ಎಂಬುದನ್ನು ಪರಿಶೀಲಿಸಬೇಕಾಗಿತ್ತು ಹಾಗೂ ಹುದ್ದೆಗಳು ಖಾಲಿ ಇರುವ ಬಗ್ಗೆ ತಿಳಿಯಲು

ಕ್ರಮ ಜರುಗಿಸಬೇಕಾಗಿತ್ತು. ಸಿಬ್ಬಂದಿ ತಯಾರಿಸಿದ ಖಾಲಿ ಹುದ್ದೆಗಳ ವಿವರಗಳನ್ನು ಪರಿಶೀಲಿಸದೇ ಸ್ಥಳ ನಿಯುಕ್ತಿಗೊಳಿಸಿದ್ದರಿಂದ ಆ ಆಪಾದನೆ ಭಾಗಶ: ಸಿದ್ಧವಾಗುತ್ತದೆ ಎಂದು ಅಭಿಪ್ರಾಯಪಡೆಲಾಗಿದೆ.

ಸದರಿ ವಿಚಾರಣಾ ವರದಿಯನ್ನು ಲಗತ್ತಿಸಿ ಆರೋಪಿತ ಅಧಿಕಾರಿಗೆ 2ನೇ ಕಾರಣ ಕೇಳುವ ನೋಟೀಸ್ ಜಾರಿ ಮಾಡಿದ್ದು ಆರೋಪಿತ ಅಧಿಕಾರಿಯು ನೋಟೀಸ್‌ಗೆ ಈ ಕೆಳಕಂಡಂತೆ ಉತ್ತರವನ್ನು ನೀಡಿದ್ದಾರೆ.

ಆರೋಪ-(1)ಕ್ಕೆ ಸಂಬಂಧಿಸಿದಂತೆ ಆರೋಪಿತ ನಿವೃತ್ತ ಅಧಿಕಾರಿಯು 2ನೇ ಬಾರಿಗೆ ವಿಚಾರಣೆ ನಡೆಸಿರುವ ಕುರಿತು ಕ.ನಾ.ಸೇವಾ ನಿಯಮಾವಳಿ ನಿಯಮ 11(ಎ)ರನ್ವಯ ಕಾನೂನಿಗೆ ವಿರುದ್ಧವಾಗಿರುತ್ತದೆ ಎಂದು ತಿಳಿಸಿ, ಬೆಳಗಾಂ ವಿಭಾಗದ ಸಹ ನಿರ್ದೇಶಕನಾಗಿ ದಿ:5/7/2001 ರಂದು ಕಾರ್ಯಭಾರವನ್ನು ವಹಿಸಿಕೊಂಡಿದ್ದು, ಹಿಂದಿನ ಸಹ ನಿರ್ದೇಶಕರು ಹೊರಡಿಸಿದ್ದ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆ ಕೋರಲಾಗಿದ್ದು, ಅರ್ಹ ಅಭ್ಯರ್ಥಿಗಳಿಂದ ಸ್ವೀಕರಿಸಲಾದ ಅಕ್ಷೇಪಣೆಗಳನ್ನು ಈ ಹಿಂದೆ ಗಣಕ ಯಂತ್ರಕ್ಕೆ ಅಳವಡಿಸಲಾದ ಮಾಹಿತಿಯ ಅನುಸಾರ ಪರಿಶೀಲನೆಗೆ ಒಳಪಡಿಸಿದಾಗ ಕೆಲವು ಅಭ್ಯರ್ಥಿಗಳ ಮಾಹಿತಿಯನ್ನು ಪರಿಶೀಲನಾ ಹಾಳೆಗೆ ವರ್ಗಾಯಿಸದೆ ಅಪೂರ್ಣವಾಗಿ ಗಣಕ ಯಂತ್ರಕ್ಕೆ ಅಳವಡಿಸಿಕೊಂಡಿದ್ದರ ಹಿನ್ನೆಲೆಯಲ್ಲಿ ಅಂತಹ ದಾಖಲೆಗಳನ್ನು ಪರಿಶೀಲಿಸಿ **ನ್ಯೂನ್ಯತೆಗಳನ್ನು ಸರಿಪಡಿಸಿ** ಕ್ರಮಬದ್ಧವಾಗಿ ನೇಮಕಾತಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ನಿಯಮಾನುಸಾರ ಕ್ರಮ ಕೈಗೊಂಡಿರುವುದರಿಂದ ಆರೋಪದಿಂದ ಮುಕ್ತರನ್ನಾಗಿಸುವಂತೆ ಕೋರಿದ್ದಾರೆ. ಮುಂದುವರೆದು ಆರೋಪ-(3)ಕ್ಕೆ ಸಂಬಂಧಿಸಿದಂತೆ ಯಾವುದೇ ಗ್ರೇಡ್-2 ಹುದ್ದೆಗಳಿಗೆ ಉಪ ನಿರ್ದೇಶಕರ ಹಂತದಲ್ಲಿಯೇ ವರ್ಗಾವಣೆ ಪ್ರಕ್ರಿಯೆಯು ನಡೆಯುತ್ತದೆ. ಆದುದರಿಂದ ಖಾಲಿ ಇರುವ ಹುದ್ದೆಗಳನ್ನು ವರ್ಗಾವಣೆ ಮೂಲಕ ತುಂಬಲಾಗಿದೆ. ನೇರ ನೇಮಕಾತಿ ಹುದ್ದೆಗಳನ್ನು ಇಂತಹ ಸ್ಥಳದಲ್ಲಿ ನೇಮಕಾತಿಗೊಂಡ ಅಭ್ಯರ್ಥಿಗಳನ್ನು ನೇಮಕ ಮಾಡಬೇಕೆಂಬ ಯಾವುದೇ ಷರತ್ತುಗಳಿರುವುದಿಲ್ಲ. ಶೇಕಡಾವಾರು ನೇರ ನೇಮಕಾತಿ ಹುದ್ದೆಗಳನ್ನು ಆ ಸಮಯದಲ್ಲಿ ಖಾಲಿ ಇರುವ ಸ್ಥಳಗಳಿಗೆ ತುಂಬಬೇಕಾಗುತ್ತದೆ ಎಂದು ತಿಳಿಸಿ, ತಮ್ಮನ್ನು ಆರೋಪದಿಂದ ಮುಕ್ತರನ್ನಾಗಿಸುವಂತೆ ಕೋರಿದ್ದಾರೆ.

ಆರೋಪಿತ ಅಧಿಕಾರಿಯು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿದ ಉತ್ತರವನ್ನು ಸರ್ಕಾರ ಪರಿಶೀಲಿಸಿದೆ. ಆರೋಪಿತರು ಮೇಲೆ ಪ್ರತಿಪಾದಿಸಿರುವ ಎಲ್ಲ ಅಂಶಗಳನ್ನು ಈಗಾಗಲೇ ವಿಚಾರಣಾಧಿಕಾರಿಗಳು ಪರಿಶೀಲಿಸಿರುವುದರಿಂದ ಸದರಿಯವರ ಮೇಲ್ಕಂಡ ಹೇಳಿಕೆಯನ್ನು ತಿರಸ್ಕರಿಸಿ ವಿಚಾರಣಾ ವರದಿಯನ್ನು ಒಪ್ಪಿಕೊಂಡು ಕರ್ನಾಟಕ ಲೋಕ ಸೇವಾ ಆಯೋಗದ ಸಹಮತಿಯೊಡನೆ ದಂಡನೆ ವಿಧಿಸಲು ಸರ್ಕಾರವು ನಿರ್ಣಯಿಸಿ ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 34 ಎಸ್‌ಇಎನ್ 2004, ಬೆಂಗಳೂರು, ದಿನಾಂಕ: 21-05-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಶ್ರೀ ಜಿ.ವಿ.ನಾಯಕ್, ನಿವೃತ್ತ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ವಿರುದ್ಧದ ಇಲಾಖಾ ವಿಚಾರಣೆಯಲ್ಲಿ ಸಾಭೀತಾದ/ ಭಾಗಶ: ಸಾಭೀತಾದ ಆರೋಪಗಳಿಗಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1958ರ ನಿಯಮ 214(1)(ಎ)ರನ್ವಯ ಇವರ ವಿಶ್ರಾಂತಿ ವೇತನದಲ್ಲಿ ಮಾಸಿಕ ರೂ.1,000- 00 ಗಳನ್ನು (ಒಂದು ಸಾವಿರ ರೂಪಾಯಿಗಳು ಮಾತ್ರ) ಐದು ವರ್ಷಗಳ ಅವಧಿಗೆ ಕಟಾಯಿಸುವ ದಂಡನೆಯನ್ನು ಸರ್ಕಾರ ವಿಧಿಸಿ ಆದೇಶಿಸಿದೆ.

ಈ ಆದೇಶವನ್ನು ಕರ್ನಾಟಕ ಲೋಕಾಸೇವಾ ಆಯೋಗವು ತನ್ನ ಪತ್ರ ಸಂಖ್ಯೆ:ಪಿಎಸ್‌ಸಿ 214 ಸಿಎನ್‌ಎಸ್ 2011, ದಿನಾಂಕ:09-04-2012ರಲ್ಲಿ ನೀಡಿದ ಸಹಮತಿಯೊಂದಿಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್.ಕೆ.ಲಕ್ಷ್ಮೀನಾರಾಯಣರಾವ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು.ಇ. (ಸೇವೆಗಳು-3)

ಪಿ.ಆರ್. 1500

ತೋಟಗಾರಿಕಾ ಸಚಿವಾಲಯ

ವಿಷಯ : ತೋಟಗಾರಿಕೆ ಕ್ಷೇತ್ರಗಳಲ್ಲಿ ಜಿಲ್ಲಾ ಹಾಪ್‌ಕಾಮ್ಸ್‌ಗಳ ಕಾರ್ಯ ಚಟುವಟಿಕೆಗಳಿಗೆ ಸ್ಥಳಾವಕಾಶ ನೀಡುವ ಬಗ್ಗೆ.

ಓದಲಾಗಿದೆ : 1) ವ್ಯವಸ್ಥಾಪಕ ನಿರ್ದೇಶಕರು, ಕೆ.ಹೆಚ್.ಎಫ್. ರವರ ಪತ್ರ ಸಂ:ಕೆಹೆಚ್‌ಎಫ್/527/2011-12 ದಿ. 24-11-2011, 31-12-2011, 22-09-2011

2) ತೋಟಗಾರಿಕೆ ನಿರ್ದೇಶಕರ ಪತ್ರ ಸಂಖ್ಯೆ: ED/KSHDA/AHO-2/11/2009-10 ದಿ. 06-03-2012 ಮತ್ತು 16-04-2012

ಸರ್ಕಾರದ ಆದೇಶ ಸಂಖ್ಯೆ: ತೋಇ 170 ತೋಇವಿ 2012 ಬೆಂಗಳೂರು ದಿನಾಂಕ:28–05–2012

ಪ್ರಸ್ತಾವನೆ:–

ಮೇಲೆ ಓದಲಾದ ಕ್ರ.ಸಂ:1ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕೆ ಮಾರಾಟ ಮಹಾ ಮಂಡಳ ನಿಯಮಿತ (KHF), ಬೆಂಗಳೂರು ಇವರು ಜಿಲ್ಲಾ ಹಾಪ್‌ಕಾಮ್ಸ್‌ಗಳ ಕಾರ್ಯ ಚಟುವಟಿಕೆಗಳಿಗೆ ಈ ಕೆಳಕಂಡ ಇಲಾಖಾ ಕ್ಷೇತ್ರಗಳಲ್ಲಿ ಸ್ಥಳಾವಕಾಶ ನೀಡುವಂತೆ ಕೋರಿರುತ್ತಾರೆ.

ಕ್ರ. ಸಂ.	ತೋಟಗಾರಿಕೆ ಕ್ಷೇತ್ರ	ಉದ್ದೇಶ	ಸ್ಥಳಾವಕಾಶ ನೀಡಲು ಕೋರಿರುವ ವಿಸ್ತೀರ್ಣ
1.	ತೋಉನಿ.(ಜಿಪಂ) ಕೊಪ್ಪಳ ಜಿಲ್ಲೆ ರವರ ಕಛೇರಿ ಆವರಣ	ಹಣ್ಣು ಮತ್ತು ತರಕಾರಿ ಮಾರಾಟ ಮಳಿಗೆ ನಿರ್ಮಿಸಲು	20X12 ಅಡಿ
	ಸತೋನಿ.(ಜಿಪಂ)ಕುಷ್ಟಗಿ ಕೊಪ್ಪಳ ಕಛೇರಿ ಆವರಣ	ಹಣ್ಣು ಮತ್ತು ತರಕಾರಿ ಮಾರಾಟ ಮಳಿಗೆ ನಿರ್ಮಿಸಲು	20X12 ಅಡಿ
2.	ಹಿಸತೋನಿ.(ಜಿಪಂ) ಸೋಮವಾರಪೇಟೆ ತಾ.ಕೊಡಗು ಜಿಲ್ಲೆ ರವರ ಕಛೇರಿ ಆವರಣ	ಹಣ್ಣು ಮತ್ತು ತರಕಾರಿ ಸಂಗ್ರಹಣಾ ಕೇಂದ್ರ ನಿರ್ಮಿಸಲು	20X12 ಅಡಿ
3.	ತೋಉನಿ.(ಜಿಪಂ) ರಾಯಚೂರು ಜಿಲ್ಲೆ ರವರ ಕಛೇರಿ ಆವರಣ	ಹಣ್ಣು ಮತ್ತು ತರಕಾರಿ ಸಂಗ್ರಹಣಾ ಕೇಂದ್ರ ನಿರ್ಮಿಸಲು	15X20 ಅಡಿ

ಮೇಲೆ ಕ್ರ.ಸಂ.2ರಲ್ಲಿ ಓದಲಾದ ಪತ್ರದಲ್ಲಿ ದಿ.27–01–2012 ರಂದು ನಡೆದ ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿಯ 9ನೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಹಾಪ್‌ಕಾಮ್ಸ್ ಸಂಸ್ಥೆಗೆ ಹಣ್ಣು ಮತ್ತು ತರಕಾರಿ ಸಂಗ್ರಹಣಾ ಕೇಂದ್ರ ಹಾಗೂ ಮಾರಾಟ ಮಳಿಗೆಗಳ ನಿರ್ಮಾಣಕ್ಕಾಗಿ ಸ್ಥಳಾವಕಾಶ ನೀಡುವ ಬಗ್ಗೆ ಚರ್ಚಿಸಿ, ಹಾಪ್‌ಕಾಮ್ಸ್ ಸಂಸ್ಥೆಯು ತೋಟಗಾರಿಕೆ ಇಲಾಖೆಯ ಜಾಗವನ್ನು ಉಪಯೋಗಿಸಲು ತೀರ್ಮಾನವಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೊಪ್ಪಳ, ರಾಯಚೂರು ಹಾಗೂ ಸೋಮವಾರಪೇಟೆಗಳಲ್ಲಿನ ಇಲಾಖೆಯ ಕಛೇರಿ ಆವರಣದಲ್ಲಿ ಪ್ರದೇಶವನ್ನು ಸಂಬಂಧಪಟ್ಟ ಜಿಲ್ಲಾ ಹಾಪ್‌ಕಾಮ್ಸ್ ಚಟುವಟಿಕೆಗಳಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನೀಡಲು ಆದೇಶ ಹೊರಡಿಸುವಂತೆ ತೋಟಗಾರಿಕೆ ನಿರ್ದೇಶಕರು ಕೋರಿರುತ್ತಾರೆ.

1) ಈ ಪ್ರದೇಶದ ಒಡೆತನವು ತೋಟಗಾರಿಕೆ ಇಲಾಖೆಯ ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿ ಅಧೀನದಲ್ಲಿಯೇ ಮುಂದುವರೆಯುತ್ತದೆ.

2) ಈ ಪ್ರದೇಶವನ್ನು ಸಂಸ್ಥೆಗಳು ನಿಗದಿತ ಕಾರ್ಯ ಚಟುವಟಿಕೆಗಳಿಗೆ ಹೊರತುಪಡಿಸಿ ಬೇರೆ ಯಾವುದೇ ಚಟುವಟಿಕೆಗಳಿಗೆ ಉಪಯೋಗಿಸುತ್ತಿರುವುದು ಕಂಡು ಬಂದಲ್ಲಿ ಈ ಪ್ರದೇಶವನ್ನು ವಾಪಸ್ಸು ಪಡೆಯಲಾಗುವುದು.

3) ಈ ಪ್ರದೇಶದಲ್ಲಿರುವ ಸಸ್ಯ ಸಂಪತ್ತು ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿಯ ಆಸ್ತಿಯಾಗಿದ್ದು, ಇವುಗಳನ್ನು ಯಾವುದೇ ಕಾರಣಕ್ಕೂ ನಾಶ ಮಾಡಬಾರದಾಗಿಯೂ ಹಾಗೂ ಸಸ್ಯ ಸಂಪತ್ತಿನಿಂದ ಬರುವ ಆದಾಯವು ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿಯದಾಗಿರುತ್ತದೆ.

4) ಈ ಪ್ರದೇಶವನ್ನು ಹಸ್ತಾಂತರಿಸಿಕೊಂಡ ದಿನದಿಂದ ಲೋಕೋಪಯೋಗಿ ಇಲಾಖೆಯ ನಿಯಮಾವಳಿಯಂತೆ ಆ ಪ್ರದೇಶಕ್ಕೆ ಕಾಲಕಾಲಕ್ಕೆ ಅನ್ವಯವಾಗುವ ಬಾಡಿಗೆಯನ್ನು ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿಗೆ ಪಾವತಿಸುವುದು.

ಆದೇಶ

ಪ್ರಸ್ತಾವನೆಯನ್ನು ಪರಿಶೀಲಿಸಿ ತೋಟಗಾರಿಕೆ ಇಲಾಖೆಯ ಈ ಕೆಳಕಂಡ ಕಛೇರಿಗಳ ಆವರಣದಲ್ಲಿ ಜಾಗವನ್ನು ಜಿಲ್ಲಾ ಹಾಪ್‌ಕಾಮ್ಸ್‌ಗಳ ಕಾರ್ಯ ಚಟುವಟಿಕೆಗಳಿಗೆ ಹಾಪ್‌ಕಾಮ್ಸ್ ಸಂಸ್ಥೆಗೆ ಹಣ್ಣು ಮತ್ತು ತರಕಾರಿ ಸಂಗ್ರಹಣಾ ಕೇಂದ್ರ ಹಾಗೂ ಮಾರಾಟ ಮಳಿಗೆಗಳ ನಿರ್ಮಾಣಕ್ಕಾಗಿ ಉಪಯೋಗಿಸಿಕೊಳ್ಳಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಲಾಗಿದೆ.

.ಕ್ರ.ಸಂ	ತೋಟಗಾರಿಕೆ ಕ್ಷೇತ್ರ	ಉದ್ದೇಶ	ಸ್ಥಳಾವಕಾಶ ನೀಡಲು ಕೋರಿರುವ ವಿಸ್ತೀರ್ಣ
1.	ತೋಉನಿ. (ಜಿಪಂ) ಕೊಪ್ಪಳ ಜಿಲ್ಲೆ ರವರ ಕಛೇರಿ ಆವರಣ	ಹಣ್ಣು ಮತ್ತು ತರಕಾರಿ ಮಾರಾಟ ಮಳಿಗೆ ನಿರ್ಮಿಸಲು	20X12 ಅಡಿ
	ಸತೋನಿ.(ಜಿಪಂ)ಕುಷ್ಟಗಿ ಕೊಪ್ಪಳ ಕಛೇರಿ ಆವರಣ	ಹಣ್ಣು ಮತ್ತು ತರಕಾರಿ ಮಾರಾಟ ಮಳಿಗೆ ನಿರ್ಮಿಸಲು	20X12 ಅಡಿ
2.	ಹಿಸತೋನಿ.(ಜಿಪಂ) ಸೋಮವಾರಪೇಟೆ ತಾ. ಕೊಡಗು ಜಿಲ್ಲೆ ರವರ ಕಛೇರಿ ಆವರಣ	ಹಣ್ಣು ಮತ್ತು ತರಕಾರಿ ಸಂಗ್ರಹಣಾ ಕೇಂದ್ರ ನಿರ್ಮಿಸಲು	20X12 ಅಡಿ
3.	ತೋಉನಿ.(ಜಿಪಂ) ರಾಯಚೂರು ಜಿಲ್ಲೆರವರ ಕಛೇರಿ ಆವರಣ	ಹಣ್ಣು ಮತ್ತು ತರಕಾರಿ ಸಂಗ್ರಹಣಾ ಕೇಂದ್ರ ನಿರ್ಮಿಸಲು	15X20 ಅಡಿ

1) ಈ ಪ್ರದೇಶದ ಒಡೆತನವು ತೋಟಗಾರಿಕೆ ಇಲಾಖೆಯ ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿಯ ಅಧೀನದಲ್ಲಿಯೇ ಮುಂದುವರೆಯುತ್ತದೆ.

2) ಈ ಪ್ರದೇಶವನ್ನು ಸಂಸ್ಥೆಗೆ ನೀಡಿದ ಕಾರ್ಯ ಚಟುವಟಿಕೆಗಳಿಗೆ ಮಾತ್ರ ಉಪಯೋಗಿಸಿ- ಕೊಳ್ಳತಕ್ಕದ್ದು. ಇದನ್ನು ಹೊರತುಪಡಿಸಿ ಬೇರೆ ಯಾವುದೇ ಚಟುವಟಿಕೆಗಳಿಗೆ ಉಪಯೋಗಿಸುತ್ತಿರುವುದು ಕಂಡು ಬಂದಲ್ಲಿ ಈ ಜಾಗವನ್ನು ಹಿಂದಕ್ಕೆ ಪಡೆಯಲಾಗುವುದು.

3) ಈ ಪ್ರದೇಶದಲ್ಲಿರುವ ಸಸ್ಯ ಸಂಪತ್ತು ತೋಟಗಾರಿಕೆ ಇಲಾಖೆಯ ಆಸ್ತಿಯಾಗಿದ್ದು, ಇದನ್ನು ಯಾವುದೇ ಕಾರಣಕ್ಕಾಗಿ ನಾಶ ಮಾಡಬಾರದು ಹಾಗೂ ಸಸ್ಯ ಸಂಪತಿನಿಂದ ಬರುವ ಆದಾಯವು ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿಯದಾಗಿರುತ್ತದೆ.

4) ಈ ಪ್ರದೇಶವನ್ನು ಸಂಸ್ಥೆಯು ತನ್ನ ವಶಕ್ಕೆ ಪಡೆದ ದಿನಾಂಕದಿಂದ ಲೋಕೋಪಯೋಗಿ ಇಲಾಖೆಯು ನಿಗದಿಪಡಿಸಿರುವ ನಿಯಮಗಳನ್ವಯ ಕಾಲಕಾಲಕ್ಕೆ ಅನ್ವಯವಾಗುವ ಬಾಡಿಗೆ ಮೊತ್ತವನ್ನು ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿಗೆ ಪಾವತಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಸಿ. ಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ.

ಪಿ.ಆರ್. 1544

ನಗರಾಭಿವೃದ್ಧಿ ಸಚಿವಾಲಯ

ವಿಷಯ : ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಚಿನ್ನಕೆಂಪನಹಳ್ಳಿ ಗ್ರಾಮದ ಸ.ನಂ.56ರಲ್ಲಿ 04ಎಕರೆ 31ಗುಂಟೆ, 58/1ರಲ್ಲಿ 03ಎಕರೆ 05ಗುಂಟೆ ಮತ್ತು 59/1ರಲ್ಲಿ 02ಎಕರೆ 05ಗುಂಟೆ ಒಟ್ಟು 10 ಎಕರೆ 01 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ.

ಓದಲಾಗಿದೆ : 1) ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರ ಪತ್ರದ ಸಂಖ್ಯೆ.ಬಿಎಂಆರ್‌ಡಿಎ/ಬಿಐಎಎಪಿಎ/ಸಿಎಲ್‌ಯು/30/2010-11, ದಿನಾಂಕ: 03-8-2011.

2) ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಇವರ ಪತ್ರ ಸಂ.ಬಿಐಎಎಪಿಎ/ಟಿಪಿ/ ಭೂಉಬ/16/2010-11, ದಿನಾಂಕ: 14-07-2011.

ಪ್ರಸ್ತಾವನೆ:

ಮೇಲೆ(1)ರಲ್ಲಿ ಓದಲಾದ ದಿನಾಂಕ:03–8–2011ರ ಪತ್ರದಲ್ಲಿ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಹಾಗೂ ಮೇಲೆ (2)ರಲ್ಲಿ ಓದಲಾದ ದಿನಾಂಕ:14–07–2011ರ ಪತ್ರಗಳಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಇವರು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಚಿನ್ನಕೆಂಪನಹಳ್ಳಿ ಗ್ರಾಮದ ಸ.ನಂ.56ರಲ್ಲಿ 04ಎಕರೆ 31ಗುಂಟೆ, 58/1ರಲ್ಲಿ 03ಎಕರೆ 05ಗುಂಟೆ ಮತ್ತು 59/1ರಲ್ಲಿ 02ಎಕರೆ 05ಗುಂಟೆ ಒಟ್ಟು 10 ಎಕರೆ 01 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ತೀರ್ಮಾನಿಸಿರುವುದಾಗಿ ವರದಿ ಮಾಡಿರುತ್ತಾರೆ.

ಕ್ರ.ಸಂ.	ಗ್ರಾಮ ಮತ್ತು ಹೋಬಳಿ	ವಸತಿ ಭೂ ಉಪಯೋಗ ಬದಲಾವಣೆಗೆ ಪ್ರಸ್ತಾಪಿಸಿರುವ ಜಮೀನುಗಳ ಸರ್ವೆ ನಂಬರ್‌ಗಳು	ಷರಾ
1	ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಚಿನ್ನಕೆಂಪನಹಳ್ಳಿ ಗ್ರಾಮ	ಸ.ನಂ.56ರಲ್ಲಿ 04ಎಕರೆ 31ಗುಂಟೆ, 58/1ರಲ್ಲಿ 03ಎಕರೆ 05ಗುಂಟೆ ಮತ್ತು 59/1ರಲ್ಲಿ 02ಎಕರೆ 05ಗುಂಟೆ ಒಟ್ಟು 10 ಎಕರೆ 01 ಗುಂಟೆ ವಿಸ್ತೀರ್ಣದ ಜಮೀನು	ಉಪ ವಿಭಾಗಾಧಿಕಾರಿಗಳು ದೊಡ್ಡಬಳ್ಳಾಪುರ ಉಪ ವಿಭಾಗ ಬೆಂಗಳೂರು ಇವರು ದಿನಾಂಕ: 29–8–2011ರ ಹಿಂಬರಹದಲ್ಲಿ ಚಿನ್ನಕೆಂಪನಹಳ್ಳಿ ಗ್ರಾಮದ ಸ.ನಂ.58 ಮತ್ತು 59ರ ಜಮೀನಿನ ಖಾತೆ ಸಂಬಂಧವಾಗಿ ಈ ನ್ಯಾಯಾಲಯದಲ್ಲಿ ಪ್ರಕರಣದ ಸಂ.ಆರ್‌ಎ(ದೇ):201/2011–12, ದಿನಾಂಕ:25–3–2011ರಂತೆ ಮೇಲ್ಮನವಿಯನ್ನು ಪುರಸ್ಕರಿಸಿ ಆದೇಶಿಸಿರುತ್ತದೆಂದು, ಹಾಗೂ ಸ.ನಂ.56, 58/1 ಮತ್ತು 59/1ರ ಜಮೀನಿಗೆ ಕರ್ನಾಟಕ ಭೂ ಕಂದಾಯ ಕಾಯ್ದೆ 136(2)ರ ಅಡಿಯಲ್ಲಿ ಈ ತಹಲ್‌ವರೆಗೆ ಪ್ರಕರಣ ದಾಖಲಾಗಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ. ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು ಇವರು ದಿನಾಂಕ:15–9–2011ರ ಹಿಂಬರಹಲ್ಲಿ ಚನ್ನಕೆಂಪನಹಳ್ಳಿ ಗ್ರಾಮದ ಸ.ನಂ.56ರಲ್ಲಿ 4–31 ಗುಂಟೆ, ಸ.ನಂ.58/1ರಲ್ಲಿ 3–05ಎ:ಗು, ಸ.ನಂ.59/1ರಲ್ಲಿ 2–05 ಎ:ಗು, ಒಟ್ಟು 10–01 ಎಕರೆ ವಿಸ್ತೀರ್ಣದ ಜಮೀನು ಖಾಸಗಿ ಹಿಡುವಳಿ ಜಮೀನಾಗಿರುತ್ತದೆಂದು ದೃಡೀಕರಿಸಿರುತ್ತಾರೆ.

ಪ್ರಸ್ತಾಪಿತ ಪ್ರದೇಶಗಳಲ್ಲಿ ಸ.ನಂ.56ರ ಜಮೀನು ಬೆಂಗಳೂರು ದೊಡ್ಡಬಳ್ಳಾಪುರ (ಎನ್.ಹೆಚ್–207) ಮುಖ್ಯ ರಸ್ತೆಯಿಂದ ಬರುವ ಹಾಲಿ 9 ಮೀಟರ್ ಅಗಲದ ಉಪಗಮನ ರಸ್ತೆಯಿಂದ ಸಂಪರ್ಕವನ್ನು ಹೊಂದಿದ್ದು, ಸದರಿ ರಸ್ತೆಯಿಂದ ಸ.ನಂ.56 ಮುಖಾಂತರ 58/1 ಮತ್ತು 59/1ರ ಜಮೀನಿಗೆ ಸಂಪರ್ಕ ರಸ್ತೆಯನ್ನು ಕಲ್ಪಿಸಿ, ಸ.ನಂ.56, 58/1, 59/1ರ ಜಮೀನುಗಳಲ್ಲಿ ಒಟ್ಟಾರೆಯಾಗಿ ವಿನ್ಯಾಸವನ್ನು ಅಭಿವೃದ್ಧಿಪಡಿಸುವುದಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಾಗಿ ತಿಳಿಸಿ ಪ್ರಸ್ತಾಪಿತ ಪ್ರದೇಶದ ಸುತ್ತಮುತ್ತಲೂ ಕೈಗಾರಿಕಾ (ಆಗ್ರೋ ಇಂಡಸ್ಟ್ರಿ) ಬೆಳವಣಿಗೆಗಳು ಬಂದಿರುವುದು ಹಾಗೂ ಗ್ರಾಮಠಾಣಾ ವ್ಯಾಪ್ತಿಗೆ ಸಮೀಪದಲ್ಲಿರುವುದು ಈ ಪ್ರಸ್ತಾವನೆಗೆ ಪೂರಕ ಅಂಶಗಳಾಗಿದ್ದು ವಸತಿ ಉದ್ದೇಶದ ಭೂ ಉಪಯೋಗ ಬದಲಾವಣೆಗೆ ಪರಿಗಣಿಸಬಹುದೆಂದು ದಿನಾಂಕ:01–07–2010ರಂದು ನಡೆದ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ 64ನೇ ಸಭೆಯ ವಿಷಯ ಸಂಖ್ಯೆ.64[4(9)]ರ ಸಭೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ, 1964ರ ಸೆಕ್ಷನ್ 14(ಎ) ಗೆ ಅನುಗುಣವಾಗಿ ಕ್ರಮ ಕೈಗೊಂಡಿರುವುದರಿಂದ ಹಾಗೂ ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಿರುವುದಿಲ್ಲವೆಂದು ವರದಿ ಮಾಡಿರುವುದರಿಂದ ಪ್ರಸ್ತಾಪಿತ ಪ್ರದೇಶಗಳನ್ನು ಒಟ್ಟಾರೆಯಾಗಿ ವಿನ್ಯಾಸದಲ್ಲಿ ಅಳವಡಿಸಿ ಅನುಮೋದನೆ ಪಡೆಯಬೇಕೆಂಬ ಷರತ್ತಿಗೊಳಪಡಿಸಿ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಚಿನ್ನಕೆಂಪನಹಳ್ಳಿ ಗ್ರಾಮದ ಸ.ನಂ.56ರಲ್ಲಿ 04ಎಕರೆ 31ಗುಂಟೆ, 58/1ರಲ್ಲಿ 03ಎಕರೆ 05ಗುಂಟೆ ಮತ್ತು 59/1ರಲ್ಲಿ 02ಎಕರೆ 05ಗುಂಟೆ ಒಟ್ಟು 10 ಎಕರೆ 01 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ಇವರ ಪ್ರಸ್ತಾವನೆಯನ್ನು ಪರಿಗಣಿಸುವ ಸಂಬಂಧ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಪ್ರದೇಶಗಳಲ್ಲಿ ಸರ್ವೆ ನಂ.56ರ ಜಮೀನು ಬೆಂಗಳೂರು–ದೊಡ್ಡಬಳ್ಳಾಪುರ (ಎನ್.ಹೆಚ್–207) ಮುಖ್ಯ ರಸ್ತೆಯಿಂದ ಬರುವ ಹಾಲಿ 9 ಮೀಟರ್ ಅಗಲದ ಉಪಗಮನ ರಸ್ತೆಯಿಂದ ಸಂಪರ್ಕವನ್ನು ಹೊಂದಿದ್ದು, ಸದರಿ ರಸ್ತೆಯಿಂದ ಸರ್ವೆ ನಂಬರ್ 56ರ ಮುಖಾಂತರ 58/1 ಮತ್ತು 59/1ರ ಜಮೀನಿಗೆ ಸಂಪರ್ಕ ರಸ್ತೆಯನ್ನು ಕಲ್ಪಿಸಿ, ಸರ್ವೆ ನಂ.56, 58/1, 59/1ರ ಜಮೀನುಗಳಲ್ಲಿ ಒಟ್ಟಾರೆಯಾಗಿ ವಿನ್ಯಾಸವನ್ನು ಅಭಿವೃದ್ಧಿಪಡಿಸುವುದಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುವುದು, ಪ್ರಸ್ತಾಪಿತ ಪ್ರದೇಶದ ಸುತ್ತಮುತ್ತಲೂ ಕೈಗಾರಿಕಾ (ಆಗ್ರೋ ಇಂಡಸ್ಟ್ರಿ) ಬೆಳವಣಿಗೆಗಳು ಬಂದಿರುವುದು, ಹಾಗೂ ಗ್ರಾಮಠಾಣಾ ವ್ಯಾಪ್ತಿಗೆ ಸಮೀಪದಲ್ಲಿರುವುದು ಈ ಪ್ರಸ್ತಾವನೆಗೆ ಪೂರಕ ಅಂಶಗಳಾಗಿದ್ದು ವಸತಿ ಉದ್ದೇಶದ ಭೂ ಉಪಯೋಗ ಬದಲಾವಣೆಗೆ ಪರಿಗಣಿಸಬಹುದೆಂದು ಸಭೆಯು ನಿರ್ಣಯಿಸಿರುವುದರಿಂದ ಪ್ರಸ್ತಾಪಿತ ಪ್ರದೇಶಗಳನ್ನು ಒಟ್ಟಾರೆಯಾಗಿ ವಿನ್ಯಾಸದಲ್ಲಿ ಅಳವಡಿಸಿ ಅನುಮೋದನೆ ಪಡೆಯಬೇಕೆಂಬ ಷರತ್ತಿಗೊಳಪಡಿಸಿ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಬಿಎಂಆರ್‌ಡಿಎ ಮುಖಾಂತರ ಸರ್ಕಾರಕ್ಕೆ ಕಳುಹಿಸಿಕೊಡಬಹುದಾಗಿದೆಯೆಂದು ಸದಸ್ಯ ಕಾರ್ಯದರ್ಶಿಗಳು ಮಾರ್ಪಾಡಿತ ಪರಿಶೀಲನಾ ಪಟ್ಟಿಯಲ್ಲಿ ತಿಳಿಸಿರುತ್ತಾರೆ.

ಪ್ರಶ್ನಿತ ಪ್ರದೇಶಗಳಲ್ಲಿ ಸ.ನಂ.56ರ ಜಮೀನು ಬೆಂಗಳೂರು ದೊಡ್ಡಬಳ್ಳಾಪುರ (ಎನ್.ಹೆಚ್–207) ಮುಖ್ಯ ರಸ್ತೆಯಿಂದ ಬರುವ ಹಾಲಿ 9 ಮೀಟರ್ ಅಗಲದ ಉಪಗಮನ ರಸ್ತೆಯಿಂದ ಸಂಪರ್ಕವನ್ನು ಹೊಂದಿರುವುದಾಗಿ ತಿಳಿಸಿದ್ದು, ಉಪ ವಿಭಾಗಾಧಿಕಾರಿಗಳು ದೊಡ್ಡಬಳ್ಳಾಪುರ ಉಪ ವಿಭಾಗ ಬೆಂಗಳೂರು ಇವರು ದಿನಾಂಕ:29–8–2011ರ ಹಿಂಬರಹದಲ್ಲಿ ಚಿನ್ನಕೆಂಪನಹಳ್ಳಿ ಗ್ರಾಮದ ಸ.ನಂ.58 ಮತ್ತು 59ರ ಜಮೀನಿನ ಖಾತೆ ಸಂಬಂಧವಾಗಿ ಈ ನ್ಯಾಯಾಲಯದಲ್ಲಿ ಪ್ರಕರಣದ ಸಂ.ಆರ್‌ಎ(ದೇ):201/2011–12, ದಿನಾಂಕ:25–3–2011ರಂತೆ ಮೇಲ್ಮನವಿಯನ್ನು ಪುರಸ್ಕರಿಸಿ ಆದೇಶಿಸಿರುತ್ತದೆಂದು, ಹಾಗೂ ಸರ್ವೆ ನಂ.56, 58/1 ಮತ್ತು 59/1ರಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 136(2)ರಡಿಯಲ್ಲಿ ಯಾವುದೇ ಪ್ರಕರಣ ಇದುವರೆವಿಗೂ ದಾಖಲಾಗಿರುವುದಿಲ್ಲವೆಂದು ಮತ್ತು ತಹಶೀಲ್ದಾರ್, ದೇವನಹಳ್ಳಿ ಇವರು ಪ್ರಸ್ತಾಪಿತ 10ಎಕರೆ 01ಗುಂಟೆ ವಿಸ್ತೀರ್ಣದ ಜಮೀನು ಖಾಸಗಿ ಹಿಡುವಳಿ ಜಮೀನಾಗಿರುತ್ತದೆಂದು ದೃಡೀಕರಿಸಿರುತ್ತಾರೆ.

ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಇವರುಗಳ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 273 ಬಿಎಂಆರ್ 2011, ಬೆಂಗಳೂರು, ದಿನಾಂಕ:28–06–2012

ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಇವರ ಪ್ರಸ್ತಾವನೆಯನ್ನು ಪರಿಗಣಿಸಿ ಹಾಗೂ ಉಪ ವಿಭಾಗಾಧಿಕಾರಿಗಳು ದೊಡ್ಡಬಳ್ಳಾಪುರ ಉಪ ವಿಭಾಗ ಬೆಂಗಳೂರು ಇವರು ದಿನಾಂಕ: 29–8–2011ರ ಹಿಂಬರಹದಲ್ಲಿ ಚಿನ್ನಕೆಂಪನಹಳ್ಳಿ ಗ್ರಾಮದ ಸ.ನಂ.58 ಮತ್ತು 59ರ ಜಮೀನಿನ ಖಾತೆ ಸಂಬಂಧವಾಗಿ ಈ ನ್ಯಾಯಾಲಯದಲ್ಲಿ ಪ್ರಕರಣದ ಸಂ.ಆರ್‌ಎ(ದೇ):201/2011–12, ದಿನಾಂಕ:25–3–2011ರಂತೆ ಮೇಲ್ಮನವಿಯನ್ನು ಪುರಸ್ಕರಿಸಿ ಆದೇಶಿಸಿರುತ್ತದೆಂದು, ಹಾಗೂ ಸ.ನಂ.56, 58/1 ಮತ್ತು 59/1ರ ಜಮೀನಿಗೆ ಕರ್ನಾಟಕ ಭೂ ಕಂದಾಯ ಕಾಯ್ದೆ 136(2)ರ ಅಡಿಯಲ್ಲಿ ಈ ತಹಲ್‌ವರೆಗೆ ಪ್ರಕರಣ ದಾಖಲಾಗಿರುವುದಿಲ್ಲವೆಂದು ಹಾಗೂ ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು ಇವರು ದಿನಾಂಕ:15–9–2011ರ ಹಿಂಬರಹಲ್ಲಿ ಚಿನ್ನಕೆಂಪನಹಳ್ಳಿ ಗ್ರಾಮದ ಸ.ನಂ.56ರಲ್ಲಿ 4–31 ಗುಂಟೆ, ಸ.ನಂ.58/1ರಲ್ಲಿ 3–05ಎ:ಗು, ಸ.ನಂ.59/1ರಲ್ಲಿ 2–05 ಎ:ಗು, ಒಟ್ಟು 10–01 ಎಕರೆ ವಿಸ್ತೀರ್ಣದ ಜಮೀನು ಖಾಸಗಿ ಹಿಡುವಳಿ ಜಮೀನಾಗಿರುತ್ತದೆಂದು ದೃಡೀಕರಿಸಿರುವ ಹಿನ್ನೆಲೆಯಲ್ಲಿ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಚಿನ್ನಕೆಂಪನಹಳ್ಳಿ ಗ್ರಾಮದ ಸ.ನಂ.56ರಲ್ಲಿ 04ಎಕರೆ 31ಗುಂಟೆ, 58/1ರಲ್ಲಿ 03ಎಕರೆ 05ಗುಂಟೆ ಮತ್ತು 59/1ರಲ್ಲಿ 02ಎಕರೆ 05ಗುಂಟೆ ಒಟ್ಟು 10 ಎಕರೆ 01 ಗುಂಟೆ ವಿಸ್ತೀರ್ಣದ ಜಮೀನನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆಯನ್ನು ಮಾಡಲು ಈ ಕೆಳಕಂಡ ಷರತ್ತಿಗೊಳಪಡಿಸಿ ಮಂಜೂರಾತಿ ನೀಡಿದೆ:–

1) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ.18ರನ್ವಯ ಶುಲ್ಕ ಪಡೆಯತಕ್ಕದ್ದು;
2) ಭೂ ಉಪಯೋಗ ಬದಲಾವಣೆಯನ್ನು ಮಹಾಯೋಜನೆಯಲ್ಲಿ ಅಳವಡಿಸಿಕೊಳ್ಳತಕ್ಕದ್ದು;
3) ವಸತಿ ವಿನ್ಯಾಸಕ್ಕೆ / ಗ್ರೂಪ್ ಹೌಸಿಂಗ್ ಯೋಜನೆಗೆ ಪ್ರಾಧಿಕಾರದ ಅನುಮೋದನೆ ಪಡೆಯತಕ್ಕದ್ದು;
4) ಮಳೆ ನೀರು ಕೊಯ್ಲು ಸಂಗ್ರಹಣೆ ಅಳವಡಿಸಿಕೊಳ್ಳತಕ್ಕದ್ದು;
5) ವಸತಿ ವಿನ್ಯಾಸ / ಗ್ರೂಪ್ ಹೌಸಿಂಗ್ ಅಭಿವೃದ್ಧಿಗಾಗಿ ಸಂಬಂಧಿಸಿದ ಇಲಾಖೆ / ಸಕ್ಷಮ ಪ್ರಾಧಿಕಾರಗಳಿಂದ ಅಗತ್ಯ ನಿರಾಕ್ಷೇಪಣಾ ಪತ್ರಗಳನ್ನು ಪಡೆಯತಕ್ಕದ್ದು;
6) ಪ್ರಶ್ನಿತ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಪ್ರಶ್ನಿತ ಜಮೀನಿನ ಉಪಗಮನ ರಸ್ತೆಗೆ ಸೂಕ್ತ ರಸ್ತೆ ಮಾರ್ಜಿನ್‌ನ್ನು ಅಳವಡಿಸಿಕೊಳ್ಳತಕ್ಕದ್ದು;
7) ಯಾವುದೇ ಸಿವಿಲ್ ವ್ಯಾಜ್ಯಗಳಿದ್ದಲ್ಲಿ ನ್ಯಾಯಾಲಯದ ಆದೇಶಕ್ಕೆ ಬದ್ಧರಾಗಿರತಕ್ಕದ್ದು;

8) ಸುಳ್ಳು ಮಾಹಿತಿ ಅಥವಾ ಸಲ್ಲಿಸಿರುವ ಯಾವುದೇ ಮಾಹಿತಿ / ದಾಖಲೆಗಳು ತಪ್ಪಾಗಿದ್ದಲ್ಲಿ/ ಪೋರ್ಜರಿಯಾಗಿದ್ದಲ್ಲಿ ಭೂ ಉಪಯೋಗ ಬದಲಾವಣೆಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ;

9) ಮೇಲಿನ ಜಮೀನುಗಳನ್ನು ಭೂ ಉಪಯೋಗ ಬದಲಾವಣೆಗೆ ಪರಿಗಣಿಸುವ ಮೊದಲು ಜಮೀನುಗಳ ವಾಸ್ತವಿಕತೆಯನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಂದ ಪರಿಶೀಲನೆಗೊಳಪಡಿಸಿ ಭೂ ಉಪಯೋಗ ಬದಲಾವಣೆ ಮಾಡುವ ಷರತ್ತಿಗೊಳಪಟ್ಟಿರುತ್ತದೆ.

10) ಭೂ ಉಪಯೋಗ ಬದಲಾವಣೆಯು ಆಸ್ತಿಯ ಹಕ್ಕಿನ ಪ್ರತಿಪಾದನೆಗೆ ದಾಖಲೆಯಾಗುವುದಿಲ್ಲ ಮತ್ತು ಭೂ ಸುಧಾರಣಾ ಕಾಯ್ದೆಯಡಿ ಹಾಗೂ ಭೂ ಕಂದಾಯ ಕಾಯ್ದೆ 1964ರ ಕಲಂ 136(2)ರ ಅಡಿಯಲ್ಲಾಗಲೀ ಅಥವಾ ಇನ್ನಾವುದೇ ನ್ಯಾಯಾಲಯದಲ್ಲಾಗಲೀ ಪ್ರಕರಣಗಳು ಬಾಕಿ ಇದ್ದಲ್ಲಿ ಭೂ ಉಪಯೋಗ ಬದಲಾವಣೆಯು ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ. ಈ ಬಗ್ಗೆ ಅರ್ಜಿದಾರರಿಂದ ಯಾವುದೇ ನ್ಯಾಯಾಲಯದ ಅಂತಿಮ ಆದೇಶಕ್ಕೆ ಬದ್ಧರಾಗಿರುವುದಾಗಿ ಮತ್ತು ಭೂ ಉಪಯೋಗ ಬದಲಾವಣೆ ಸಂಬಂಧ ಪಾವತಿಸಲಾದ ಶುಲ್ಕಗಳನ್ನು ವಾಪಸ್ ಕೇಳುವುದಿಲ್ಲವೆಂದು ಸಲ್ಲಿಸಿರುವ ಘೋಷಣಾ ಪತ್ರಕ್ಕೆ ಬದ್ಧರಾಗಿರತಕ್ಕದ್ದು;

11) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವು ವಿಧಿಸುವ ಇತರೆ ಷರತ್ತುಗಳು;

11) ಭೂ ಉಪಯೋಗ ಬದಲಾವಣೆಗೆ ನಿರಾಕ್ಷೇಪಣಾ ಪತ್ರ ನೀಡುವ ಮೊದಲು 79(ಎ) ಮತ್ತು (ಬಿ) ಪ್ರಕರಣಗಳು ದಾಖಲಾಗಿರುವ ಬಗ್ಗೆ ದೃಡೀಕರಿಸಿಕೊಂಡು ನಿರಾಕ್ಷೇಪಣ ಪತ್ರ ನೀಡುವುದು.

12) ಪ್ರಸ್ತಾಪಿತ ಪ್ರದೇಶಗಳನ್ನು ಒಟ್ಟಾರೆಯಾಗಿ ವಿನ್ಯಾಸದಲ್ಲಿ ಅಳವಡಿಸಿ ಅನುಮೋದನೆ ಪಡೆಯುವ ಷರತ್ತಿಗೊಳಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1729

ಎಸ್.ಚಂದ್ರಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಂ. ರಾಚಪ್ಪ, ತಹಶೀಲ್ದಾರ್ ಗ್ರೇಡ್–1, ಶಹಾಪುರ ತಾಲ್ಲೂಕು ಮತ್ತು ಶ್ರೀ ಆರ್. ಲೋಕನಾಥ್, ತಹಶೀಲ್ದಾರ್ ಗ್ರೇಡ್–1, ಹುಣಸೂರು ಇವರುಗಳಿಗೆ ಪೂರ್ವಾನ್ವಯವಾಗಿ ಬಡ್ತಿ ನೀಡಿದ್ದು, ಇವರುಗಳ ಹೆಸರುಗಳನ್ನು ತಹಶೀಲ್ದಾರ್ ಗ್ರೇಡ್–1 ವೃಂದದ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆ ಮಾಡಿ ಜೇಷ್ಠತೆಯನ್ನು ನಿಗಧಿಪಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 79 ಎಎಸ್‌ಡಿ 2012, ದಿನಾಂಕ: 25–6–2012.

2) ಶ್ರೀ ಆರ್. ಲೋಕನಾಥ್, ತಹಶೀಲ್ದಾರ್ ಗ್ರೇಡ್–1, ಹುಣಸೂರು ಅವರ ಮನವಿ ದಿನಾಂಕ:26–6–2012.

3) ಗುಲ್ಬರ್ಗಾ ವಿಭಾಗ ಪ್ರಾದೇಶಿಕ ಆಯುಕ್ತರ ಪತ್ರ ಸಂಖ್ಯೆ:ಕಂಇ/ಪ್ರಾಆಗು/ಇಎಸ್‌ಎ/28/ 2012–13/2087 ದಿನಾಂಕ: 23–5–2012.

4) ಸರ್ಕಾರಿ ಅಧಿಸೂಚನೆ ಸಂಖ್ಯೆ:ಕಂಇ 296 ಎಎಸ್‌ಡಿ 2011, ದಿನಾಂಕ:22–7–2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ.(1) ರ ಆದೇಶದಲ್ಲಿ, ಶ್ರೀ ಎಂ. ರಾಚಪ್ಪ, ತಹಶೀಲ್ದಾರ್ ಗ್ರೇಡ್–1, ಶಹಾಪುರ ತಾಲ್ಲೂಕು, ಯಾದಗಿರಿ ಜಿಲ್ಲೆ ಮತ್ತು ಶ್ರೀ ಆರ್. ಲೋಕನಾಥ್, ತಹಶೀಲ್ದಾರ್ ಗ್ರೇಡ್–1, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರುಗಳಿಗೆ ಕರ್ನಾಟಕ ನಾಗರೀಕ ಸೇವಾ (ಬಡ್ತಿ, ವೇತನ ಮತ್ತು ನಿವೃತ್ತಿ ವೇತನದ ವಿನಿಯಮನ) ನಿಯಮಗಳು, 1978 ರ ನಿಯಮ 2(1)(ಎ) ರನ್ವಯ ದಿನಾಂಕ: 18–7–2011 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ತಹಶೀಲ್ದಾರ್ ಗ್ರೇಡ್–1 ವೃಂದಕ್ಕೆ (ವೇತನ ಶ್ರೇಣಿ ರೂ. 14050–25050) ಪದೋನ್ನತಿ ನೀಡಿ ಅವರುಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಮುಂದುವರೆಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರ.ಸಂ.(2) ರಲ್ಲಿ ಶ್ರೀ ಆರ್. ಲೋಕನಾಥ್, ತಹಶೀಲ್ದಾರ್ ಗ್ರೇಡ್–1, ಹುಣಸೂರು ರವರು ಅವರಿಗೆ ಕರ್ನಾಟಕ ನಾಗರೀಕ ಸೇವಾ (ಆರ್.ಪಿ.ಪಿ.ಪಿ) ನಿಯಮಾವಳಿಗಳು 1978 ರ ನಿಯಮ 2(1)(ಎ) ರನ್ವಯ ದಿನಾಂಕ:18–07–2011 ರಿಂದ ಜಾರಿಗೆ ಬರುವಂತೆ ತಹಶೀಲ್ದಾರ್ ಗ್ರೇಡ್–1 ವೃಂದಕ್ಕೆ ಪೂರ್ವಾನ್ವಯವಾಗಿ ಕರ್ನಾಟಕ ಆಡಳಿತ ಸೇವಾ ಸಮೂಹ–ಎ (ಕಿರಿಯ ಶ್ರೇಣಿ) ವೃಂದದ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(3)ರಲ್ಲಿ ಗುಲ್ಬರ್ಗಾ ವಿಭಾಗ ಪ್ರಾದೇಶಿಕ ಆಯುಕ್ತರು ಶ್ರೀ ಎಂ. ರಾಚಪ್ಪ, ತಹಶೀಲ್ದಾರ್ ಗ್ರೇಡ್–1, ಶಹಾಪುರ ತಾಲ್ಲೂಕು ಅವರಿಗೆ ಕರ್ನಾಟಕ ನಾಗರೀಕ ಸೇವಾ (ಆರ್.ಪಿ.ಪಿ.ಪಿ) ನಿಯಮಾವಳಿಗಳು 1978 ರ ನಿಯಮ 2(1)(ಎ) ರನ್ವಯ ದಿನಾಂಕ:18–07–2011 ರಿಂದ ಜಾರಿಗೆ ಬರುವಂತೆ ತಹಶೀಲ್ದಾರ್ ಗ್ರೇಡ್–1 ವೃಂದಕ್ಕೆ ಪೂರ್ವಾನ್ವಯವಾಗಿ ಬಡ್ತಿ ನೀಡಿ, ಕರ್ನಾಟಕ ಆಡಳಿತ ಸೇವಾ ಸಮೂಹ–ಎ (ಕಿರಿಯ ಶ್ರೇಣಿ) ವೃಂದದ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(3) ರಲ್ಲಿ ತಹಶೀಲ್ದಾರ್ ಗ್ರೇಡ್–2 ವೃಂದದಿಂದ ತಹಶೀಲ್ದಾರ್ ಗ್ರೇಡ್–1 ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ತಹಶೀಲ್ದಾರ್ ಗ್ರೇಡ್–1 ವೃಂದದ ಜೇಷ್ಠತಾ ಪಟ್ಟಿಯಲ್ಲಿ ಶ್ರೀಯುತರ ಹೆಸರನ್ನು ಸೇರಿಸಿ ತಿದ್ದುಪಡಿ ಮಾಡಬೇಕಾಗಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ: ಆರ್‌ಡಿ 251 ಎಎಸ್‌ಡಿ 2012, ಬೆಂಗಳೂರು, ದಿನಾಂಕ:27–6–2012.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿ 296 ಎಎಸ್‌ಡಿ 2011, ದಿನಾಂಕ:27.07.2011ರಂದು ಪ್ರಕಟಿಸಲಾಗಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ತಹಶೀಲ್ದಾರ್ ಗ್ರೇಡ್–1 ವೃಂದದ ಕ್ರಮ ಸಂಖ್ಯೆ:587ರಲ್ಲಿ ಶ್ರೀ ದಯಾನಂದ ಭಂಡಾರಿ ಇವರ ನಂತರ ಕ್ರಮ ಸಂಖ್ಯೆ: 587(ಎ) ರಲ್ಲಿ ಶ್ರೀ ಎಂ. ರಾಚಪ್ಪ ಇವರ ಹೆಸರನ್ನು ಮತ್ತು ಕ್ರಮ ಸಂಖ್ಯೆ: 608 ರಲ್ಲಿ ಶ್ರೀ ನಾಗೇಂದ್ರ ಎಫ್.ಹೊನ್ನಹಳ್ಳಿ ಇವರ ನಂತರ ಕ್ರಮ ಸಂಖ್ಯೆ: 608(ಎ) ರಲ್ಲಿ ಶ್ರೀ ಆರ್. ಲೋಕನಾಥ್ ಇವರ ಹೆಸರನ್ನು ಸೇರ್ಪಡೆ ಮಾಡಿ ಈ ಕೆಳಗಿನಂತೆ ಪ್ರಕಟಿಸಲಾಗಿದೆ.

ಕ್ರ. ಸಂ.	ತಹಶೀಲ್ದಾರ್ ಗ್ರೇಡ್–1 ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು	SC/ ST	ಜನ್ಮ ದಿನಾಂಕ	ಅಧಿಕಾರಿ ಸೇವೆಗೆ ಸೇರಿದ ದಿನಾಂಕ	ಅರ್ಹತಾ ದಿನಾಂಕ	ಷರಾ
1	587(ಎ)	ಶ್ರೀ ಎಂ. ರಾಚಪ್ಪ	––	1–2–1973	17–4–2006	18–07–2011	ತಹಶೀಲ್ದಾರ್ ಗ್ರೇಡ್–1
2	608(ಎ)	ಶ್ರೀಆರ್.ಲೋಕನಾಥ್	––	5–4–1973	27–1–2006	18–7–2011	ತಹಶೀಲ್ದಾರ್ ಗ್ರೇಡ್–1

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ವಿ.ರಾಮಲಿಂಗಯ್ಯ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–3).

ಪಿ.ಆರ್. 1730

ಒಳಾಡಳಿತ ಸಚಿವಾಲಯ

ವಿಷಯ: ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಅವಧಿ ಪೂರ್ಣಗೊಂಡ ಕೆಲವು ಅಧಿಕಾರಿಗಳ ಹಾಗೂ ಸಿಬ್ಬಂದಿ ವರ್ಗದ ತಾತ್ಕಾಲಿಕ ಹುದ್ದೆಗಳನ್ನು ಮತ್ತೊಂದು ಅವಧಿಗೆ ಮುಂದುವರೆಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂ:ಒಇ 348 ಪಿಪಿಇ 2009, ದಿನಾಂಕ:14.02.2011,
2. ಸರ್ಕಾರದ ಆದೇಶ ಸಂ:ಒಇ 282 ಪಿಪಿಇ 2010, ದಿನಾಂಕ:16.03.2011,
3. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂಖ್ಯೆ:ಡಿಪಿಎನ್/ಸಿಶಾ–1/228/2011–12, ದಿನಾಂಕ:03.02.2012.

ಪ್ರಸ್ತಾವನೆ:–

ಮೇಲೆ (1)ರಲ್ಲಿ ಓದಲಾದ ದಿನಾಂಕ:14.02.2011ರ ಸರ್ಕಾರಿ ಆದೇಶದನ್ವಯ ಬೆಂಗಳೂರು ನಗರದ 4, 5, ಮತ್ತು 6ನೇ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್(ಸಂಚಾರಿ) ಸಿವಿಲ್ ನ್ಯಾಯಾಧೀಶರು(ಕಿರಿಯ ವಿಭಾಗ) ನ್ಯಾಯಾಲಯ, ನೆಲಮಂಗಲದ ಸಿವಿಲ್ ಜಡ್ಜ್ (ಹಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹಾಗೂ ಸೌಂದತ್ತಿಯ ಹೆಚ್ಚುವರಿ ಸಿವಿಲ್ ಜಡ್ಜ್(ಹಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯಗಳಿಗೆ ಹೊಂದಿಕೊಂಡಂತೆ ಸಹಾಯಕ ಸರ್ಕಾರಿ ಅಭಿಯೋಜಕರು–ವ–ಸಹಾಯಕ ಸರ್ಕಾರಿ ವಕೀಲರ, ಬೆರಳಚ್ಚುಗಾರರ ಮತ್ತು ದಲಾಯತರ ತಲಾ ಒಂದು ಹುದ್ದೆಯಂತೆ ಒಟ್ಟು 15 ಹುದ್ದೆಗಳನ್ನು ಮೊದಲ ಬಾರಿಗೆ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಸೃಜಿಸಿದೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ:16.03.2011ರ ಸರ್ಕಾರಿ ಆದೇಶದನ್ವಯ ಉಡುಪಿ ಜಿಲ್ಲೆಯ ಆರಕ್ಷಕ ಅಧೀಕ್ಷಕರ ಕಛೇರಿಗೆ ಹೊಂದಿಕೊಂಡಂತೆ ಒಂದು ಸಹಾಯಕ ಅಭಿಯೋಗ ನಿರ್ದೇಶಕರ ಮತ್ತು ಒಂದು ಶೀಘ್ರಲಿಪಿಗಾರರ ಒಟ್ಟು 02 ಹುದ್ದೆಗಳನ್ನು ಮೊದಲ ಬಾರಿಗೆ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಸೃಜಿಸಿದೆ.

ಮೇಲೆ (3)ರಲ್ಲಿ ಓದಲಾದ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ದಿನಾಂಕ:03.02.2012ರ ಪತ್ರದಲ್ಲಿ ಮೇಲೆ (1) ಮತ್ತು (2) ಓದಲಾದ ಸರ್ಕಾರಿ ಆದೇಶಗಳನ್ವಯ ಸೃಜನೆಯಾಗಿರುವ ಒಟ್ಟು 17 ಹುದ್ದೆಗಳ ಅವಧಿಯು ಕ್ರಮವಾಗಿ ದಿನಾಂಕ:13.02.2012 ಮತ್ತು 15.03.2012ರಂದು ಪೂರ್ಣಗೊಂಡಿದೆ. ಸದರಿ ತಾತ್ಕಾಲಿಕ ಹುದ್ದೆಗಳ ಸಂಬಂಧಪಟ್ಟ ನ್ಯಾಯಾಲಯಗಳ ಕಾರ್ಯಾವಧಿಯು ಚಾಲ್ತಿಯಲ್ಲಿರುತ್ತದೆ. ಎಲ್ಲಿಯವರೆಗೆ ನ್ಯಾಯಾಲಯಗಳು ಕಾರ್ಯ ನಿರ್ವಹಿಸುತ್ತವೆಯೋ ಅಲ್ಲಿಯವರೆಗೆ ನ್ಯಾಯಾಲಯಗಳ ಕಲಾಪಗಳಲ್ಲಿ ಅಭಿಯೋಜಕರ ಭಾಗವಹಿಸುವಿಕೆ ಅನಿವಾರ್ಯವಾಗಿದ್ದು, ಸದರಿ ಹುದ್ದೆಗಳನ್ನು ಮುಂದುವರೆಸುವುದು ಅವಶ್ಯವಾಗಿರುತ್ತದೆ. ಆದ್ದರಿಂದ, ಸದರಿ ಹುದ್ದೆಗಳನ್ನು ದಿನಾಂಕ:31.03.2014ರ ವರೆಗೆ ಸಾರ್ವಜನಿಕ ಹಾಗೂ ಆಡಳಿತ ಹಿತದೃಷ್ಠಿಯಿಂದ ಮುಂದುವರೆಸಲು ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 107 ಪಿಪಿಇ 2012, ಬೆಂಗಳೂರು, ದಿನಾಂಕ: 18ನೇ ಮೇ 2012.

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ಅಂಕಣ (2)ರಲ್ಲಿನ ವಿವಿಧ ವೃಂದದ, ಅಂಕಣ (3)ರಲ್ಲಿ ನಮೂದಿಸಿರುವ ಸಂಖ್ಯೆಯ ಅಂಕಣ (4)ರಲ್ಲಿನ ವಿವಿಧ ನ್ಯಾಯಾಲಯ ಹಾಗೂ ಕಛೇರಿಗಳಿಗೆ ಹೊಂದಿಕೊಂಡಂತೆ ಸೃಜನೆಯಾಗಿರುವ ಹುದ್ದೆಗಳ ಅವಧಿ ಪೂರ್ಣಗೊಳ್ಳುವ ದಿನಾಂಕದಿಂದ ಏಕರೂಪವಾಗಿ ದಿನಾಂಕ:31.03.2013ರವರೆಗೆ ಅಥವಾ ಸಂಬಂಧಪಟ್ಟ ನ್ಯಾಯಾಲಯಗಳು / ಕಛೇರಿಗಳು ಅಸ್ಥಿತ್ವದಲ್ಲಿರುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಲು ಮಂಜೂರಾತಿಯನ್ನು ನೀಡಿದೆ.

ಸದರಿ ಹುದ್ದೆಗಳಿಗೆ ತಗಲುವ ವೆಚ್ಚವನ್ನು 2014–ನ್ಯಾಯಪರಿಪಾಲನೆ 114–ಕಾನೂನು ಸಲಹೆಗಾರರು ಮತ್ತು ಸಮೂಪದೇಶಕರು –02– ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು, 002–ಅಧಿಕಾರಿಗಳ ವೇತನ, 003–ಸಿಬ್ಬಂದಿ ವೇತನ ಈ ಲೆಕ್ಕ ಶೀರ್ಷಿಕೆಯಡಿ ಭರಿಸತಕ್ಕದ್ದು.

ಸದರಿ ಆದೇಶವನ್ನು, ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 159 ವೆಚ್ಚ–11/2012 ದಿನಾಂಕ: 16.04.2012ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ.ನಿಂಗಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು –ಬಿ)

ಸರ್ಕಾರಿ ಆದೇಶ ಸಂ:ಒಇ 107 ಪಿಪಿಇ 2012, ದಿನಾಂಕ: 18ನೇ ಏಪ್ರಿಲ್ 2012.

ಅನುಬಂಧ

ದಿನಾಂಕ:31.03.2013ರ ವರೆಗೆ ಮುಂದುವರೆಸಲು ಮಂಜೂರಾತಿ ನೀಡಿರುವ ತಾತ್ಕಾಲಿಕ ಹುದ್ದೆಗಳ ವಿವರ

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಹುದ್ದೆ ಸಂಖ್ಯೆ	ಹುದ್ದೆಯು ಮಂಜೂರಾಗಿರುವ ನ್ಯಾಯಾಲಯ/ ಕಛೇರಿಯ ಹೆಸರು	ಹುದ್ದೆಯು ಮಂಜೂರಾದ ಸರ್ಕಾರದ ಆದೇಶ ಸಂ ಮತ್ತು ದಿನಾಂಕ	ತಾತ್ಕಾಲಿಕ ಹುದ್ದೆಗಳನ್ನು ಮುಂದುವರೆಸಲು ಮಂಜೂರಾತಿ ನೀಡಿರುವ ಅವಧಿ
(1)	(2)	(3)	(4)	(5)	(6)
			ಬೆಂಗಳೂರು ನಗರ ವಿಭಾಗ		
1	ಸಹಾಯಕ ಸರ್ಕಾರಿ ಅಭಿಯೋಜಕರು – ವ–ಸಹಾಯಕ ಸರ್ಕಾರಿ ವಕೀಲರು	01	4ನೇ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ (ಸಂಚಾರಿ) ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ನ್ಯಾಯಾಲಯ, ಬೆಂಗಳೂರು ನಗರ	ಒಇ 348 ಪಿಪಿಇ 2009, ದಿನಾಂಕ:14.02.2011	31.03.2013ರ ವರೆಗೆ ಅಥವಾ ಸಂಬಂಧಪಟ್ಟ ನ್ಯಾಯಾಲಯಗಳು/ ಕಛೇರಿಗಳು ಅಸ್ಥಿತ್ವದಲ್ಲಿರುವವರೆಗೆ ಇವರೆರಡಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ

(1)	(2)	(3)	(4)	(5)	(6)
2	ಬೆರಳಚ್ಚುಗಾರರು	01	ಸಹಾಯಕ ಸರ್ಕಾರಿ ಅಭಿಯೋಜಕರ ಕಛೇರಿ, 4ನೇ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ (ಸಂಚಾರಿ) ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ನ್ಯಾಯಾಲಯ, ಬೆಂಗಳೂರು ನಗರ	–ಅದೇ–	–ಅದೇ–
3	ದಲಾಯತ್	01	–ಅದೇ–	–ಅದೇ–	–ಅದೇ–
4	ಸಹಾಯಕ ಸರ್ಕಾರಿ ಅಭಿಯೋಜಕರು –ವ–ಸಹಾಯಕ ಸರ್ಕಾರಿ ವಕೀಲರು	01	5ನೇ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ (ಸಂಚಾರಿ) ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ನ್ಯಾಯಾಲಯ, ಬೆಂಗಳೂರು ನಗರ	–ಅದೇ–	–ಅದೇ–
5	ಬೆರಳಚ್ಚುಗಾರರು	01	ಸಹಾಯಕ ಸರ್ಕಾರಿ ಅಭಿಯೋಜಕರ ಕಛೇರಿ, 5ನೇ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ (ಸಂಚಾರಿ) ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ನ್ಯಾಯಾಲಯ, ಬೆಂಗಳೂರು ನಗರ	ಒಇ 348 ಪಿಪಿಇ 2009, ದಿನಾಂಕ:14.02.2011	31.03.2013ರ ವರೆಗೆ ಅಥವಾ ಸಂಬಂಧಪಟ್ಟ ನ್ಯಾಯಾಲಯಗಳು / ಕಛೇರಿಗಳು ಅಸ್ಥಿತ್ವದಲ್ಲಿರುವವರೆಗೆ ಇವರೆರಡಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ
6	ದಲಾಯತ್	01	–ಅದೇ–	–ಅದೇ–	–ಅದೇ–
7	ಸಹಾಯಕ ಸರ್ಕಾರಿ ಅಭಿಯೋಜಕರು –ವ–ಸಹಾಯಕ ಸರ್ಕಾರಿ ವಕೀಲರು	01	6ನೇ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ (ಸಂಚಾರಿ) ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ನ್ಯಾಯಾಲಯ, ಬೆಂಗಳೂರು ನಗರ	–ಅದೇ–	–ಅದೇ–
8	ಬೆರಳಚ್ಚುಗಾರರು	01	ಸಹಾಯಕ ಸರ್ಕಾರಿ ಅಭಿಯೋಜಕರ ಕಛೇರಿ, 6ನೇ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ (ಸಂಚಾರಿ) ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ನ್ಯಾಯಾಲಯ, ಬೆಂಗಳೂರು ನಗರ	–ಅದೇ–	–ಅದೇ–
9	ದಲಾಯತ್	01	–ಅದೇ–	–ಅದೇ–	–ಅದೇ–
ಬೆಂಗಳೂರು ಗ್ರಾಮಾಂತರ ವಿಭಾಗ					
10	ಸಹಾಯಕ ಸರ್ಕಾರಿ ಅಭಿಯೋಜಕರು –ವ–ಸಹಾಯಕ ಸರ್ಕಾರಿ ವಕೀಲರು	01	ಸಿವಿಲ್ ಜಡ್ಜ್(ಹಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ನೆಲಮಂಗಲ	–ಅದೇ–	–ಅದೇ–
11	ಬೆರಳಚ್ಚುಗಾರರು	01	ಸಹಾಯಕ ಸರ್ಕಾರಿ ಅಭಿಯೋಜಕರ ಕಛೇರಿ, ಸಿವಿಲ್ ಜಡ್ಜ್(ಹಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ನೆಲಮಂಗಲ	–ಅದೇ–	–ಅದೇ–
12	ದಲಾಯತ್	01	–ಅದೇ–	–ಅದೇ–	–ಅದೇ–

(1)	(2)	(3)	(4)	(5)	(6)
ಬೆಳಗಾವಿ ಜಿಲ್ಲೆ					
13	ಸಹಾಯಕ ಸರ್ಕಾರಿ ಅಭಿಯೋಜಕರು – ವ–ಸಹಾಯಕ ಸರ್ಕಾರಿ ವಕೀಲರು	01	ಸಿವಿಲ್ ಜಡ್ಜ್(ಹಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಸೌಂದತ್ತಿ	ಒಇ 348 ಪಿಪಿಇ 2009, ದಿನಾಂಕ:14.02.2011	31.03.2013ರ ವರೆಗೆ ಅಥವಾ ಸಂಬಂಧಪಟ್ಟ ನ್ಯಾಯಾಲಯ ಗಳು / ಕಛೇರಿಗಳು ಅಸ್ಥಿತ್ವದಲ್ಲಿರುವವರೆಗೆ ಇವರೆರಡಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ
14	ಬೆರಳಚ್ಚುಗಾರರು	01	ಸಹಾಯಕ ಸರ್ಕಾರಿ ಅಭಿಯೋಜಕರ ಕಛೇರಿ, ಸಿವಿಲ್ ಜಡ್ಜ್(ಹಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಸೌಂದತ್ತಿ	–ಅದೇ–	–ಅದೇ–
15	ದಲಾಯತ್	01	–ಅದೇ–	–ಅದೇ–	–ಅದೇ–
ಉಡುಪಿ ಜಿಲ್ಲೆ					
16	ಸಹಾಯಕ ಅಭಿಯೋಗ ನಿರ್ದೇಶಕರು	01	ಆರಕ್ಷಕ ಅಧೀಕ್ಷಕರ ಕಛೇರಿ, ಉಡುಪಿ ಜಿಲ್ಲೆ	ಒಇ 282 ಪಿಪಿಇ 2010, ದಿನಾಂಕ:16.03.2011.	–ಅದೇ–
17	ಶೀಘ್ರಲಿಪಿಗಾರರು	01	ಸಹಾಯಕ ಅಭಿಯೋಗ ನಿರ್ದೇಶಕರ ಕಛೇರಿ, ಆರಕ್ಷಕ ಅಧೀಕ್ಷಕರ ಕಛೇರಿಯ ಆವರಣ, ಉಡುಪಿ ಜಿಲ್ಲೆ	–ಅದೇ–	–ಅದೇ–
ಒಟ್ಟು ಹುದ್ದೆಗಳು		17			

ಹೆಚ್.ಕೆ.ನಿಂಗಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಪೊಲೀಸ್ ಸೇವೆಗಳು –ಬಿ)

ಪಿ.ಆರ್. 1492

COMMERCE & INDUSTRIES SECRETARIAT

Sub: Releasing Rs. 25,00,000/- (Rupees twenty five lakhs) in favour of the Central Bureau of Investigation anti-Corruption Branch, Bangalore to meet the investigation expenditure.

Read: 1) G.O. No. CI 254 MMM 2011 dated : 15-10-2011.
2) Letter No. ಗಭೂಇ.ಉನಿ(ಯೋ): ಸಿಬಿಐ, 2012–12:643 dated : 10–05–2012

Preamble:

In order to meet the investigation expenditure related to the cases vide RC18(A)2011 and RC19(A)/2011 a sum of Rs. 25,00,000/- was sanctioned in favour of CBI, vide Government order dated 15-10-2011 read Sl. No. (I) above.

The Director of Mines and Geology by enclosing a copy of the letter dated 03-05-2012 of the Deputy Inspector General of Police, Head of Branch, CBI: ACB, Bangalore, has requested to release a sum of Rs. 25,00,000/- in favour of CBI for meeting expenditure involved in the investigation fo RC18(A)2011-BLR and RC 19(A) 2011-BLR as per the directions of Hon'ble Supreme Court of India, under the Head of Account : 2853-02-001-0-01(125) Modernization vide his letter dated : 10-05-2012 read at Sl. No. (2) above.

After examining the proposal, the Government has felt it necessary to issued Government Order in this regard. Hence, the following order :-

GOVERNMENT ORDER No. CI 254/MMM/2011, BANGALORE, DATED: 29th MAY 2012.

A sum of Rs. 25,00,000/- (Twenty five lakhs Rupees only) is sanctioned in favour of the Central Bureau of Investigation Anti-Corruption Branch, Bangalore to meet investigation expenditure related to the cases vide RC18(A)2011 and RC 19(A)/2011. This amount may be met out under the Head of Account 2853-02-001-0-01(125) Modernization.

This order is issued as per the financial powers delegated to the Secretaries to Government vide Order No. FDI:TFP.2008 dated 16-05-2008.

By Order and in the name of the Governor of Karnataka,

M. V. SHIVASUBRAMANI,
Under Secretary to Government (Mines)
Commerce & Industries Department,

P. R. 1541

ಸಮಾಜ ಕಲ್ಯಾಣ ಸಚಿವಾಲಯ

ವಿಷಯ : ಸಾರ್ವಜನಿಕ ಉದ್ಯಮಗಳಲ್ಲಿ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಡೆಪ್ಯೂಟಿ ಜನರಲ್ ಮ್ಯಾನೇಜರ್ ಮತ್ತು ಜನರಲ್ ಮ್ಯಾನೇಜರ್ ಮತ್ತು ಇದಕ್ಕೆ ಮೇಲ್ಪಟ್ಟ ಹುದ್ದೆಗಳ ಪ್ರಕರಣಗಳಲ್ಲಿ ಗರಿಷ್ಟ ವಯೋಮಿತಿಯನ್ನು 59 ವರ್ಷಗಳಿಗೆ ನಿಗದಿಪಡಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಹೆಚ್ಚೋಲೆ ಸಂಖ್ಯೆ : ಸಕಇ 03 ಎಸ್‌ಟಿಸಿ 2011, ದಿನಾಂಕ: 14-03-2012.
2. ಶ್ರೀ ವಿ. ಮಾದಪ್ಪ, ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್ ಇವರ ಮನವಿ ದಿನಾಂಕ : 19-03-2012

ಪ್ರಸ್ತಾವನೆ:-

ಓದಲಾದ (1)ರಲ್ಲಿ ಬ್ಯಾಕ್‌ಲಾಗ್ ಹುದ್ದೆಗಳಿಗೆ ವಿಶೇಷವಾಗಿ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಡೆಪ್ಯೂಟಿ ಜನರಲ್ ಮ್ಯಾನೇಜರ್ ಮತ್ತು ಜನರಲ್ ಮ್ಯಾನೇಜರ್ ಮತ್ತು ಇದಕ್ಕೆ ಮೇಲ್ಪಟ್ಟ ಹುದ್ದೆಗಳ ಪ್ರಕರಣಗಳಲ್ಲಿ ಗರಿಷ್ಟ ವಯೋಮಿತ 59 ವರ್ಷಗಳಾಗಿರತಕ್ಕದ್ದು ಎಂದು ಸಂಖ್ಯೆ : ಸಕಇ 03 ಎಸ್‌ಟಿಸಿ 2011, ದಿನಾಂಕ : 14-03-2012ನ್ನು, ದಿನಾಂಕ : 09-05-2005ರ ಅಧಿಸೂಚನೆ ಸಂಖ್ಯೆ : ಎಸ್‌ಡಬ್ಲ್ಯೂಡಿ 47 ಎಸ್‌ಟಿಸಿ 2004ಕ್ಕೆ ಹೆಚ್ಚೋಲೆಯನ್ನು ಹೊರಡಿಸಲಾಗಿದೆ.

ಶ್ರೀ ಬಿ. ಮಾದಪ್ಪ, ಬೆಂಗಳೂರು ಇವರು ಓದಲಾದ (2)ರ ಮನವಿಯಲ್ಲಿ ಮೈಸೂರು ಖನಿಜ ನಿಯಮಿತ, ಬೆಂಗಳೂರು ಇವರು 2005ನೇ ಸಾಲಿನಲ್ಲಿ ಡಿ.ಜಿ.ಎಂ. (ಹಣಕಾಸು) ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಕರೆದು ನೀಡಿದ ಜಾಹೀರಾತನ್ನು ಅನುಸರಿಸಿ, ಮಾಡಬೇಕಾಗಿದ್ದ ನೇಮಕಾತಿ ಪ್ರಕ್ರಿಯೆಯು ಇದುವರೆವಿಗೂ ಪೂರ್ಣಗೊಂಡಿರುವುದಿಲ್ಲ ಮತ್ತು ಸದರಿ ಬ್ಯಾಕ್‌ಲಾಗ್ ಹುದ್ದೆಗೆ ಮೈಸೂರು ಖನಿಜ ನಿಯಮಿತ ಇವರು ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಕಾಯ್ದಿರಿಸಿದ ಭರ್ತಿ ಮಾಡದ ಖಾಲಿ ಹುದ್ದೆಗಳು) (ವಿಶೇಷ ನೇಮಕಾತಿ) ನಿಯಮಾವಳಿ 2001ರ ನಿಯಮ 3ರಲ್ಲಿ ನಿಗದಿಗೊಳಿಸಿರುವ ಗರಿಷ್ಟ ವಯೋಮಿತಿ 40 ವರ್ಷ ವಯಸ್ಸನ್ನು ಮೀರಿರುತ್ತಾರೆಂದು ಸದರಿ ಸಂಸ್ಥೆಯು ಈ ಪ್ರಕರಣದಲ್ಲಿ ಸರ್ಕಾರದ (ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ) ಅಭಿಪ್ರಾಯವನ್ನು ಕೋರಿ ಪತ್ರ ವ್ಯವಹಾರ ನಡೆಸುತ್ತಿರುವುದಾಗಿ ತಿಳಿಸಿರುತ್ತಾರೆ. ಆದರೆ ದಿನಾಂಕ : 16-03-2005ರಲ್ಲಿ ಡಿ.ಜಿ.ಎಂ. ಹುದ್ದೆಗೆ ಸದರಿ ಸಂಸ್ಥೆಯು ಪ್ರಾರಂಭಿಸಿದ ನೇಮಕಾತಿ ಪ್ರಕ್ರಿಯೆಯು ಪೂರ್ಣಗೊಂಡಿರುವುದಿಲ್ಲ ಎಂದು ಕೂಡಾ ತಿಳಿಸಿರುತ್ತಾರೆ. ಮೇಲಾಗಿ ಓದಲಾದ (1)ರ ಆದೇಶವನ್ನು ಹೊರಡಿಸಿದ್ದರೂ, ಸದರಿ ಮನವಿದಾರರ ನೇಮಕಾತಿಗಾಗಿ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸದೇ ಪುನಃ ಹೊಸದಾಗಿ ನೇಮಕಾತಿಯ ಜಾಹೀರಾತನ್ನು ಹೊರಡಿಸಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಸಂಬಂಧಪಟ್ಟ ಇಲಾಖೆಗಳೊಡನೆ ಪತ್ರ ವ್ಯವಹಾರ ನಡೆಸುತ್ತಿರುವುದಾಗಿ ಹಾಗೂ ಇದರಿಂದಾಗಿ ಸದರಿಯವರಿಗೆ ಬಹಳ ಅನ್ಯಾಯವಾಗುತ್ತದೆಂದು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಸಕಇ 03 ಎಸ್‌ಟಿಸಿ 2011, ಬೆಂಗಳೂರು, ದಿನಾಂಕ: 25-05-2012

ಸಾರ್ವಜನಿಕ ಉದ್ಯಮಗಳಲ್ಲಿ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಡೆಪ್ಯೂಟಿ ಜನರಲ್ ಮ್ಯಾನೇಜರ್ ಮತ್ತು ಜನರಲ್ ಮ್ಯಾನೇಜರ್ ಮತ್ತು ಇದಕ್ಕೆ ಮೇಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳ ಪ್ರಕರಣಗಳಲ್ಲಿ ಗರಿಷ್ಟ ವಯೋಮಿತಿಯನ್ನು 59 ವರ್ಷಗಳಾಗಿರತಕ್ಕದ್ದು ಎಂದು ಹೊರಡಿಸಿದ ದಿನಾಂಕ : 14-03-2012ರ ಹೆಚ್ಚೋಲೆಯನ್ವಯ ಯಾವ ಪ್ರಕರಣಗಳಲ್ಲಿ ನೇಮಕಾತಿಗಳಿಗಾಗಿ ಅರ್ಜಿಯನ್ನು ಕರೆದು ನೇಮಕಾತಿಯ ಪ್ರಕ್ರಿಯೆಯನ್ನು

ಪೂರ್ಣಗೊಳಿಸಿ, ನೇಮಕಾತಿ ಆದೇಶಗಳನ್ನು ಹೊರಡಿಸಿರುವುದಿಲ್ಲವೋ ಅಂತಹ ಪ್ರಕರಣಗಳಲ್ಲಿ ಈ ಹೆಚ್ಚೋಲೆಯು ಅನ್ವಯವಾಗುತ್ತದೆಂದು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್. ಭಾಸ್ಕರ್,

ಸರ್ಕಾರದ ಅಧೀನ ಕಾರ್ಯದರ್ಶಿ-2(ಪ್ರ)

ಪಿ.ಆರ್. 1545 ಸಮಾಜ ಕಲ್ಯಾಣ ಇಲಾಖೆ.

ಕಂದಾಯ ಸಚಿವಾಲಯ

ವಿಷಯ : ಶ್ರೀ ಆರ್. ಶಿವಪ್ರಕಾಶ್, ನಿವೃತ್ತ ತಹಶೀಲ್ದಾರ್, ಗ್ರೇಡ್-2 ಹುದ್ದೆಯಿಂದ ಇವರಿಗೆ ಗ್ರೇಡ್-1 ಹುದ್ದೆಗೆ ಪೂರ್ವಾನ್ವಯವಾಗಿ ಬಡ್ತಿ ನೀಡುವ ಬಗ್ಗೆ.

ಓದಲಾಗಿದೆ :
1) ಶ್ರೀ ಆರ್. ಶಿವಪ್ರಕಾಶ್, ತಹಶೀಲ್ದಾರ್ ಗ್ರೇಡ್-2 ಇವರ ಮನವಿ ದಿನಾಂಕ : 07-06-2010.
2) ಸರ್ಕಾರದ ಪತ್ರ ದಿನಾಂಕ : 19-04-2011ರಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದ ಸಹಮತಿ ಕೋರಿರುವ ಬಗ್ಗೆ.
3) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ 217 ಸಿಎನ್‌ಎಸ್ 2010, ದಿನಾಂಕ : 31-05-2011.

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ : (1)ರಂತೆ, ಶ್ರೀ ಆರ್. ಶಿವಪ್ರಕಾಶ್, ನಿವೃತ್ತ ತಹಶೀಲ್ದಾರ್, ಗ್ರೇಡ್-2 ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರುರವರು ದಿನಾಂಕ : 07-06-2010ರಂದು ಮನವಿ ಸಲ್ಲಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಡಿ 139 ಎಎಸ್‌ಡಿ 2007, ದಿನಾಂಕ : 03-06-2010ರನ್ವಯ ದಿನಾಂಕ : 21-01-2001 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ತಹಶೀಲ್ದಾರ್ ಗ್ರೇಡ್-2ಕ್ಕೆ ಬಡ್ತಿ ನೀಡಿ ಆದೇಶಿಸಲಾಗಿತ್ತು. ಜೇಷ್ಠತೆಯಲ್ಲಿ ತಮಗಿಂತ ಕಿರಿಯರಾದ ತಹಶೀಲ್ದಾರ್ ಗ್ರೇಡ್-2 ರವರಿಗೆ ತಹಶೀಲ್ದಾರ್ ಗ್ರೇಡ್-1 ಹುದ್ದೆಗೆ ಬಡ್ತಿ ನೀಡಿದ್ದು, ಶ್ರೀ ಎ. ವೈ. ಪಟಗೋಡಿ, ಜೇಷ್ಠತಾ ಸಂಖ್ಯೆ : 3336 ರವರಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಡಿ 308 ಎಎಸ್‌ಡಿ 2007, ದಿನಾಂಕ : 24-12-2007ರಲ್ಲಿ ಗ್ರೇಡ್-2 ತಹಶೀಲ್ದಾರ್ ವೃಂದದಿಂದ ಗ್ರೇಡ್-2 ತಹಶೀಲ್ದಾರ್ ವೃಂದಕ್ಕೆ ದಿನಾಂಕ : 24-12-2007ರಿಂದ ಜಾರಿಗೆ ಬರುವಂತೆ ಆದೇಶ ಮಾಡಿರುವುದರಿಂದ ಇವರಿಗಿಂತ ಹಿರಿಯರಾದ ಶ್ರೀ ಆರ್. ಶಿವಪ್ರಕಾಶ್ ಜೇಷ್ಠತಾ ಪಟ್ಟಿ ಸಂಖ್ಯೆ : 3295, ರವರಿಗೆ ದಿನಾಂಕ : 24-12-2007 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ (ಆರ್.ಪಿ.ಪಿ.) ನಿಯಮಾವಳಿಗಳು 1978ರ ನಿಯಮ 2(1)(ಎ) ರನ್ವಯ ಗ್ರೇಡ್-2 ತಹಶೀಲ್ದಾರ್ ಹುದ್ದೆಯಿಂದ ಗ್ರೇಡ್-1 ತಹಶೀಲ್ದಾರ್ ಹುದ್ದೆಗೆ ಪರಿಗಣಿಸಿ ಜೇಷ್ಠತೆಯಲ್ಲಿ ತಮಗಿಂತ ಕಿರಿಯರಾದ ಅಧಿಕಾರಿಗಳಿಗೆ ಬಡ್ತಿ ನೀಡಿರುವುದರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಪದೋನ್ನತಿ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ : (2)ರ ಸರ್ಕಾರದ ದಿನಾಂಕ : 19-04-2011ರ ಪತ್ರದಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದ ಸಹಮತಿಯನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಕರ್ನಾಟಕ ಲೋಕ ಸೇವಾ ಆಯೋಗದ ದಿನಾಂಕ : 31-05-2011ರ ಪತ್ರದಲ್ಲಿ, ಸರ್ಕಾರದ ಪ್ರಸ್ತಾವನೆಯನ್ನು ಆಯೋಗವು ಸರ್ಕಾರದ ಪ್ರಸ್ತಾವನೆಗೆ ಸಹಮತ ನೀಡಿದೆ ಎಂದು ತಿಳಿಸಿರುತ್ತಾರೆ.

ಮೇಲ್ಕಂಡ ಅಂಶವನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 408 ಎಎಸ್‌ಡಿ 2010, ಬೆಂಗಳೂರು, ದಿನಾಂಕ: 26-05-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಆರ್. ಶಿವಪ್ರಕಾಶ್, ನಿವೃತ್ತ ತಹಶೀಲ್ದಾರ್ ರವರಿಗೆ ದಿನಾಂಕ : 24-12-2007 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ (ಆರ್.ಪಿ.ಪಿ.) ನಿಯಮಾವಳಿಗಳು 1978ರ ನಿಯಮ 2(1)(ಎ)ರನ್ವಯ ತಹಶೀಲ್ದಾರ್ ಗ್ರೇಡ್-1 ಹುದ್ದೆಗೆ ಪೂರ್ವಾನ್ವಯವಾಗಿ ಪದೋನ್ನತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ವಿ. ರಾಮಲಿಂಗಯ್ಯ,

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1551 ಕಂದಾಯ ಇಲಾಖೆ (ಸೇವೆಗಳು-3)